ಸೋಮವಾರ, ಜೂನ್ 30, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಫೈನಲ್‌ಗೆ ಆಯುಷ್

ಭಾರತದ ಆಯುಷ್ ಶೆಟ್ಟಿ ಅವರು ಭಾನುವಾರ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು

ಬಾಕ್ಸಿಂಗ್: ಸೆಮಿಗೆ ನಿಖತ್

ಹೈದರಾಬಾದ್‌ನಲ್ಲಿ ಭಾನುವಾರ ನಡೆದ ಎಲೀಟ್ ಮಹಿಳಾ ಬಾಕ್ಸಿಂಗ್ ಟೂರ್ನಿಯ 51 ಕೆ.ಜಿ ವಿಭಾಗದ ಸೆಮಿಫೈನಲ್ ಪ್ರವೇಶಿಸಿದ ಭಾರತದ ನಿಖತ್ ಜರೀನ್

ದಿವಂಗತ ವೈದ್ಯರಾಜ್
ಕೃಷ್ಣಶಾಸ್ತ್ರಿ ಪುರಾಣಿಕ್
(1839-1905)

ದಿವಂಗತ ವೈದ್ಯರಾಜ್
ವಿಷ್ಣುಶಾಸ್ತ್ರಿ ಪುರಾಣಿಕ್
(1864-1914)

ದಿವಂಗತ ವೈದ್ಯರಾಜ್
ರಂಭೌ ಪುರಾಣಿಕ್
(1883-1933)

ದಿವಂಗತ ವೈದ್ಯರಾಜ್
ಗಂಗಾಧರ್ ಪುರಾಣಿಕ್
(1907-1980)

ದಿವಂಗತ ವೈದ್ಯರಾಜ್
ಮಹದೇವ್ ಪುರಾಣಿಕ್
(1912-1987)


ದಿವಂಗತ
ಆನಂದ್ ಪುರಾಣಿಕ್
(1937-2023)

Dhootapapeshwar

150 ವರ್ಷಗಳ ಆಯುರ್ವೇದದ ಶ್ರೇಷ್ಠತೆ

ಆಯುರ್ವೇದದ ನಿರಂತರ ಅಭ್ಯಾಸವೇ, ಪ್ರತಿತಲೆಮಾರಿಗೆ ನಂಬಿಕೆಯಾಗಿ ಉಳಿದಿದೆ

अभ्यासात्प्राप्यते दृष्टिः कर्मसिद्धिप्रकाशिनी।
रत्नादिसदसज्ज्ञानं न शास्त्रादेव जायते।।
– Ashtang Hruday (6 CE)

ಶಾಸ್ತ್ರದ ಅಧ್ಯಯನದ ಜೊತೆಗೆ ಚಿಕಿತ್ಸೆಗೆ ಬೇಕಾದ ಕರ್ಮಸಿದ್ಧಿಯು ನಿರಂತರ ಅಭ್ಯಾಸದಿಂದ ಲಭಿಸುತ್ತದೆ.

ಆಯುರ್ವೇದ ಔಷಧಿ ನಿರ್ಮಾಣದಲ್ಲಿ ಅಪ್ರತಿಮ ಮಾನದಂಡವನ್ನು ಸ್ಥಾಪಿಸುವಂತಹ ನಮ್ಮ ಸಂಸ್ಥಾಪಕರ ದೃಷ್ಟಿಕೋನಕ್ಕೆ ನಮ್ಮ ಗೌರವಪೂರ್ಣ ನಮನಗಳು.

ಆಯುರ್ವೇದ ವೈದ್ಯರ ವಿಶ್ವಸನೀಯ ಶ್ರೀ ಧೂತಪಾಪೇಶ್ವರ ಲಿಮಿಟೆಡ್
ಇ೫೦ಕ್ಕೂ ಹೆಚ್ಚು ಆಯುರ್ವೇದ ಔಷಧಿಗಳ ನಿರ್ಮಾತರು

Corporate Advt F25FDAd 32.5x47K469

ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಲು ಸ್ಕ್ಯಾನ್ ಮಾಡಿ

Mfd. by: OM PHARMACEUTICALS LTD. 12th Mile, Old Madras Road, Bengaluru - 560049, INDIA | Office of Cunsumer Care Desk & Mktd. by (TM Owner) & Office of Consumer Care Desk: SHREE DHOOTAPAPESHWAR LTD. 135, Nanubhai Desai Rd., Khetwadi, Mumbai-400004. Tel.: +91-22-23829874 (Mon to Fri from 10 am to 5 pm, except holidays) E-mail: healthcare@sdlindia.com Follow us on: sdlconsumerayurved www.sdlindia.com

ಚಟಿಕೆ ಸುದ್ದಿ

ರಸ್ತೆಯಲ್ಲಿ ಗೋವಿನ ರುಂಡ ಪತ್ತೆ

ಬ್ರಹ್ಮಾವರ (ಉಡುಪಿ): ಇಲ್ಲಿನ ಕುಂಜಾಲು ಮುಖ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ಗೋವಿನ ರುಂಡ ಹಾಗೂ ದೇಹದ ಭಾಗಗಳು ಪತ್ತೆಯಾಗಿವೆ.

ಕುಂಜಾಲು ರಾಮಮಂದಿರದ ಬಳಿಯ ಆಟೊ ನಿಲ್ದಾಣ ಸಮೀಪದ ರಸ್ತೆಯಲ್ಲಿ ದನದ ಕತ್ತರಿಸಿದ ತಲೆ ಮತ್ತು ಕಾಲುಗಳು ಪತ್ತೆಯಾಗಿದ್ದು, ಕೂಡಲೇ ಸ್ಥಳೀಯರು ಬ್ರಹ್ಮಾವರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಆಸುಪಾಸಿನಲ್ಲಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಸ್ಥಳಕ್ಕೆ ಭಾನುವಾರ ಭೇಟಿ ನೀಡಿದ ಶಾಸಕ ಯಶ್‌ಪಾಲ್ ಸುವರ್ಣ ಅವರು ಹಿಂದೂಪರ ಹಾಗೂ ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿ, ಘಟನೆಯನ್ನು ಖಂಡಿಸಿದರು. ಆರೋಪಿಗಳನ್ನು 24 ಗಂಟೆಯೊಳಗೆ ಬಂಧಿಸುವಂತೆ ಸಭೆಯಲ್ಲಿ ಆಗ್ರಹಿಸಲಾಯಿತು.

ಘಟನೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಘವೇಂದ್ರ ಶೆಟ್ಟಿ ಕರ್ಜೆ ನೇತೃತ್ವದಲ್ಲಿ ಪೊಲೀಸರಿಗೆ ದೂರು ನೀಡಲಾಗಿದೆ.

ಬಿಜೆಪಿ ಮುಖಂಡನ ವಿರುದ್ಧ ಎಫ್‌ಐಆರ್

ಲೋಕಿಕೆರೆ ನಾಗರಾಜ್

ದಾವಣಗೆರೆ: ಕೈಯಲ್ಲಿ ಕಲ್ಲು ಹಿಡಿದು ಜನರಲ್ಲಿ ಭೀತಿ ಸೃಷ್ಟಿಸಿ, ಒತ್ತಾಯ ಪೂರ್ವಕವಾಗಿ 'ದಾವಣಗೆರೆ ಬಂದ್' ನಡೆಸಿದ ಆರೋಪದಡಿ ಬಿಜೆಪಿ ರೈತ ಮೋರ್ಚಾದ ರಾಜ್ಯ ಘಟಕದ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ವಿರುದ್ಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಭದ್ರಾ ಬಲದಂಡೆ ನಾಲೆ ಸೀಳಿ ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವುದನ್ನು ವಿರೋಧಿಸಿ ಬಿಜೆಪಿ ರೈತ ಮೋರ್ಚಾ ಮತ್ತು ಜಿಲ್ಲಾ ರೈತ ಒಕ್ಕೂಟದ ವತಿಯಿಂದ ಶನಿವಾರ 'ದಾವಣಗೆರೆ ಬಂದ್'ಗೆ ಕರೆ ನೀಡಲಾಗಿತ್ತು. ಈ ವೇಳೆ ಕೆಲವರು ಬಸ್, ಆಟೊ ಚಾಲಕರು ಹಾಗೂ ವ್ಯಾಪಾರಿಗಳನ್ನು ಬೆದರಿಸಿದ್ದರು.

'ಉದ್ದೇಶಪೂರ್ವಕವಾಗಿ ಭೀತಿ ಸೃಷ್ಟಿಸಿದ ಮತ್ತು ಅಪರಾಧಿಕ ಕೃತ್ಯದಲ್ಲಿ ತೊಡಗಿದ ಆರೋಪದ ಮೇರೆಗೆ ಲೋಕಿಕೆರೆ ನಾಗರಾಜ್ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿ ಎಫ್‌ಐಆರ್ ಹಾಕಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

'ಅನಾಹುತಕ್ಕೆ ಮುನ್ನ ಕ್ರಮ ಕೈಗೊಳ್ಳಿ'

ಮಂಡ್ಯ: 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯ 'ಒಳನೋಟ'ದಲ್ಲಿ ಪ್ರಕಟವಾಗಿದ್ದ 'ಸೋರುವ ಕೊಠಡಿಯಲ್ಲೇ ಕಲಿಕೆ' ವಿಶೇಷ ವರದಿಯನ್ನು ಜಾಲತಾಣಗಳಲ್ಲಿ ಹಂಚಿಕೊಂಡಿರುವ ಬಿಜೆಪಿ ರಾಜ್ಯ ಘಟಕವು, ಸರ್ಕಾರದ ವಿರುದ್ಧ ತೀವ್ರ ಕಿಡಿಕಾರಿದೆ.

'ಭ್ರಷ್ಟ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಶಿಕ್ಷಣ ಇಲಾಖೆ ಅಧೋಗತಿ ತಲುಪಿದ್ದು, ರಾಜ್ಯಾದ್ಯಂತ 21,255 ಶಾಲಾ ಕೊಠಡಿಗಳು ಶಿಥಿಲಾವಸ್ಥೆಗೊಂಡು, ಕುಸಿಯಲು ಕ್ಷಣಗಣನೆ ಆರಂಭವಾಗಿದೆ. ಸರ್ಕಾರ ಮಲಗಿರುವ ಪರಿಣಾಮ ಮಳೆಗಾಲದಲ್ಲಿ ಶಾಲಾ ಕೊಠಡಿಗಳ ಪರಿಸ್ಥಿತಿ ಹೇಳ ತೀರದಾಗಿದೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಕಡೆಗಣನೆಯಿಂದ ಮಕ್ಕಳು ಜೀವಭಯದಲ್ಲಿ ಪಾಠ ಕೇಳಬೇಕಾಗಿದೆ' ಎಂದು ಆರೋಪಿಸಿದೆ.

'ಸಿಎಂ ತವರು ಜಿಲ್ಲೆಯಲ್ಲಿ 1,716, ಶಿಕ್ಷಣ ಸಚಿವರ ಜಿಲ್ಲೆ ಶಿವಮೊಗ್ಗದಲ್ಲಿ 426 ಕೊಠಡಿಗಳು ದುಸ್ಥಿತಿಯಲ್ಲಿರುವುದು ದುರಂತ. ಈ ಕಾಂಗ್ರೆಸ್ ಸರ್ಕಾರ ರಾಜ್ಯಕ್ಕೆ ಹಿಡಿದಿರುವ ಗ್ರಹಣ, ಕನ್ನಡಿಗರಿಗೆ ಅಂಟಿರುವ ಶಾಪ. ಸಚಿವ ಮಧು ಬಂಗಾರಪ್ಪ ಅವರು ತೊಲಗುವವರೆಗೂ ಮಕ್ಕಳಿಗೆ ಭವಿಷ್ಯವಿಲ್ಲ.! ಸಿಎಂ ಸಿದ್ದರಾಮಯ್ಯನವರೇ, ಕೂಡಲೇ ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತು ಕ್ರಮ ಕೈಗೊಳ್ಳಿ' ಎಂದು ಆಗ್ರಹಿಸಿದೆ.

ಹಾವು ಕಚ್ಚಿ ತಾಯಿ, ಮಗ ಸಾವು

ದೇವದುರ್ಗ(ರಾಯಚೂರು ಜಿಲ್ಲೆ): ತಾಲ್ಲೂಕಿನ ಹೇರುಂಡಿ ಗ್ರಾಮದಲ್ಲಿ ಹಾವು ಕಚ್ಚಿ ತಾಯಿ ಹಾಗೂ ಮಗ ಮೃತಪಟ್ಟಿದ್ದಾರೆ.

ಶನಿವಾರ ರಾತ್ರಿ ತಾಯಿ ಸುಬ್ಬಮ್ಮ (35), ಪುತ್ರ ಬಸವರಾಜ (10) ಮನೆಯಲ್ಲಿ ಮಲಗಿದ್ದಾಗ ಹಾವು ಕಚ್ಚಿದೆ. ಮನೆಯಲ್ಲಿದ್ದ ಉಳಿದವರು ಬೇರೆ ಕಡೆ ಮಲಗಿದ್ದರು.

ಮೃತ ಸುಬ್ಬಮ್ಮ ಅವರಿಗೆ ಪತಿ ಮತ್ತು ಇನ್ನೊಬ್ಬ ಮಗ ಇದ್ದಾರೆ.

ಸ್ವಗ್ರಾಮ ಹೇರುಂಡಿಯಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹18 ಕೋಟಿ ಸಮಗ್ರ ಯೋಜನೆ ಸಿದ್ಧ

ಒಂದು ಜಿಲ್ಲೆ ಒಂದು ತಾಣ: ಕಪ್ಪತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಮುಖ್ಯಾಂಶಗಳು

- ಗೋಲ್ಡ್ ಟೂರಿಸಂ, ಸಾಹಸಕ್ರೀಡೆಗಳಿಗೆ ಸೌಕರ್ಯ ಸೃಷ್ಟಿ
- ಔಷಧೀಯ ಸಸ್ಯಗಳ ದೈವಿವನ ನಿರ್ಮಾಣ
- ಮೈನಿಂಗ್ ಟೂರಿಸಂಗೂ ವ್ಯವಸ್ಥೆ

ಗದಗ: 'ಒಂದು ಜಿಲ್ಲೆ ಒಂದು ತಾಣ' ಪರಿಕಲ್ಪನೆ ಅಡಿ ಕಪ್ಪತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮ ಉತ್ತೇಜನಕ್ಕೆ ಗದಗ ಅರಣ್ಯ ಇಲಾಖೆ ₹18.26 ಕೋಟಿ ಮೊತ್ತದ ಸಮಗ್ರ ಯೋಜನೆ ಸಿದ್ಧಪಡಿಸಿದೆ.

ಕಳೆದ ಸಾಲಿನ ಬಜೆಟ್‌ನಲ್ಲಿ ಕಪ್ಪತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಅದರಂತೆ ಕಪ್ಪತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ, ಪ್ರವಾಸಿಗರಿಗೆ ಮೂಲಸೌಕರ್ಯ ಕಲ್ಪಿಸಲು ಕೈಗೊಳ್ಳಬೇಕಾದ ಕಾಮಗಾರಿ ಪಟ್ಟಿ ಹಾಗೂ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವಂತೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಅರಣ್ಯ ಇಲಾಖೆಯನ್ನು ಕೋರಿತ್ತು.

ಈ ಕಾರಣದಿಂದ ಅರಣ್ಯ ಇಲಾಖೆಯು ವನ್ಯಜೀವಿಗಳ ಸುಗಮ ಸಂಚಾರ ಮತ್ತು ಆವಾಸ ಸ್ಥಾನಕ್ಕೆ ಧಕ್ಕೆ ಆಗದಂತೆ ನಿಯಮಾವಳಿಗಳ ಪ್ರಕಾರ ಯೋಜನೆ ಸಿದ್ಧಪಡಿಸಿತ್ತು. ಇದಕ್ಕೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ಅನುಮೋದನೆ ಸಿಕ್ಕಿದ್ದು, ಅನುದಾನ ಹಂಚಿಕೆ ಕೋರಿ ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಕೆಯಾಗಿದೆ.

ಕೆಲ ರಾಜ್ಯಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಲು 'ಒಂದು ಜಿಲ್ಲೆ ಒಂದು ತಾಣ' (ಒನ್ ಡಿಸ್ಟ್ರಿಕ್ಟ್ ಒನ್ ಡೆಸ್ಟಿನೇಷನ್) ಪರಿಕಲ್ಪನೆ ಯಶಸ್ವಿಯಾಗಿದೆ. ಅದರಂತೆ, ಗದಗ ಜಿಲ್ಲೆಯ ಅಸ್ಮಿತೆಯಂತಿರುವ ಕಪ್ಪತಗುಡ್ಡ ಗದಗ ತಾಲ್ಲೂಕಿನ ಬಿಂಕದಕಟ್ಟಿಯಿಂದ ಮುಂಡರಗಿ ತಾಲ್ಲೂಕಿನ ತುಂಗಭದ್ರಾ ನದಿ ಹಾದು ಹೋಗುವ ಸಿಂಗಟಾಲೂರಿನವರೆಗೆ ವ್ಯಾಪಿಸಿದ್ದು, ಕಪ್ಪತಗುಡ್ಡ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಸಮಗ್ರ ವರದಿ ರೂಪಿಸಲಾಗಿದೆ ಎನ್ನುತ್ತಾರೆ ಅರಣ್ಯ ಇಲಾಖೆ ಅಧಿಕಾರಿಗಳು.

ಯಾವೆಲ್ಲ ಸೌಕರ್ಯಗಳು ಇರಲಿವೆ?: ಯೋಜನೆ ಅನುಸಾರ ಗಾಳಿಗುಂಡಿ ಬಸವಣ್ಣ, ಕಪ್ಪತಮಲ್ಲೇಶ್ವರ ದೇವಸ್ಥಾನ ಹಾಗೂ ದೈವಿವನ ಕೇಂದ್ರೀಕರಿಸಿಕೊಂಡು ಸೈಟ್ ಎ, ಬಿ, ಸಿ ಎಂದು ವರ್ಗೀಕರಿಸಿ, ಅಲ್ಲಿ ವಿವಿಧ ಸೌಕರ್ಯ ಕಲ್ಪಿಸಲು ಯೋಜಿಸಲಾಗಿದೆ. ಸೈಟ್ ಎ ಭಾಗದಲ್ಲಿ ಪ್ರವೇಶದ್ವಾರ, ಮಾಹಿತಿ ಕೇಂದ್ರ, ಚಾರಣ ಮಾರ್ಗಗಳು, ಔಷಧೀಯ ಸಸ್ಯಗಳ ಪ್ರವಾಸೋದ್ಯಮ, ಗೋಲ್ಡ್ ಟೂರಿಸಂ, ವ್ಯೂವ್ ಪಾಯಿಂಟ್, ಸಾಹಸಕ್ರೀಡೆಗಳಿಗೆ ಬೇಕಿರುವ ಸೌಕರ್ಯ ಸೃಷ್ಟಿಯಾಗಲಿದೆ.

ಸೈಟ್ ಬಿ ಭಾಗದಲ್ಲಿ ವನ್ಯಜೀವಿ ಮತ್ತು ಪ್ರಾಕೃತಿಕ ಮಾಹಿತಿಕೇಂದ್ರ, ಔಷಧೀಯ ಸಸ್ಯಗಳ ದೈವಿವನ ನಿರ್ಮಾಣ, ಔಷಧೀಯ ಸಸ್ಯಗಳ ಹೆಸರು, ಅದರ ಇನ್ನಿತರ ವೈಜ್ಞಾನಿಕ ಮಾಹಿತಿ ನೀಡುವ ಡಿಜಿಟಲ್ ಪ್ರದರ್ಶನ ವ್ಯವಸ್ಥೆ ಮಾಡಲಾಗುತ್ತದೆ. ಜತೆಗೆ ಕಪ್ಪತಗುಡ್ಡದ ಸುತ್ತಮುತ್ತ ನಾಟಿ ವೈದ್ಯರಿದ್ದು, ಚಿಕಿತ್ಸೆ ನೀಡಲು ಬೇಕಿರುವ ಸೌಕರ್ಯ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಸೈಟ್ ಸಿ ಭಾಗದಲ್ಲಿ ನೇಚರ್ ಕ್ಯಾಂಪ್‌ಗಳು, ವಸತಿ ವ್ಯವಸ್ಥೆ ಇರಲಿದೆ. ಇವೆಲ್ಲವೂ ಎಂಜಿನಿಯರಿಂಗ್ ವುಡ್‌ಬ್ಯಾಂಬು ಮೂಲಕ ನಿಸರ್ಗಸ್ನೇಹಿ ವ್ಯವಸ್ಥೆಯಲ್ಲಿ ನಿರ್ಮಾಣಗೊಳ್ಳಲಿವೆ. ಜತೆಗೆ ಕಾಡಿನಲ್ಲಿ ಕುಳಿತು ನಕ್ಷತ್ರಗಳ ಅಧ್ಯಯನ ಮಾಡಲು ನೆರವಾಗುವಂತೆ ಐದು ಅಂತಸ್ತಿನ ನಕ್ಷತ್ರ ಅಧ್ಯಯನ ಗೋಪುರ ನಿರ್ಮಾಣ ಹಾಗೂ ರೋಮಾಂಚನಕಾರಿ ಮೈನಿಂಗ್ ಟೂರಿಸಂಗೂ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ.

ಗೋಲ್ಡ್ ಟೂರಿಸಂ ಮತ್ತು ಉದ್ದೇಶಿತ ನಕ್ಷತ್ರ ಅಧ್ಯಯನ ಗೋಪುರ ನಿರ್ಮಾಣದ ಎಐ ಚಿತ್ರ

> ಸಮಗ್ರ ಯೋಜನೆ ಡಿಪಿಆರ್ ಅನುಮೋದನೆ ಹಂತದಲ್ಲಿದೆ. ಚಾರಣ ಮಾರ್ಗ ನಿರ್ಮಾಣ ಸೇರಿದಂತೆ ಇಲಾಖೆಯಿಂದ ಏನು ಮಾಡಬೇಕೋ ಅದನ್ನು ಮಾಡಲಾಗುತ್ತಿದೆ
> **ಸಂತೋಷ್ ಕುಮಾರ್,** ಡಿಸಿಎಫ್, ಗದಗ

> ಪ್ರವಾಸಿಗರ ಅನುಕೂಲಕ್ಕಾಗಿ ಕಪ್ಪತಗುಡ್ಡಕ್ಕೆ ಪ್ರತ್ಯೇಕವಾದ ವೆಬ್‌ಸೈಟ್, ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗುವುದು
> **ಮಂಜುನಾಥ ಮೇಗಲಮನಿ, ಆರ್‌ಎಫ್‌ಒ,** ಮುಂಡರಗಿ

ಬಿಜೆಪಿ ಮುಖಂಡ ನಳಿನ್‌ಕುಮಾರ್ ಕಟೀಲ್ ಆರೋಪ

'ಶೇ 80ರಷ್ಟು ಕಮಿಷನ್ ವ್ಯವಹಾರ'

ಪ್ರಜಾವಾಣಿ ವಾರ್ತೆ

ನಳಿನ್‌ಕುಮಾರ್ ಕಟೀಲ್

ಕೊಪ್ಪಳ: 'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಇದೆ ಎಂದು ಕಾಂಗ್ರೆಸ್ ವಿನಾಕಾರಣ ಆರೋಪ ಮಾಡಿತ್ತು. ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ ಶೇ 80ರಷ್ಟು ಕಮಿಷನ್ ವ್ಯವಹಾರ ನಡೆಯುತ್ತಿದೆ' ಎಂದು ಬಿಜೆಪಿ ಮುಖಂಡ ನಳಿನ್ ಕುಮಾರ್ ಕಟೀಲ್ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಧಿಕಾರಕ್ಕಾಗಿ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ಕಚ್ಚಾಟ ನಡೆಯುತ್ತಿದೆ. ಸಿದ್ದರಾಮಯ್ಯಗೆ ಅಧಿಕಾರ ನಡೆಸಲು ಶಿವಕುಮಾರ್ ಬಿಡುತ್ತಿಲ್ಲ, ಡಿಕೆಶಿ ಮುಖ್ಯಮಂತ್ರಿಯಾಗಲು ಸಿದ್ದರಾಮಯ್ಯ ಅವಕಾಶ ಕೊಡುವುದಿಲ್ಲ. ಇವರ ಗುದ್ದಾಟದಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಹೀನವಾಗಿದೆ. ಈಗಿನ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಅವರ ಪಕ್ಷದವರೇ ಹೇಳುತ್ತಿದ್ದಾರೆ. ಇದಕ್ಕಿಂತ ಇನ್ನೇನು ಸಾಕ್ಷ್ಯ ಬೇಕು' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಬೇರೆ ಪಕ್ಷಗಳಲ್ಲಿ ಅಧಿಕಾರ ಬಳಸಿಕೊಂಡು ಕಾಂಗ್ರೆಸ್‌ಗೆ ಬಂದು ಮುಖ್ಯಮಂತ್ರಿಯಾಗಿದ್ದಾರೆ. ಅವರು ಸಮಾಜವಾದಿ ನಾಯಕರಲ್ಲ; ಮಜಾವಾದಿಯಾಗಿದ್ದಾರೆ' ಎಂದರು.

'ಡಿಸೆಂಬರ್ ನಂತರ ಬಿಜೆಪಿ ಸರ್ಕಾರ'

ಚಳ್ಳಕೆರೆ (ಚಿತ್ರದುರ್ಗ): 'ವಿಧಾನಸಭಾ ಚುನಾವಣೆಗೆ 2028ರವರೆಗೂ ಕಾಯಬೇಕಾಗಿಲ್ಲ. ಡಿಸೆಂಬರ್ ಬಳಿಕ ಯಾವುದೇ ಕ್ಷಣದಲ್ಲಾದರೂ ಚುನಾವಣೆ ಎದುರಾಗಬಹುದು' ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

'ಬಿಜೆಪಿಯು 150 ಶಾಸಕರ ಬಲದೊಂದಿಗೆ ಸರ್ಕಾರ ರಚಿಸುವ ವಿಶ್ವಾಸ ಇದೆ. ಕಾಂಗ್ರೆಸ್ ಸರ್ಕಾರ ಈವರೆಗೂ ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡಿಲ್ಲ. ಸ್ವಪಕ್ಷೀಯ ಶಾಸಕರೇ ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇದನ್ನು ನೋಡಿದರೆ ರಾಜ್ಯ ಸರ್ಕಾರ ಶೀಘ್ರ ಪತನಗೊಳ್ಳಲಿದೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ ಕಾನೂನು- ಸುವ್ಯವಸ್ಥೆ ಕುಸಿದಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಜನ ಶಾಪ ಹಾಕುತ್ತಿದ್ದಾರೆ' ಎಂದರು.

'ಕಾಂಗ್ರೆಸ್‌ನಲ್ಲಿ ಬೆಂಕಿ ಹೊತ್ತಿಕೊಂಡಿದೆ'

ತುಮಕೂರು: 'ಕಾಂಗ್ರೆಸ್‌ನಲ್ಲಿ ಬರೀ ಹೊಗೆಯಾಡುತ್ತಿಲ್ಲ, ಬೆಂಕಿ ಹೊತ್ತಿಕೊಂಡಿದೆ. ಅದು ಯಾವ ರೀತಿ ಎಂದು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ' ಎಂದು ಕೇಂದ್ರ ಜಲ ಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ 'ಸೆಪ್ಟೆಂಬರ್ ಕ್ರಾಂತಿ' ಹೇಳಿಕೆಗೆ ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಆಡಳಿತ ವ್ಯವಸ್ಥೆ ಕುಸಿದಾಗ ಇಂತಹ ಮಾತು ಕೇಳಿ ಬರುವುದು ಸಹಜ ಎಂದರು. ಪಾಪದ ಕೊಡ ತುಂಬಿದಾಗ ಹಾಗೂ ಜನಸಾಮಾನ್ಯರ ನೋವಿನ ಶಾಪ ತಟ್ಟಿದಾಗ ಸರ್ಕಾರದ ಹಂತದಲ್ಲಿ ಇಂತಹ ಸಮಸ್ಯೆಗಳು ಸೃಷ್ಟಿಯಾಗುತ್ತವೆ ಎಂದು ವಿಶ್ಲೇಷಿಸಿದರು.

'ಬಿಜೆಪಿಯಲ್ಲಿ ಯಾವ ಕ್ರಾಂತಿಯೂ ಆಗುವುದಿಲ್ಲ. ಸಿದ್ಧಾಂತ ಮತ್ತು ಹೈಕಮಾಂಡ್ ತೀರ್ಮಾನದಂತೆ ನಡೆಯುತ್ತಿರುವ ಪಕ್ಷ ನಮ್ಮದು' ಎಂದರು.

'ಮಧ್ಯಂತರ ಚುನಾವಣೆ'

ಬಾಗಲಕೋಟೆ: 'ಮುಖ್ಯಮಂತ್ರಿಯ ಅಧಿಕಾರ ಹಸ್ತಾಂತರದಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ. ನವೆಂಬರ್ ವೇಳೆಗೆ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯಲಿದೆ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೆಪ್ಟೆಂಬರ್ ನಂತರ ಕ್ರಾಂತಿಯಾಗಲಿದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ. ಕುರ್ಚಿಗಾಗಿ ನಡೆದಿರುವ ಕಿತ್ತಾಟವೂ ಚುನಾವಣೆಗೆ ಕಾರಣವಾಗಲಿದೆ' ಎಂದರು.

'ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗೆ ಬಿಜೆಪಿ ಸಿದ್ಧವಾಗಿದೆ. ವಿಧಾನಸಭೆ ಚುನಾವಣೆಯಲ್ಲಿಯೂ ಗೆದ್ದು ಬಿಜೆಪಿ ಅಧಿಕಾರಕ್ಕೆ ಬರಲಿದೆ. ಬಿಹಾರ ವಿಧಾನಸಭಾ ಚುನಾವಣೆಗೆ ಹಣ ಕೊಡಲು ರಾಜ್ಯದಲ್ಲಿ ವಸೂಲಿ ಹೆಚ್ಚಿಸಿದ್ದಾರೆ' ಎಂದು ಹೇಳಿದರು.

'ಜೀವ ಇರುವುದೇ ಬಿಜೆಪಿಯಲ್ಲಿ'

ಬಳ್ಳಾರಿ: 'ನನ್ನ ಜೀವ ಇರುವುದೇ ಬಿಜೆಪಿಯಲ್ಲಿ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಬಿಟ್ಟು ನಾನೆಲ್ಲಿಗೆ ಹೋಗಲಿ? ಪಕ್ಷದ ಕೆಲವು ಹಿರಿಯರು ನನ್ನೊಂದಿಗೆ ಚರ್ಚಿಸುವುದಾಗಿ ಹೇಳಿದ್ದಾರೆ. ಕೆಲ ಕಾಂಗ್ರೆಸ್ ಮುಖಂಡರು, ಸಚಿವರು ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದ್ದರು. ಎಸ್‌ಪಿ ನಾಯಕ ಅಖಿಲೇಶ್ ಸಹ ಆಹ್ವಾನ ನೀಡಿದ್ದರು. ನನ್ನದು ಹಿಂದುತ್ವವಾದ. ಬೇರೆ ಪಕ್ಷಗಳಿಗೆ ಹೇಗೆ ಹೋಗಲಿ? ಎಂದರು.

ಸುದ್ದಿ 2 ನಿಮಿಷ

'ಮತ್ತೆ ಮುಖ್ಯಮಂತ್ರಿ ಎದುರು ಮಂಡಿಯೂರಿ ಮೀಸಲಾತಿ ಕೇಳಲ್ಲ'

ಗದಗ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸ್ಪಷ್ಟವಾಗಿ ಹೇಳಿಬಿಟ್ಟಿದೆ. ಹಾಗಂತ, ನಮ್ಮ ಮೀಸಲಾತಿ ಹೋರಾಟ ನಿಲ್ಲುವುದಿಲ್ಲ. ಮತ್ತೆ ಅವರ ಮುಂದೆ ಮಂಡಿಯೂರಿ ಕುಳಿತು ಮೀಸಲಾತಿ ಕೊಡಿ ಅಂತ ಕೇಳುವುದಕ್ಕಿಂತ ಮುಂದೆ ಯಾವ ಸಿಎಂ ಬಂದರೆ ನಮಗೆ ಅನುಕೂಲ ಆಗಲಿದೆ ಎಂಬುದರ ಬಗ್ಗೆ ನಿರ್ಣಯಿಸಲು ಜನಜಾಗೃತಿ ಮೂಡಿಸಲಾಗುವುದು' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆಗೆ ಸ್ಪಂದಿಸುವ ಪ್ರತಿನಿಧಿಗಳನ್ನು ಬೆಂಬಲಿಸುವ ಸಂಬಂಧ ಈ ಭಾಗದ 10 ಜಿಲ್ಲೆಗಳಲ್ಲಿ ಸಮಾಜದ ಮನೆ ಮನೆಗೆ ಹೋಗಿ, ಆಗಿರುವ ಅನ್ಯಾಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು. 2028ರಲ್ಲಿ ಅಧಿಕಾರಕ್ಕೆ ಬರುವ ಸರ್ಕಾರದಿಂದ ನಮ್ಮ ಬೇಡಿಕೆ ಈಡೇರಿಸಿಕೊಳ್ಳುವ ಪ್ರಯತ್ನಕ್ಕೆ ಇದು ಮುಖ್ಯವಾಗಲಿದೆ' ಎಂದರು. 'ಜಾತಿ ಗಣತಿ ವೇಳೆ ಪಂಚಮಸಾಲಿ ಸಮಾಜದವರು ಜಾತಿ ಕಾಲಂನಲ್ಲಿ ಏನೆಂದು ಬರೆಸಬೇಕು ಎಂಬುದರ ಕುರಿತು ಶೀಘ್ರದಲ್ಲೇ ಸಭೆ ನಡೆಸಿ ತಿಳಿಸಲಾಗುವುದು' ಎಂದರು.

ಶಾಸಕ ಸಿ.ಸಿ.ಪಾಟೀಲ ಮಾತನಾಡಿದರು.

ಗಾಳಿಯಲ್ಲಿ ಗುಂಡು: ಬಂಧನ

ರಾಯಬಾಗ(ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕುಡಚಿಯಲ್ಲಿ ಗುರುವಾರ ನಡೆದ ಜನ್ಮದಿನದ ಸಂಭ್ರಮಾಚರಣೆಯಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿದ ಕುಡಚಿ ಗ್ರಾಮ ಪಂಚಾಯಿತಿ ಸದಸ್ಯ ಬಾಬಾಜಾನ್ ಕಾಲೆಮುಂಡಾಸೆ(48) ಎಂಬುವವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಬಾಬಾಜಾನ್ ಅವರು ಕೈಯಲ್ಲಿ ಬಂದೂಕು ಹಿಡಿದು, ಗಾಳಿಯಲ್ಲಿ ಗುಂಡು ಹಾರಿಸಿ ತಮ್ಮ ಜನ್ಮದಿನ ಆಚರಿಸಿಕೊಂಡಿದ್ದರು. ಕೆಲವರು ಇದರ ವಿಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು. ಅದನ್ನು ಆಧರಿಸಿ ಬಂಧಿಸಿದ್ದೇವೆ' ಎಂದು ಕುಡಚಿ ಪಿಎಸ್‌ಐ ಶಿವರಾಜ ಧರಿಗೊಂಡ ತಿಳಿಸಿದರು.

ರೋಗದ ಬಗ್ಗೆ ಎಚ್ಚರವಹಿಸಲು ಸೂಚನೆ

ಬೆಂಗಳೂರು: 'ಪ್ರವಾಹ ಪರಿಸ್ಥಿತಿಯಲ್ಲಿ ನೀರು, ಗಾಳಿ ಹಾಗೂ ಆಹಾರದಿಂದ ಹರಡುವ ರೋಗದ ಬಗ್ಗೆ ಎಚ್ಚರ ವಹಿಸಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದ ವಿವಿಧೆಡೆ ಮುಂಗಾರು ಮಳೆ ಬಿರುಸು ಪಡೆದ ಕಾರಣ ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿರುವ ಇಲಾಖೆ, 'ಪ್ರವಾಹ ಪರಿಸ್ಥಿತಿಯಲ್ಲಿ ನೀರು, ಗಾಳಿ ಹಾಗೂ ಆಹಾರದಿಂದ 'ಇನ್‌ಫ್ಲೂಯೆಂಜಾ' ಜ್ವರ, ಕ್ಷಯ ರೋಗ, ನ್ಯುಮೋನಿಯಾ, ಕಾಲರಾ, ಟೈಫಾಯ್ಡ್, ಅತಿಸಾರ ಸೇರಿ ವಿವಿಧ ರೋಗಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ನೀರನ್ನು ಕುದಿಸಿ ಅಥವಾ ಶುದ್ಧೀಕರಿಸಿ ಕುಡಿಯಬೇಕು. ಊಟ ಮಾಡುವ ಮೊದಲು ಮತ್ತು ಆಹಾರ ಸೇವಿಸುವ ಮುನ್ನ ಕೈಗಳನ್ನು ಸಾಬೂನು ಬಳಸಿ ತೊಳೆದುಕೊಳ್ಳಬೇಕು' ಎಂದು ಹೇಳಿದೆ.

ಕಡಲ ಕಿನಾರೆಯಲ್ಲಿ ಕಸ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಅರಬ್ಬಿ ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿದೆ. ಮಳೆಯಿಂದಾಗಿ ವಿವಿಧ ನದಿಗಳ ಮೂಲಕ ಸಮುದ್ರ ಸೇರಿದ್ದ ಕಸವನ್ನು ಅಲೆಗಳು ಮಂಗಳೂರಿನ ತಣ್ಣೀರು ಬಾವಿ ಕಡಲ ಕಿನಾರೆಗೆ ತಂದು ಸುರಿದಿವೆ

ಶ್ರೀರಾಮ ಸೇನೆ ಕಾರ್ಯಕರ್ತರಿಗೆ ಥಳಿತ

ಪ್ರಜಾವಾಣಿ ವಾರ್ತೆ

ಸಂಕೇಶ್ವರ/ಹುಕ್ಕೇರಿ (ಬೆಳಗಾವಿ ಜಿಲ್ಲೆ): ಹುಕ್ಕೇರಿ ತಾಲ್ಲೂಕಿನ ಇಂಗಳಿ ಗ್ರಾಮದಲ್ಲಿ ಶನಿವಾರ, ಯುವಕರ ಗುಂಪೊಂದು ಶ್ರೀರಾಮ ಸೇನೆಯ ಐವರು ಕಾರ್ಯಕರ್ತರನ್ನು ಮರಕ್ಕೆ ಕಟ್ಟಿ ಹಿಗ್ಗಾಮುಗ್ಗಾ ಥಳಿಸಿದೆ. ಇದರ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿವೆ.

'ಗೋ ಸಾಗಣೆ ತಡೆಯಲು ಮುಂದಾಗಿದ್ದಕ್ಕೆ ಹಲ್ಲೆ ಮಾಡಲಾಗಿದೆ' ಎಂದು ಶ್ರೀರಾಮ ಸೇನೆ ಕಾರ್ಯಕರ್ತರು ಆರೋಪಿಸಿದ್ದಾರೆ. 'ಈ ಘಟನೆಗೂ ಗೋ ರಕ್ಷಣೆಗೂ ಯಾವುದೇ ಸಂಬಂಧವಿಲ್ಲ. ಮಹಿಳೆ ಜತೆಗೆ ಅಸಭ್ಯವಾಗಿ ವರ್ತಿಸಿದ್ದಕ್ಕೆ ಥಳಿಸಲಾಗಿದೆ' ಎಂದು ಆರೋಪಿಗಳು ಹೇಳಿದ್ದಾರೆ. ಎರಡೂ ಕಡೆಯಿಂದ ದೂರು ದಾಖಲಾಗಿಲ್ಲ. ವಿಡಿಯೊ ಆಧರಿಸಿ ಯಮಕನಮರಡಿ ಠಾಣೆ ಪೊಲೀಸರೇ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಘಟನೆ ವಿವರ: ಮುಸ್ಲಿಂ ಯುವಕರು ಜೂನ್ 27ರಂದು ಗೋವುಗಳ ಸಾಗಾಟ ಮಾಡುತ್ತಿದ್ದಾಗ ಅದನ್ನು ತಡೆದ ಶ್ರೀರಾಮ ಸೇನೆ ಕಾರ್ಯಕರ್ತರು, ಗೋವುಗಳ ಸಹಿತವಾಗಿ ವಾಹನವನ್ನು ಹುಕ್ಕೇರಿ ಪೊಲೀಸ್ ಠಾಣೆಗೆ ತಂದಾಗ ಅವುಗಳನ್ನು ಬೆಳವಿ ಗೋಶಾಲೆಗೆ ಸಾಗಿಸಲಾಗಿತ್ತು. ಮಾರನೆಯ ದಿನ ಗೋಶಾಲೆಯಿಂದ ಮುಸ್ಲಿಂ ಯುವಕರು ಗೋವುಗಳನ್ನು ಮರಳಿ ಪಡೆದಿದ್ದರು.

ವಿಷಯ ತಿಳಿದ ಶ್ರೀರಾಮ ಸೇನೆ ಕಾರ್ಯಕರ್ತರು ಮತ್ತೆ ಗೋವುಗಳನ್ನು ಸಾಗಿಸುತ್ತಿದ್ದ ವಾಹನ ಬೆನ್ನಟ್ಟಿ ಹಿಡಿದರು. ಆಗ ಮುಸ್ಲಿಂ ಯುವಕರು ಹಾಗೂ ಶ್ರೀರಾಮ ಸೇನೆ ಕಾರ್ಯಕರ್ತರ ಮಧ್ಯೆ ಚಕಮಕಿ ನಡೆದಿತ್ತು. ಬಳಿಕ ಶಿವರಾಜ ಬಾಬಾಸಾಹೇಬ ನಾಯಿಕ ಎನ್ನುವವರು, 'ಈ ಗೋವುಗಳನ್ನು ಹೈನುಗಾರಿಕೆಗೆ ಖರೀದಿಸಿ ಒಯ್ಯುತ್ತಿರುವುದು ಖಚಿತ. ಇದರ ಬಗ್ಗೆ ನಮ್ಮ ತಕರಾರು ಇಲ್ಲ' ಎಂದು ಹುಕ್ಕೇರಿ ಠಾಣೆಗೆ ಮುಚ್ಚಳಿಕೆ ಬರೆದುಕೊಟ್ಟರು. ಈ ಎಲ್ಲ ಘಟನೆಗಳ ಬಳಿಕ ಶ್ರೀರಾಮ ಸೇನೆ ಕಾರ್ಯಕರ್ತರನ್ನು ಹಿಡಿದುಕೊಂಡು ಬಂದ ಯುವಕರು, ಇಂಗಳಿಯಲ್ಲಿ ಮರಕ್ಕೆ ಕಟ್ಟಿ, ಮನಸೋ ಇಚ್ಛೆ ಥಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, 'ಗೋ ರಕ್ಷಣೆ ಮಾಡಿದ್ದಕ್ಕೆ ಹೊಡೆದಾಟ ನಡೆದಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ, ದೂರು ನೀಡಿಲ್ಲ. ಮಹಿಳೆಯೊಂದಿಗೆ ಅಸಭ್ಯ ವರ್ತನೆ ಮಾಡಿದ್ದಕ್ಕೆ ಹೊಡೆದಿರುವುದಾಗಿ ಕೆಲವು ಯುವಕರು ಹೇಳಿದ್ದು ಆ ಬಗ್ಗೆಯೂ ದೂರು ಬಂದಿಲ್ಲ. ವಿಡಿಯೊ ಆಧರಿಸಿ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ' ಎಂದರು.

> ಸಮಾಜದಲ್ಲಿ ಶಾಂತಿ ಪಾಲನೆ ಮುಖ್ಯ. ತಪ್ಪು ಮಾಡಿದವರಿಗೆ ಕಾನೂನು ಪ್ರಕಾರ ಶಿಕ್ಷೆ ನೀಡಬೇಕೇ ಹೊರತು, ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು
> **ನಿಖಿಲ್ ಕತ್ತಿ,** ಶಾಸಕ

> ಆರೋಪಿಗಳನ್ನು ಈವರೆಗೆ ಬಂಧಿಸದಿರುವುದು ಸರಿಯಲ್ಲ. ಜೂನ್ 30ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಹೋರಾಟ ಮಾಡಲಾಗುವುದು
> **ಪ್ರಮೋದ ಮುತಾಲಿಕ,** ಮುಖ್ಯಸ್ಥ, ಶ್ರೀರಾಮ ಸೇನೆ

ಹಸುವಿನ ಕೆಚ್ಚಲು ಕೊಯ್ದ ಆರೋಪ

ಹೊಸನಗರ (ಶಿವಮೊಗ್ಗ): ಹಸುವಿನ ಕೆಚ್ಚಲು ಕೊಯ್ದ ಆರೋಪದಡಿ ತಾಲ್ಲೂಕಿನ ವಿಜಾಪುರ ಗ್ರಾಮದ ರಾಮಚಂದ್ರಪ್ಪ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಎಂದಿನಂತೆ ದನಗಳನ್ನು ಮೇಯಲು ಬಿಟ್ಟಿದ್ದೆವು. ಶನಿವಾರ ಸಂಜೆ ಊರಿನವರು ಕರೆ ಮಾಡಿ ಹಸುವಿನ ಕೆಚ್ಚಲಲ್ಲಿ ರಕ್ತ ಸೋರುತ್ತಿರುವುದಾಗಿ ತಿಳಿಸಿದ್ದರು. ಸ್ಥಳಕ್ಕೆ ಹೋಗಿ, ಗ್ರಾಮಸ್ಥರ ಸಹಾಯದಿಂದ ಹಸುವನ್ನು ಮನೆಗೆ ತಂದು ಚಿಕಿತ್ಸೆ ಕೊಡಿಸಿದ್ದೇವೆ' ಎಂದು ಹಸುವಿನ ಮಾಲೀಕ ತೋಟದಕೊಪ್ಪದ ಗಣೇಶ್ ದೂರಿನಲ್ಲಿ ತಿಳಿಸಿದ್ದರು.

'ರಾಮಚಂದ್ರಪ್ಪ ಅವರನ್ನು ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದೇವೆ. ಹಸು ಜಮೀನಿಗೆ ನುಗ್ಗಿ ಬೆಳೆಗೆ ಹಾನಿ ಮಾಡುತ್ತಿತ್ತು. ಹೀಗಾಗಿ ಕೋಪಗೊಂಡು ಅದರತ್ತ ಕತ್ತಿ ಬೀಸಿದ್ದೆ. ಅದು ಕೆಚ್ಚಲಿಗೆ ತಗುಲಿರಬಹುದು ಎಂಬುದಾಗಿ ಹೇಳಿದ್ದಾರೆ' ಎಂದು ಎಸ್‌ಐ ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	46,501	21,463
ಹಾರಂಗಿ	2,859	2,850.83	4,431	2,500
ಕಬಿನಿ	2,284.00	2,278.10	20,469	30,000
ಹೇಮಾವತಿ	2,922	2,916.60	11,808	11,858
ಲಿಂಗನಮಕ್ಕಿ	1,819	1,784.5	24,752	7,198
ಸೂಪಾ (ಮೀ)	564	536.52	14,071.0	3,908.21
ಮಾಣಿ	595	583.8	2,462	450
ತುಂಗಭದ್ರಾ	1,633	1,622.12	65,182	202
ಮಲಪ್ರಭಾ	2,079.5	2,060.90	7,280	194
ಘಟಪ್ರಭಾ	2175	2,143.83	14,520	1,466
ಭದ್ರಾ *	186	162	10,193	2,867
ಆಲಮಟ್ಟಿ (ಮೀ)	519.6	517.06	1,07,081	1,07,081
ನಾರಾಯಣಪುರ (ಮೀ)	492.25	490.72	1,10,000	1,06,085

* ನೆಲಮಟ್ಟದಿಂದ

ಕಾನೂನು ಮೂಲಕವೇ ಉತ್ತರ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಆರತಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ನೋಟಿಸ್‌ಗೆ ಕಾನೂನು ಮೂಲಕವೇ ಸರ್ಕಾರ ಉತ್ತರ ನೀಡಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಕಾವೇರಿ ಆರತಿ' ವಿಚಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೋಟಿಸ್ ನೀಡಿರುವ ಬಗ್ಗೆ ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಪೂಜೆ, ಪ್ರಾರ್ಥನೆ ಮಾಡಲು ಯಾರೂ ಬೇಡ ಎನ್ನುವುದಿಲ್ಲ. 'ಕಾವೇರಿ ಆರತಿ' ನಡೆಯಬಹುದೇ ಎಂಬ ಬಗ್ಗೆ ಕೆಲವರಿಗೆ ಆತಂಕ ಇದೆ. ಅದನ್ನು ಸರ್ಕಾರ ನಿವಾರಿಸಲಿದೆ' ಎಂದರು.

ನಾನು ಭವಿಷ್ಯ ಕೇಳುವೆ: 'ಆಗಸ್ಟ್ ತಿಂಗಳಲ್ಲಿ ರಾಜ್ಯದಲ್ಲಿ ಬದಲಾವಣೆ ಆಗಲಿ'ದೆ ಎಂಬ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಅಶೋಕ ಅವರು ಜ್ಯೋತಿಷ್ಯ ಹೇಳಲು ಆರಂಭಿಸಿದ್ದಾರೆಯೇ? ಅವರು ಜ್ಯೋತಿಷ್ಯ ಕಲಿತಿದ್ದರೆ ನನಗೂ ಸಮಯ ಕೊಡಿಸಿ. ನಾನು ಹೋಗಿ ಭವಿಷ್ಯ ಕೇಳುತ್ತೇನೆ' ಎಂದು ಛೇಡಿಸಿದರು.

'ಭವಿಷ್ಯ ಈ ಹಿಂದೆ ಹೇಳಿದ್ದೆ'

'ಡಿ.ಕೆ.ಶಿವಕುಮಾರ್ ಅವರ ಭವಿಷ್ಯವನ್ನು ಈ ಹಿಂದೆ ವಿಧಾನ ಸೌಧದಲ್ಲೇ ಹೇಳಿದ್ದೆ. ಅಧಿಕಾರ ಸುಮ್ಮನೆ ಸಿಗೋದಿಲ್ಲ. ಜಾತಕದಲ್ಲಿ ಗುರು, ಶುಕ್ರ, ಶನಿ ಯೋಗವಿಲ್ಲ. ನೀನು ಒದ್ದು ಅಧಿಕಾರ ಕಿತ್ತುಕೊಳ್ಳಬೇಕು. ನಾರ್ಮಲ್ ಡೆಲಿವರಿ ಆಗಲ್ಲ. ಸಿಸೇರಿಯನ್ ಮೂಲಕವೇ ಆಗಬೇಕು' ಎಂದು ಅಶೋಕ ತಿರುಗೇಟು ನೀಡಿದರು.

ಕಾಂಗ್ರೆಸ್‌ನವರೇ ಸೇರಿಸಿದ ಪದಗಳ ಬಗ್ಗೆ ದತ್ತಾತ್ರೇಯ ಹೊಸಬಾಳೆ ಮಾತನಾಡಿದ್ದಾರೆ: ಅಶೋಕ

'ಅಂಬೇಡ್ಕರ್ ಸಂವಿಧಾನದಲ್ಲಿ ಜಾತ್ಯತೀತ ಪದ ತೋರಿಸಿ'

ಪ್ರಜಾವಾಣಿ ವಾರ್ತೆ


ಆರ್‌. ಅಶೋಕ

ಬೆಂಗಳೂರು: 'ಸಂವಿಧಾನಕ್ಕೆ 68 ಬಾರಿ ತಿದ್ದುಪಡಿ ತಂದ ಕಾಂಗ್ರೆಸ್, ಜಾತ್ಯತೀತ ಪದದ ಬಗ್ಗೆ ಮಾತನಾಡುತ್ತಿದೆ. ಆದರೆ, ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದ ಸಂವಿಧಾನದಲ್ಲಿ ಜಾತ್ಯತೀತ ಪದವೇ ಇಲ್ಲ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಹೇಳಿದರು.

'ಮೂಲ ಸಂವಿಧಾನದಲ್ಲಿಲ್ಲದ ಮತ್ತು ಕಾಂಗ್ರೆಸ್‌ನವರೇ ಸೇರಿಸಿದ ಪದಗಳ ಬಗ್ಗೆ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಮಾತನಾಡಿದ್ದಾರೆ' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಾನು ಒಕ್ಕಲಿಗ ಎಂದು ಗುರುತಿಸಿಕೊಳ್ಳುತ್ತೇನೆ. ಎಲ್ಲರೂ ಅವರವರ ಜಾತಿಯನ್ನು ಗುರುತಿಸಿಕೊಳ್ಳುತ್ತಾರೆ. ಅಂದಮೇಲೆ ಜಾತ್ಯತೀತ ಎಂಬುದಕ್ಕೆ ಅರ್ಥವಿಲ್ಲ. ಅಂಬೇಡ್ಕರ್ ಅವರು ಬರೆದ ಸಂವಿಧಾನದಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದ ಎಲ್ಲಿದೆ ಎಂಬುದನ್ನು ಕಾಂಗ್ರೆಸ್ ನಾಯಕರು ತೋರಿಸಲಿ' ಎಂದು ಸವಾಲು ಹಾಕಿದರು.

ರಾಹುಲ್‌ಗಾಂಧಿ ಒಂದು ಕಡೆ ಜಾತಿ ಸಮೀಕ್ಷೆ ಬೇಕೆಂದು ಹೇಳುತ್ತಾರೆ. ನಂತರ ಜಾತ್ಯತೀತ ಎನ್ನುತ್ತಾರೆ. ನೆಹರು ಅವರು ಸಂವಿಧಾನಕ್ಕೆ 17 ತಿದ್ದುಪಡಿಗಳನ್ನು ಮಾಡಿದ್ದಾರೆ. ಅವರ ಪುತ್ರಿ ಇಂದಿರಾಗಾಂಧಿ 26 ತಿದ್ದುಪಡಿಗಳನ್ನು ಮಾಡಿದ್ದಾರೆ. ಬಾಬಾ ಸಾಹೇಬರ ಮೂಲ ಆಶಯಗಳನ್ನೇ ಇವರು ತಿದ್ದುಪಡಿ ಮಾಡಿದ್ದಾರೆ ಎಂದು ಅಶೋಕ ಟೀಕಿಸಿದರು.

ರಾಜ್ಯದಲ್ಲಿ ಗೃಹ ಇಲಾಖೆ ಕಾಂಗ್ರೆಸ್‌ನ ಡಿಪಾರ್ಟ್‌ಮೆಂಟ್ ಆಗಿದೆ. ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿ ಪತ್ರಕರ್ತರನ್ನು ಜೈಲಿಗೆ ಹಾಕಿದ್ದರು. ಅದೇ ರೀತಿ ಗೃಹ ಇಲಾಖೆ ಹೊಸ ಕಾನೂನು ತಂದು, ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರದ ವಿರುದ್ಧ ಬರೆಯುವವರ ವಿರುದ್ಧ ಕ್ರಮ ವಹಿಸಲಿದೆ' ಎಂದು ಎಚ್ಚರಿಸಿದರು.

'ತುರ್ತು ಪರಿಸ್ಥಿತಿಗಿಂತ ಈಗಿನದು ಕೆಟ್ಟ ಸ್ಥಿತಿ'

ಧಾರವಾಡ: 'ದೇಶದಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಗೆ 50 ವರ್ಷ ಸಂದಿವೆ, ತುರ್ತು ಪರಿಸ್ಥಿತಿಗಿಂತ ಕೆಟ್ಟ ಸ್ಥಿತಿ ಈಗಿದೆ. ಬಿಜೆಪಿಯವರು ಈ ಬಗ್ಗೆ ಚರ್ಚಿಸುತ್ತಾರಾ' ಎಂದು ಸಚಿವ ಸಂತೋಷ ಲಾಡ್ ಪ್ರಶ್ನಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕೇಂದ್ರದಲ್ಲಿ 11 ವರ್ಷಗಳಿಂದ ಬಿಜೆಪಿ ಅಧಿಕಾರ ನಡೆಸುತ್ತಿದೆ. ವಿಷಯಾಧಾರಿತ ಸಮಸ್ಯೆಗಳು ಜನರಿಗೆ ಗೊತ್ತಾಗಬಾರದು, ಪಹಲ್ಗಾಮ್, ಪುಲ್ವಾಮಾದಂತಹ ದಾಳಿಗಳ ಬಗ್ಗೆ ಯಾರು ಕೇಳಬಾರದು ಎಂದು 'ತುರ್ತುಪರಿಸ್ಥಿತಿ:50 ವರ್ಷ' ಇಂಥ ಅಭಿಯಾನವನ್ನು ಬಿಜೆಪಿಯವರು ನಡೆಸುತ್ತಾರೆ' ಎಂದು ಕುಟುಕಿದರು.

'ನಮ್ಮ ದೇಶವೇ 'ಗ್ರೇಟ್', ನಮ್ಮ ಪ್ರಧಾನಿಯೇ (ನರೇಂದ್ರ ಮೋದಿ) 'ಗ್ರೇಟ್' ಎಂದು ಬಿಜೆಪಿಯವರು ಸದಾ ಹೇಳುತ್ತಾರೆ. 50 ವರ್ಷದ ಹಿಂದೆ ಹೇರಿದ್ದ ತುರ್ತು ಪರಿಸ್ಥಿತಿ ಬಗ್ಗೆ ಈಗ ಚರ್ಚಿಸುವುದು ಪ್ರಸ್ತುತವೇ? ಅದರ ಅಗತ್ಯ ಇದೆಯಾ? ಎಂದು ಬಿಜೆಪಿಯವರು ಹೇಳಬೇಕು' ಎಂದರು.

ಸೋಮವಾರ, ಜೂನ್ 30, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೇಪಾಳದಲ್ಲಿ ಭೂಕಂಪ

ನೇಪಾಳದ ಮುಗು ಜಿಲ್ಲೆಯಲ್ಲಿ ಭಾನುವಾರ ಮಧ್ಯಾಹ್ನ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ ತೀವ್ರತೆ 4.8 ದಾಖಲಾಗಿದೆ



ಕೇಂದ್ರಕ್ಕೆ ಪತ್ರ

ಮೀನುಗಾರಿಕೆ ಋತು ಆರಂಭಗೊಂಡಿದ್ದು, ಮೀನುಗಾರರ ರಕ್ಷಣೆಗೆ ಶ್ರೀಲಂಕಾದೊಂದಿಗೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಿ

ಎಂ.ಕೆ. ಸ್ಟಾಲಿನ್
ತಮಿಳುನಾಡು ಸಿ.ಎಂ

ಜಲ ಸಂಪನ್ಮೂಲ ಇಲಾಖೆ | ಕಾವೇರಿ ನೀರಾವರಿ ನಿಗಮ ನಿಯಮಿತ

ಕೃಷ್ಣರಾಜಸಾಗರ ಜಲಾಶಯ

ತುಂಬಿರುವ ಶುಭ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯರವರು** ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ **ಶ್ರೀ ಡಿ ಕೆ ಶಿವಕುಮಾರ್**ರವರಿಂದ **ಶ್ರೀ ಕಾವೇರಿ ಮಾತೆಯ ಪೂಜೆ ಹಾಗೂ ಬಾಗಿನ ಸಮರ್ಪಣೆ ಕಾರ್ಯಕ್ರಮ**

ದಿನಾಂಕ : 30.06.2025ನೇ ಸೋಮವಾರ | ಸಮಯ : ಬೆಳಿಗ್ಗೆ 10.30 ಗಂಟೆಯಿಂದ

ಸ್ಥಳ : ಕೃಷ್ಣರಾಜಸಾಗರ ಜಲಾಶಯದ ಶ್ರೀ ಕಾವೇರಿ ಪ್ರತಿಮೆಯ ಬಳಿ

ಅಣೆಕಟ್ಟೆಯ 92 ವರ್ಷಗಳ ಇತಿಹಾಸದಲ್ಲಿ ಹೊಸ ದಾಖಲೆ
ಇದೇ ಮೊದಲ ಬಾರಿಗೆ ಜೂನ್ ತಿಂಗಳಲ್ಲೇ ಜಲಾಶಯ ಭರ್ತಿ

ಕಾವೇರಿ ನ್ಯಾಯಾಧೀಕರಣದಂತೆ ತಮಿಳುನಾಡಿಗೆ ಬಿಳಿಗುಂಡ್ಲುವಿನಲ್ಲಿ ಹರಿಸಬೇಕಾದ ನೀರಿನ ಪ್ರಮಾಣ ಹಾಗೂ ವಾಸ್ತವವಾಗಿ ಹರಿಸಿದ ನೀರಿನ ಪ್ರಮಾಣದ ವಿವರಗಳು

ಕಳೆದ 7 ವರ್ಷಗಳಲ್ಲಿ

ಜಲವರ್ಷ	ಕಾವೇರಿ ನ್ಯಾಯಾಧೀಕರಣದಂತೆ ಹರಿಸ ಬೇಕಾದ ನೀರಿನ ಪ್ರಮಾಣ (ಟಿ.ಎಂ.ಸಿ)	ವಾಸ್ತವವಾಗಿ ಬಿಳಿಗುಂಡ್ಲುವಿನಲ್ಲಿ ಹರಿಸಿರುವ ನೀರಿನ ಪ್ರಮಾಣ (ಸಿ.ಡಬ್ಲ್ಯೂ.ಸಿ ಯ ಮಾಪನದ ಪ್ರಕಾರ) (ಟಿ.ಎಂ.ಸಿ)
2018-19	ದಿ: 16.02.2018 ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ 177.250	404.444
2019-20		275.40
2020-21		211.316
2021-22		281.084
2022-23		667.533
2023-24		81.417
2024-25		305.611

ಪ್ರಸಕ್ತ ಜಲವರ್ಷದಲ್ಲಿ (2025-26)

ತಿಂಗಳು	ಕಾವೇರಿ ನ್ಯಾಯಾಧೀಕರಣದಂತೆ ಮಾಸಿಕವಾರು ಹರಿಸಬೇಕಾದ ನೀರಿನ ಪ್ರಮಾಣ (ಟಿ.ಎಂ.ಸಿ)	ವಾಸ್ತವವಾಗಿ ಬಿಳಿಗುಂಡ್ಲುವಿನಲ್ಲಿ ಮಾಸಿಕವಾರು ಹರಿಸಿರುವ ನೀರಿನ ಪ್ರಮಾಣ (ಸಿ.ಡಬ್ಲ್ಯೂ.ಟಿ ಯ ಮಾಪನದ ಪ್ರಕಾರ) (ಟಿ.ಎಂ.ಸಿ)
ಜೂನ್ 2025	9.19	21.515
ಜೂನ್ 28, 2025 ರ ಸಂಚಿತ ಅವಧಿಗೆ	8.57	21.515

ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವರಾದ **ಶ್ರೀ ಎನ್ ಚಲುವರಾಯಸ್ವಾಮಿ ರವರಿಂದ** ಸಮಾರಂಭವೊಂದರಲ್ಲಿ ಭಾಷಣ

ಘನ ಉಪಸ್ಥಿತಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರು
ಮಾನ್ಯ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು, ಭಾರತ ಸರ್ಕಾರ ಹಾಗೂ ಮಾನ್ಯ ಸಂಸದರು, ಮಂಡ್ಯ ಲೋಕಸಭಾ ಕ್ಷೇತ್ರ

ಡಾ|| ಹೆಚ್.ಸಿ. ಮಹದೇವಪ್ಪ ರವರು
ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಮೈಸೂರು ಜಿಲ್ಲೆ

ಶ್ರೀ ಕೆ. ವೆಂಕಟೇಶ್ ರವರು
ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಚಾಮರಾಜನಗರ ಜಿಲ್ಲೆ

ಶ್ರೀ ಎನ್.ಎಸ್. ಬೋಸರಾಜು ರವರು
ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಕೊಡಗು ಜಿಲ್ಲೆ

ಶ್ರೀ. ಪಿ.ಎಂ. ನರೇಂದ್ರಸ್ವಾಮಿ ರವರು
ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಶಾಸಕರು, ಮಳವಳ್ಳಿ ವಿಧಾನಸಭಾ ಕ್ಷೇತ್ರ

ಶ್ರೀ ಸಿ. ಅನಿಲ್ ಕುಮಾರ್
ಮಾನ್ಯ ಅಧ್ಯಕ್ಷರು ಮೈಸೂರು ಜಂಗಲ್ ಲಾಡ್ಜ್ ಹಾಗೂ ಮಾನ್ಯ ಶಾಸಕರು ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರ

ಅಧ್ಯಕ್ಷತೆ

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ರವರು
ಮಾನ್ಯ ಅಧ್ಯಕ್ಷರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಹಾಗೂ ಮಾನ್ಯ ಶಾಸಕರು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

ಶ್ರೀ ಸುನೀಲ್ ಬೋಸ್ ರವರು
ಮಾನ್ಯ ಸಂಸದರು, ಚಾಮರಾಜನಗರ ಲೋಕಸಭಾ ಕ್ಷೇತ್ರ

ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರವರು
ಮಾನ್ಯ ಸಂಸದರು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ

ಶ್ರೀ ತನ್ವೀರ್ ಸೇಠ್ ರವರು
ಮಾನ್ಯ ಶಾಸಕರು, ನರಸಿಂಹರಾಜ ವಿಧಾನಸಭಾ ಕ್ಷೇತ್ರ

ಶ್ರೀ ಜಿ.ಟಿ. ದೇವೇಗೌಡ ರವರು
ಮಾನ್ಯ ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಶ್ರೀ ಡಿ. ರವಿಶಂಕರ್ ರವರು
ಮಾನ್ಯ ಶಾಸಕರು, ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ

ಶ್ರೀ ಜಿ.ಡಿ. ಹರೀಶ್‌ಗೌಡ ರವರು
ಮಾನ್ಯ ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ

ಶ್ರೀ ದರ್ಶನ್ ಧ್ರುವನಾರಾಯಣ ರವರು
ಮಾನ್ಯ ಶಾಸಕರು, ನಂಜನಗೂಡು ವಿಧಾನಸಭಾ ಕ್ಷೇತ್ರ

ಶ್ರೀ ಟಿ.ಎಸ್. ಶ್ರೀವತ್ಸ ರವರು
ಮಾನ್ಯ ಶಾಸಕರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ

ಶ್ರೀ ಕೆ. ಹರೀಶ್ ಗೌಡ ರವರು
ಮಾನ್ಯ ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ

ಶ್ರೀ ಸಿ. ಪುಟ್ಟರಂಗಶೆಟ್ಟಿ ರವರು
ಮಾನ್ಯ ಶಾಸಕರು, ಚಾಮರಾಜನಗರ ವಿಧಾನಸಭಾ ಕ್ಷೇತ್ರ

ಶ್ರೀ ಎ.ಆರ್. ಕೃಷ್ಣಮೂರ್ತಿ ರವರು
ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ

ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್ ರವರು
ಮಾನ್ಯ ಶಾಸಕರು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ

ಶ್ರೀ ಪಿ. ರವಿಕುಮಾರ್ ರವರು
ಮಾನ್ಯ ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ

ಶ್ರೀ ದರ್ಶನ್ ಪುಟ್ಟಣ್ಣಯ್ಯ ರವರು
ಮಾನ್ಯ ಶಾಸಕರು, ಮೇಲುಕೋಟೆ ವಿಧಾನಸಭಾ ಕ್ಷೇತ್ರ

ಶ್ರೀ ಹೆಚ್.ಟಿ ಮಂಜುನಾಥ್ ರವರು
ಮಾನ್ಯ ಶಾಸಕರು, ಕೃಷ್ಣರಾಜಪೇಟೆ ವಿಧಾನಸಭಾ ಕ್ಷೇತ್ರ

ಶ್ರೀ ಕೆ.ಎಂ. ಉದಯ್ ರವರು
ಮಾನ್ಯ ಶಾಸಕರು, ಮದ್ದೂರು ವಿಧಾನಸಭಾ ಕ್ಷೇತ್ರ

ಶ್ರೀ ಮಂಥರ್ ಗೌಡ ರವರು
ಮಾನ್ಯ ಶಾಸಕರು, ಮಡಿಕೇರಿ ವಿಧಾನಸಭಾ ಕ್ಷೇತ್ರ

ಶ್ರೀ ಎ.ಎಸ್. ಪೊನ್ನಣ್ಣ ರವರು
ಮಾನ್ಯ ಶಾಸಕರು, ವಿರಾಜಪೇಟೆ ವಿಧಾನಸಭಾ ಕ್ಷೇತ್ರ

ಶ್ರೀ ಹೆಚ್. ವಿಶ್ವನಾಥ್ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಯತೀಂದ್ರ ಎಸ್ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಡಿ. ತಿಮ್ಮಯ್ಯ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಕೆ. ವಿವೇಕಾನಂದ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಮಧು ಜಿ. ಮಾದೇಗೌಡ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ದಿನೇಶ್ ಗೂಳಿಗೌಡ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಸಿ.ಎನ್. ಮಂಜೇಗೌಡ ರವರು
ಮಾನ್ಯ ಶಾಸಕರು, ವಿಧಾನ ಪರಿಷತ್

ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು, ನಿಗಮ ಮಂಡಳಿ ಅಧ್ಯಕ್ಷರುಗಳು ಹಾಗೂ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು

ಶ್ರೀ ಗೌರವ್ ಗುಪ್ತ ಭಾ.ಆ.ಸೇ.
ಅಪರ ಮುಖ್ಯ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ

ಸರ್ವರಿಗೂ ಆದರದ ಸುಸ್ವಾಗತ

ಶ್ರೀ ಮಹೇಶ್
ವ್ಯವಸ್ಥಾಪಕ ನಿರ್ದೇಶಕರು ಕಾವೇರಿ ನೀರಾವರಿ ನಿಗಮ ನಿಯಮಿತ

ಆಗಸ್ಟ್‌ನಲ್ಲಿ ಅಂದೊಂದಿತ್ತು ಕಾಲ

ವಿನಯ್ ರಾಜ್‌ಕುಮಾರ್, ನಿಶಾ

ವಿನಯ್ ರಾಜ್‌ಕುಮಾರ್, ಅದಿತಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಅಂದೊಂದಿತ್ತು ಕಾಲ' ಚಿತ್ರದ 'ಅರೇರೇ ಯಾರೋ ಇವಳು' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಾಲೆಯ ಮಕ್ಕಳು ಈ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಕೀರ್ತಿ ಕೃಷ್ಣಪ್ಪ ಚಿತ್ರವನ್ನು ನಿರ್ದೇಶಿಸಿದ್ದಾರೆ.

'ಚಿತ್ರದ ಮೊದಲ ಹಾಡು 'ಮುಂಗಾರು ಮಳೆಯೆ..' ದೊಡ್ಡ ಹಿಟ್ ಆಗಿದೆ. ಸಾಕಷ್ಟು ಜನ ಈ ಹಾಡಿಗೆ ರೀಲ್ಸ್ ಮಾಡಿದ್ದಾರೆ. ಈ ಹಾಡನ್ನು ಅಭಿಮಾನಿಗಳು ರೀಲ್ಸ್ ಮಾಡಿದ್ದನ್ನು ನಾನೂ ನೋಡಿರುವೆ. ಲಕ್ಷಾಂತರ ಜನರಿಗೆ ಈ ಹಾಡು ತಲುಪಿರುವುದು ಖುಷಿಯ ವಿಷಯ. ಈಗ ನಮ್ಮ ಚಿತ್ರದ ಎರಡನೇ ಹಾಡು 'ಅರೇರೇ...' ಬಿಡುಗಡೆಗೊಂಡಿದೆ. ಇದು ನನ್ನ ನೆಚ್ಚಿನ ಗೀತೆ. ಇದನ್ನೇ ಮೊದಲು ಬಿಡುಗಡೆ ಮಾಡಿ ಎಂದು ನಿರ್ದೇಶಕರಿಗೆ ಹೇಳಿದ್ದೆ. ಇದರ ವಿಷ್ಯುವಲ್ಸ್ ತುಂಬಾ ಚೆನ್ನಾಗಿದೆ. ಈ ಚಿತ್ರದಲ್ಲಿ ನಾನು ಹದಿನಾರು ವರ್ಷದ ಹುಡುಗನ ಗೆಟಪ್‌ನಲ್ಲಿ ಕಾಣಿಸಿಕೊಂಡಿರುವೆ. ಹೀಗೆ ಕಾಣಿಸಿಕೊಳ್ಳುವುದು ಸವಾಲಾಗಿತ್ತು. ಸಾಧ್ಯವೇ ಇಲ್ಲ ಅಂದಿದ್ದೆ. ಈಗ ನೋಡಿದ್ರೆ ಪರ್ವಾಗಿಲ್ಲ, ನಾಲ್ಕು ವರ್ಷ ಫೇಲಾಗಿ 10ನೇ ಕ್ಲಾಸಿಗೆ ಬಂದವನ ರೀತಿ ಕಾಣಿಸುತ್ತಿದ್ದೇನೆ. ಪ್ರಪಂಚದ ಬಗ್ಗೆ ಜಾಸ್ತಿ ಗೊತ್ತಿಲ್ಲದ ಮುಗ್ಧ ಹುಡುಗನ ಪಾತ್ರ. ಇದಕ್ಕಾಗಿ ತೂಕ ಇಳಿಸಿರುವೆ. ಶಾಲಾ ದಿನಗಳಲ್ಲಿ ಇಷ್ಟಪಟ್ಟ ಹುಡುಗಿಯ ಹಿಂದೆ ಓಡಾಡಿದ್ದೇನೆ. ನಿಜ ಜೀವನದಲ್ಲಿಯೂ ಹತ್ತನೇ ತರಗತಿ ಓದುವಾಗ ನಾನು ಬಹಳ ಮುಗ್ಧ ಹುಡುಗನಾಗಿದ್ದೆ. ಮೂರು ಶೇಡ್‌ಗಳಲ್ಲಿ ನನ್ನ ಪಾತ್ರ ಸಾಗುತ್ತದೆ. ಸಿನಿಮಾ ಎಲ್ಲರಿಗೂ ಇಷ್ಟವಾಗುತ್ತದೆ ಎಂಬ ವಿಶ್ವಾಸವಿದೆ' ಎಂದರು ವಿನಯ್.

'ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಈಗಾಗಲೇ ನಮ್ಮ ಚಿತ್ರದ ಮೊದಲ ಹಾಡಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ವಿನಯ್ ರಾಜ್‌ಕುಮಾರ್ ಬಹಳ ಸಪೋರ್ಟ್ ಮಾಡಿದ್ದು, ತುಂಬಾ ಸೈಲೆಂಟ್ ವ್ಯಕ್ತಿ. ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಈಗ ಬಿಡುಗಡೆಯಾಗಿರುವ ಹಾಡಿಗೆ ಅರಸು ಅಂತಾರೆ ಸಾಹಿತ್ಯ ಬರೆದಿದ್ದು, ವಿನಯ್ ಹಾಗೂ ನಿಶಾ ಬಹಳ ಸೊಗಸಾಗಿ ಅಭಿನಯಿಸಿದ್ದಾರೆ. ಆಗಸ್ಟ್ 29ರಂದು ಸಿನಿಮಾ ತೆರೆಗೆ ಬರಲಿದೆ. ಇದೊಂದು ಶುದ್ಧ ಪ್ರೀತಿ ಹಾಗೂ ಗೆಳೆತನದ ಕಥೆಯ ಚಿತ್ರವಾಗಿದ್ದು, ಪ್ರೇಕ್ಷಕರ ಮನಸ್ಸನ್ನು ಗೆಲ್ಲುತ್ತದೆ ಎಂಬ ಭರವಸೆಯಿದೆ' ಎಂದರು ನಿರ್ದೇಶಕರು.

ಈ ಚಿತ್ರದ ಶಾಲಾ ವಿದ್ಯಾರ್ಥಿಯ ಹಾಡಿನಲ್ಲಿ ಕಾಣಿಸಿಕೊಂಡಿರುವ ಯುವ ನಟಿ ನಿಶಾ ರವಿಕೃಷ್ಣನ್ ಮಾತನಾಡಿ, 'ಇದರಲ್ಲಿ ನನ್ನದೊಂದು ಸಣ್ಣ ಪಾತ್ರವಾದರೂ ಬಹಳ ಮಹತ್ವ ಹೊಂದಿದೆ' ಎಂದರು.

ಭುವನ್ ಮ್ಯೂವಿಸ್ ಬ್ಯಾನರ್‌ನಡಿ ಭುವನ್ ಸುರೇಶ್ ಬಂಡವಾಳ ಹೂಡಿದ್ದಾರೆ. ರಾಘವೇಂದ್ರ.ವಿ ಸಂಗೀತ, ಅಭಿಷೇಕ್ ಕಾಸರಗೋಡು ಛಾಯಾಚಿತ್ರಗ್ರಹಣ, ಕೀರ್ತಿ ಸಂಕಲನವಿದೆ. ಜಗ್ಗಪ್ಪ, ಅರುಣಾ ಬಾಲರಾಜ್ ಮುಂತಾದವರು ನಟಿಸಿದ್ದು, ರವಿಚಂದ್ರನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬೆಂಗಳೂರು, ತೀರ್ಥಹಳ್ಳಿ ಮುಂತಾದೆಡೆ ಚಿತ್ರೀಕರಣಗೊಂಡಿದೆ.

ಉತ್ತರ ಕರ್ನಾಟಕದ 'ಲಕ್ಷ್ಯ'

ಬಹುತೇಕ ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ನಿರ್ಮಿಸಿರುವ ಮಕ್ಕಳ ಚಿತ್ರ 'ಲಕ್ಷ್ಯ'ದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಅರ್ಜುನ ಪಿ. ಡೊಣೂರ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ಬಂಡವಾಳವನ್ನೂ ಹೂಡಿದ್ದಾರೆ.

'ಲಕ್ಷ್ಯ' ಎಂದರೆ, ಗಮನ ಕೊಡುವುದು ಎಂಬ ಅರ್ಥವಿದೆ. ಇದು ಮಕ್ಕಳ 'ಲಕ್ಷ್ಯ'ದ ಕುರಿತಾದ ಚಿತ್ರ. ಮಕ್ಕಳು ಯಾವ ವಿಷಯಕ್ಕೆ 'ಲಕ್ಷ್ಯ' ಕೊಡುತ್ತಾರೆ, ಅದರಿಂದ ಏನಾಗುತ್ತದೆ? ಎಂಬುದೇ ಈ ಚಿತ್ರದ ಕಥಾಹಂದರ. ಸಂಪೂರ್ಣ ಉತ್ತರ ಕರ್ನಾಟಕದ ಭಾಷೆ ಬಳಸಲಾಗಿದ್ದು, ಅಲ್ಲಿನ ಕಲಾವಿದರೇ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಚಿತ್ರದ ಬಹುತೇಕ ಕೆಲಸಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಯೋಚನೆಯಿದೆ' ಎಂದರು ನಿರ್ದೇಶಕರು.

ಮೂರು ಹಾಡುಗಳಿಗೆ ಆರವ್ ರಿಶಿಕ್ ಸಂಗೀತ ಸಂಯೋಜಿಸಿದ್ದು, ಅನಿರುದ್ಧ ಶಾಸ್ತ್ರೀ, ಮದ್ವೇಶ್ ಭಾರದ್ವಾಜ್, ಚೇತನ್ ನಾಯಕ್ ಚಿತ್ರದ ಗೀತೆಗಳಿಗೆ ಧ್ವನಿಯಾಗಿದ್ದಾರೆ. ಎಂ.ಬಿ.ಅಳ್ಳಿಕಟ್ಟಿ ಛಾಯಾಚಿತ್ರಗ್ರಹಣ, ಆರ್. ಮಹಾಂತೇಶ್ ಸಂಕಲನವಿದೆ. ಬಾಗಲಕೋಟೆ, ಕೂಡಲ ಸಂಗಮ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಹೊಸಬರ ಭರವಸೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಭರವಸೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿತು. 'ಪ್ರೀತ್ಸೋ ಹೃದಯಕ್ಕೆ' ಎಂಬ ಅಡಿಬರಹ ಚಿತ್ರಕ್ಕಿದೆ. ಮುತ್ತು ಗಂಗೂರ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಶಿವಮೊಗ್ಗದ ಲಕ್ಷೀ ನಾಗರಾಜ್ ನಿರ್ಮಾಪಕರು.

'ಅನಿವಾರ್ಯ ಕಾರಣಗಳಿಂದ ಚಿತ್ರ ತಡವಾಗಿದೆ. ಪ್ರೀತಿ, ಕ್ರೈಂ ಎಳೆ ಇದ್ದರೂ, ಸಾಕಷ್ಟು ಭಾವನಾತ್ಮಕ ಸನ್ನಿವೇಶಗಳಿವೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಬದುಕಿನಲ್ಲೊಂದು ಭರವಸೆಯನ್ನು ಇಟ್ಟುಕೊಂಡಿರುತ್ತಾನೆ. ಸೋತವನು ಗೆಲ್ಲುತ್ತಾನೆ. ಗೆದ್ದವನಿಗೆ ಇನ್ನೇನೋ ಸಾಧಿಸಬೇಕೆಂಬ ಹಪಾಹಪಿ ಇರುತ್ತದೆ. ಅಂಥ ಹುಡುಗರ ಕಥೆಯಿದು' ಎಂದರು ನಿರ್ದೇಶಕರು.

ತಾರಾಗಣದಲ್ಲಿ ವಿನಯರಾಜ್, ಅಹಲ್ಯ ಸುರೇಶ್, ಹೊನ್ನವಳ್ಳಿ ಕೃಷ್ಣ, ಶೋಭರಾಜ್, ಮನಮೋಹನ್ ರೈ, ಕಿಲ್ಲರ್ ವೆಂಕಟೇಶ್, ಕೆಂಪೇಗೌಡ ಮುಂತಾದವರು ನಟಿಸಿದ್ದಾರೆ.

ಬೆಂಗಳೂರು, ಶಿವಮೊಗ್ಗ, ಮಂಗಳೂರು, ಉಡುಪಿ ಮೊದಲಾದೆಡೆ ಚಿತ್ರೀಕರಣ ನಡೆಸಲಾಗಿದೆ. ಶ್ರೀಹರ್ಷ ಕೊಗೋಡ್ ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ಕುಮಾರ್.ಸಿ.ಹೆಚ್ ಸಂಕಲನ ಚಿತ್ರಕ್ಕಿದೆ.

ಅಜಯ್ ಕುಮಾರ್

'ಓಮೆನ್' ಶೀಘ್ರದಲ್ಲಿ ತೆರೆಗೆ

ಹಾರರ್ ಕಥೆಯನ್ನು ಹೊಂದಿರುವ 'ಓಮೆನ್' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ವಿಬಿನ್.ಎಸ್ ಸಂತೋಷ್ ಕಥೆ ಬರೆದು ನಿರ್ದೇಶಿಸಿದ್ದಾರೆ.

'ಒಂದು ಮನೆಯ ಸುತ್ತ ನಡೆಯುವಂಥ ಘಟನೆಯಿದು. ಭೂತ ಬಂಗಲೆಗೆ ಹೋದವರ ಕಥೆ ಏನಾಗುತ್ತದೆ ಎಂಬುದೇ ಚಿತ್ರದ ಕಥೆ. ನಾಯಕ ಯೂಟ್ಯೂಬರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕಿ ಪ್ಯಾರಾನಾರ್ಮಲ್ ರಿಸರ್ಚರ್ ಆಗಿರುತ್ತಾಳೆ. ಸಿನಿಮಾ ಫೌಂಡ್ ಫುಟೇಜ್ ಶೈಲಿಯಲ್ಲಿದ್ದು, ನೇರವಾಗಿ ಒಂದು ಘಟನೆಯನ್ನು ವೀಕ್ಷಿಸುತ್ತಿರುವಂತಹ ಅನುಭವ ಪ್ರೇಕ್ಷಕರಿಗೆ ಆಗುತ್ತದೆ. ಸಿನಿಮಾದ ಸೆನ್ಸಾರ್ ಮುಗಿದಿದ್ದು, ಶೀಘ್ರದಲ್ಲಿಯೇ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.



ಅಜಯ್ ಕುಮಾರ್ ಮತ್ತು ವಿ.ಮಿರುನಳಿನಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಜಯ್ ಕುಮಾರ್ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ನೀಶ್ಮಾ ಶೆಟ್ಟಿ ನಾಯಕಿ. ಉಳಿದಂತೆ ಮೈತ್ರಿ ಜಗ್ಗಿ, ಕೀರ್ತನ ಪುಲ್ಕಿ, ರಾಘು ಕಲಾವಿದ, ಆಕಾಶ್ ಕುಲಕರ್ಣಿ ಅಭಿನಯಿಸಿದ್ದಾರೆ. ಭುವನ್ ಶಂಕರ್, ಸಂಸ್ಕಾರ್ ಸಂಗೀತವಿದೆ.

ಚಿಟಿಕೆ ಸುದ್ದಿ

'ದಶಕಗಳ ಕಾಲ ನ್ಯಾಯ ನಿರಾಕರಿಸಲಾಗಿತ್ತು'

ಮನೋಜ್ ಸಿನ್ಹಾ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಗೆ ಬಲಿಪಶುವಾದವರಿಗೆ 2019ಕ್ಕಿಂತ ಪೂರ್ವದಲ್ಲಿ ದಶಕಗಳ ಕಾಲ ನ್ಯಾಯವನ್ನು ನಿರಾಕರಿಸಲಾಗಿತ್ತು. ಅವರ ನೋವನ್ನು ಕೇಳುವವರೂ ಇರಲಿಲ್ಲ' ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಆರೋಪಿಸಿದ್ದಾರೆ.

90ರ ದಶಕದಲ್ಲಿ ಭಯೋತ್ಪಾದಕರ ದಾಳಿಗೆ ಬಲಿಯಾದ ವ್ಯಕ್ತಿಗಳ ಕುಟುಂಬ ಸದಸ್ಯರನ್ನು ಶ್ರೀನಗರದಲ್ಲಿ ಭಾನುವಾರ ಭೇಟಿಯಾದ ಬಳಿಕ ಅವರು 'ಎಕ್ಸ್'ನಲ್ಲಿ ಸರಣಿ ಪೋಸ್ಟ್‌ಗಳನ್ನು ಮಾಡಿದ್ದಾರೆ.

ಬಳಕೆಯಾಗದ ಅನುದಾನ

ಜಮ್ಮು (ಪಿಟಿಐ): ಗಡಿ ಪ್ರದೇಶದ ನಿವಾಸಿಗಳ ಸುರಕ್ಷತೆಗೆ ಭೂಗತ ಬಂಕರ್ ನಿರ್ಮಾಣಕ್ಕೆ ಕೇಂದ್ರದಿಂದ ಬಿಡುಗಡೆಯಾದ ಅನುದಾನದಲ್ಲಿ ಅರ್ಧದಷ್ಟನ್ನೂ ಜಮ್ಮು ಮತ್ತು ಕಾಶ್ಮೀರ ಸರ್ಕಾರ ಬಳಸಿಕೊಂಡಿಲ್ಲ.

'ಕಳೆದ 5 ವರ್ಷಗಳಲ್ಲಿ ಭೂಗತ ಬಂಕರ್ ನಿರ್ಮಾಣಕ್ಕೆ ಬಿಡುಗಡೆಯಾಗಿದ್ದ ₹242.77 ಕೋಟಿ ಅನುದಾನದಲ್ಲಿ ಶೇ 46.58ರಷ್ಟು ಹಣ ಬಳಕೆಯಾಗದೆ ಉಳಿದಿದೆ' ಎಂದು ರಮನ್ ಕುಮಾರ್ ಎಂಬುವರು ಆರ್‌ಟಿಐನಡಿ ಸಲ್ಲಿಸಿದ್ದ ಅರ್ಜಿಗೆ ಜಮ್ಮು ಮತ್ತು ಕಾಶ್ಮೀರದ ಗೃಹ ಇಲಾಖೆ ಮಾಹಿತಿ ನೀಡಿದೆ.

95 ಕೋಟಿ ಮಂದಿಗೆ ಪ್ರಯೋಜನ

'ಮನದ ಮಾತು': ಸಾಮಾಜಿಕ ಭದ್ರತಾ ಯೋಜನೆ ಯಶಸ್ಸಿನ ಬಗ್ಗೆ ಪ್ರಧಾನಿ ಶ್ಲಾಘನೆ

ನವದೆಹಲಿ (ಪಿಟಿಐ): ದೇಶದ ಸುಮಾರು 95 ಕೋಟಿ ಜನರು ಈಗ ಒಂದಲ್ಲ ಒಂದು ರೀತಿಯ ಸಾಮಾಜಿಕ ಭದ್ರತಾ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ಮನದ ಮಾತು' ತಿಂಗಳ ಬಾನುಲಿ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 2015ರವರೆಗೆ ಸರ್ಕಾರಿ ಯೋಜನೆಗಳು 25 ಕೋಟಿಗೂ ಕಡಿಮೆ ಮಂದಿಗೆ ತಲುಪುತ್ತಿದ್ದವು ಎಂದಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಈಚೆಗಿನ ವರದಿಯನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

'ಪ್ರಸ್ತುತ, ಭಾರತದ ಹೆಚ್ಚಿನ ಜನರು ಒಂದಲ್ಲ ಒಂದು ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿ ಆಗಿದ್ದಾರೆ. ದೇಶದ ಜನಸಂಖ್ಯೆಯ ಶೇ 64ಕ್ಕಿಂತ ಅಧಿಕ ಮಂದಿ ಸಾಮಾಜಿಕ ಭದ್ರತಾ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಐಎಲ್‌ಒ ವರದಿ ತಿಳಿಸಿದೆ' ಎಂದಿದ್ದಾರೆ.

ಆರೋಗ್ಯ ಕ್ಷೇತ್ರದಿಂದ ಹಿಡಿದು ಸಾಮಾಜಿಕ ಭದ್ರತೆಯವರೆಗೆ, ದೇಶವು ಪ್ರತಿಯೊಂದು ಕ್ಷೇತ್ರದಲ್ಲೂ ಪರಿಪೂರ್ಣತೆಯೆಡೆಗೆ ಸಾಗುತ್ತಿದೆ ಎಂದು ತಿಳಿಸಿದರು.

'ಇದು ಸಾಮಾಜಿಕ ನ್ಯಾಯದ ಒಂದು ಉತ್ತಮ ಚಿತ್ರಣವೂ ಆಗಿದೆ. ಈಗ ಸಾಧಿಸಿರುವ ಯಶಸ್ಸು, ಭವಿಷ್ಯದ ದಿನಗಳು ಇನ್ನೂ ಉತ್ತಮವಾಗಿರುತ್ತವೆ ಎಂಬ ನಂಬಿಕೆಯನ್ನು ಹುಟ್ಟುಹಾಕಿದೆ' ಎಂದು ಪ್ರತಿಪಾದಿಸಿದರು.

ಮುಖ್ಯಾಂಶಗಳು

- ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ವರದಿ ಉಲ್ಲೇಖ
- ಹೆಚ್ಚಿನ ಜನರಿಗೆ ಸಾಮಾಜಿಕ ಭದ್ರತಾ ಯೋಜನೆ

ಟ್ರಾಕೋಮಾ ಮುಕ್ತ: ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಭಾರತವನ್ನು ಟ್ರಾಕೋಮಾ ಮುಕ್ತ ಎಂದು ಘೋಷಿಸಿದ್ದನ್ನು ಪ್ರಧಾನಿ 'ಮಹತ್ವದ ಮೈಲಿಗಲ್ಲು' ಎಂದರಲ್ಲದೆ, ಇದಕ್ಕೆ ಕಾರಣರಾದ ಆರೋಗ್ಯ ಕಾರ್ಯಕರ್ತರನ್ನು ಶ್ಲಾಘಿಸಿದರು.

ಟ್ರಾಕೋಮಾ ಬ್ಯಾಕ್ಟೀರಿಯಾದ ಸೋಂಕು ಆಗಿದ್ದು, ಅದು ಕಣ್ಣಿನ ರೆಪ್ಪೆಗಳ ಒಳ ಪದರದ ಮೇಲೆ ಪರಿಣಾಮ ಬೀರುತ್ತದೆ. ಇದು ಒಂದು ಕಾಲದಲ್ಲಿ ವಿಶ್ವದಾದ್ಯಂತ ಅಂಧತ್ವಕ್ಕೆ ಪ್ರಮುಖ ಕಾರಣವಾಗಿತ್ತು.

'ಸ್ವಚ್ಛ ಭಾರತ ಅಭಿಯಾನ'ವು ಈ ರೋಗವನ್ನು ನಿರ್ಮೂಲನೆ ಮಾಡುವಲ್ಲಿ ನೆರವಾಯಿತು. 'ಜಲ ಜೀವನ್ ಮಿಷನ್' ಕೂಡ ಇದರ ಯಶಸ್ಸಿಗೆ ಬಹಳಷ್ಟು ಕೊಡುಗೆ ನೀಡಿದೆ. ಇಂದು ನಲ್ಲಿಗಳ ಮೂಲಕ ಶುದ್ಧ ನೀರು ಪ್ರತಿ ಮನೆಗೆ ತಲುಪುತ್ತಿರುವುದರಿಂದ ಇಂತಹ ಕಾಯಿಲೆಗಳು ಹರಡುವ ಅಪಾಯ ಕಡಿಮೆಯಾಗಿದೆ' ಎಂದರು.

'ತುರ್ತು ಪರಿಸ್ಥಿತಿ ವಿರುದ್ಧ ಹೋರಾಡಿದವರನ್ನು ಸ್ಮರಿಸಬೇಕು'

'ತುರ್ತು ಪರಿಸ್ಥಿತಿ ವಿರುದ್ಧ ಹೋರಾಡಿದವರನ್ನು ಯಾವಾಗಲೂ ಸ್ಮರಿಸಬೇಕು. ಸಂವಿಧಾನಕ್ಕೆ ಯಾವುದೇ ಧಕ್ಕೆಯಾಗದಂತೆ ಜನರು ಎಚ್ಚರದಿಂದಿರಲು ಇದು ಪ್ರೇರೇಪಿಸುತ್ತದೆ' ಎಂದು ಮೋದಿ ಹೇಳಿದರು.

ತುರ್ತು ಪರಿಸ್ಥಿತಿ ಹೇರಿದವರು ಸಂವಿಧಾನವನ್ನು ಕೊಲೆ ಮಾಡಿದ್ದಲ್ಲದೆ, ನ್ಯಾಯಾಂಗವನ್ನೂ ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡಿದ್ದರು ಎಂದು ಟೀಕಿಸಿದರು.

ನರೇಂದ್ರ ಮೋದಿ

ಮಾಜಿ ಪ್ರಧಾನಿಗಳಾದ ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ ಮತ್ತು ಮಾಜಿ ಉಪ ಪ್ರಧಾನಿ ಜಗಜೀವನ್ ರಾಮ್ ಅವರು ತುರ್ತು ಪರಿಸ್ಥಿತಿ ಬಗ್ಗೆ ಆಡಿದ್ದ ಮಾತುಗಳ ಆಡಿಯೊ ತುಣುಕುಗಳನ್ನು ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲಾಯಿತು.

'ಅಡುಗೆ ಎಣ್ಣೆ ಬಳಕೆ ಕಡಿಮೆ ಮಾಡಿ'

- ಕೈಲಾಸ ಮಾನಸ ಸರೋವರ ಯಾತ್ರೆ ಮತ್ತು ಅಮರನಾಥ ಯಾತ್ರೆಗೆ ತೆರಳುವ ಭಕ್ತರಿಗೆ ಪ್ರಧಾನಿ ಅವರು ಶುಭ ಕೋರಿದರು.
- ಬೊಜ್ಜಿನ ವಿರುದ್ಧ ಹೋರಾಡಲು ಅಡುಗೆ ಎಣ್ಣೆ ಬಳಕೆಯ ಪ್ರಮಾಣವನ್ನು ಶೇಕಡ 10ರಷ್ಟು ಕಡಿತ ಮಾಡುವಂತೆ ಪ್ರಧಾನಿ ಅವರು ಜನರಲ್ಲಿ ಮತ್ತೊಮ್ಮೆ ಕೋರಿದ್ದಾರೆ.
- ಅಂತರರಾಷ್ಟ್ರೀಯ ಯೋಗ ದಿನಾಚರಣೆಯು ಕಳೆದ 10 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ವರ್ಷದಿಂದ ವರ್ಷಕ್ಕೆ ತನ್ನ ಜನಪ್ರಿಯತೆ ಹೆಚ್ಚಿಸಿದೆ ಎಂದರು.

ಕಲಬುರಗಿ ರೊಟ್ಟಿ: ಮಹಿಳೆಯರ ಸಾಧನೆಗೆ ಪ್ರಧಾನಿ ಪ್ರಶಂಸೆ

ಕಲಬುರಗಿ: ಕಲಬುರಗಿಯಲ್ಲಿ 'ಬಿಳಿಜೋಳದ ರೊಟ್ಟಿ' ಸಿದ್ಧಪಡಿಸಿ ಮಾರಾಟ ಮಾಡಿ ಗಮನ ಸೆಳೆಯುತ್ತಿರುವ ಸ್ವಸಹಾಯ ಸಂಘದ ಮಹಿಳೆಯರ ಪರಿಶ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಶಂಸಿಸಿದ್ದಾರೆ.

ಭಾನುವಾರ ಆಕಾಶವಾಣಿಯಲ್ಲಿ ಪ್ರಸಾರಗೊಂಡ 'ಮನದ ಮಾತಿನ' 123ನೇ ಸರಣಿಯಲ್ಲಿ ಮಾತನಾಡಿದ ಪ್ರಧಾನಿ, 'ಮಹಿಳಾ ಸ್ವಾವಲಂಬನೆ ಭಾರತದ ಅಭಿವೃದ್ಧಿಯ ಹೊಸ ಮಂತ್ರವಾಗಿದೆ. ಮಹಿಳೆ ನಮ್ಮ ತಾಯಿ, ಸಹೋದರಿ, ಮಗಳಾಗಿ ಇಡೀ ಸಮಾಜಕ್ಕೆ ಹೊಸ ದಿಕ್ಕು ತೋರಿಸುತ್ತಿದ್ದಾಳೆ. ಈ ನಿಟ್ಟಿನಲ್ಲಿ ನೀವು ಕಲಬುರಗಿ ಮಹಿಳೆಯರ ಸಾಧನೆಯನ್ನು ತಿಳಿಯಲೇಬೇಕು. ಕಲಬುರಗಿ ಮಹಿಳೆಯರು ಆತ್ಮನಿರ್ಭರ ಅಭಿಯಾನದಡಿ ಜೋಳದ ರೊಟ್ಟಿಯನ್ನು ಒಂದು ಬ್ರ್ಯಾಂಡ್ ಆಗಿ ರೂಪಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಇವರು ಸ್ವಸಹಾಯ ಸಂಘದ ಮೂಲಕ ನಿತ್ಯ 3 ಸಾವಿರ ರೊಟ್ಟಿ ಮಾಡುತ್ತಿದ್ದಾರೆ. ಕಲಬುರಗಿಯ ರೊಟ್ಟಿ ದೊಡ್ಡ ನಗರಗಳ ಅಡುಗೆ ಮನೆಯನ್ನೂ ತಲುಪಿದೆ. ಇದು ಮಹಿಳೆಯರ ಸಾಧನೆಯಾಗಿದೆ. ಇದು ಆತ್ಮವಿಶ್ವಾಸ, ಆತ್ಮನಿರ್ಭರದ ಪ್ರತೀಕವಾಗಿದೆ' ಎಂದು ಮೋದಿ ಶ್ಲಾಘಿಸಿದ್ದಾರೆ.

ಜಿಲ್ಲೆಯಲ್ಲಿ 35ಕ್ಕೂ ಹೆಚ್ಚು ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರೂ ಸೇರಿ ಸಾವಿರಕ್ಕೂ ಹೆಚ್ಚು ಮಹಿಳೆಯರು ರೊಟ್ಟಿ ಉದ್ಯಮದ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ.

ಜನಗಣತಿ: ಮನೆ ಪಟ್ಟಿ ಕಾರ್ಯಾಚರಣೆ ಏ.1ರಿಂದ

ನವದೆಹಲಿ (ಪಿಟಿಐ): ಮುಂಬರುವ ಜನಗಣತಿಗಾಗಿ ಮನೆಗಳ ಪಟ್ಟಿ ಮಾಡುವ ಕಾರ್ಯಾಚರಣೆ (ಎಚ್‌ಎಲ್‌ಒ) 2026ರ ಏ.1ರಂದು ಪ್ರಾರಂಭವಾಗಲಿದೆ.

ಮನೆ ಪಟ್ಟಿ ಕಾರ್ಯಾಚರಣೆಯೊಂದಿಗೆ ಜನಗಣತಿಯ ಮೊದಲ ಹಂತಕ್ಕೆ ಚಾಲನೆ ದೊರೆಯಲಿದೆ ಎಂದು ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದು, 'ಮೊದಲ ಹಂತದ ಆರಂಭಕ್ಕೂ ಮುನ್ನ ಗಣತಿದಾರರು ಮತ್ತು ಮೇಲ್ವಿಚಾರಕರ ನೇಮಕಾತಿ ಹಾಗೂ ಅವರಿಗೆ ಕೆಲಸದ ಹಂಚಿಕೆಯನ್ನು ರಾಜ್ಯ ಸರ್ಕಾರಗಳು ಮತ್ತು ಜಿಲ್ಲಾಡಳಿತದ ಸಹಕಾರದೊಂದಿಗೆ ಮಾಡಲಾಗುತ್ತದೆ' ಎಂದಿದ್ದಾರೆ.

ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಇಲ್ಲಿ ದೇಶದ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ ಕಟ್ಟಡಗಳು ಮತ್ತು ಮನೆಗಳ ಗುಣಲಕ್ಷಣಗಳನ್ನು ದಾಖಲಿಸಲಾಗುತ್ತದೆ. ಪ್ರತಿ ಮನೆಯಲ್ಲಿರುವ ಸ್ವತ್ತುಗಳ ದತ್ತಾಂಶ ಸಂಗ್ರಹಿಸಲಾವುದು.

ಎರಡನೇ ಹಂತದಲ್ಲಿ ಜನಸಂಖ್ಯಾ ಗಣತಿ ನಡೆಯುತ್ತದೆ. ಇಲ್ಲಿ ಪ್ರತಿಯೊಬ್ಬರ ವೈಯಕ್ತಿಕ ದತ್ತಾಂಶಗಳ ಮೇಲೆ ಗಮನ ಕೇಂದ್ರೀಕರಿಸಿ, ಮಾಹಿತಿ ಕಲೆಹಾಕಲಾಗುತ್ತದೆ.

ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ನಡೆಸಲು ಕೇಂದ್ರ ಸರ್ಕಾರ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಜನಗಣತಿ ಪ್ರಕ್ರಿಯೆಗೆ 34 ಲಕ್ಷ ಗಣತಿದಾರರು, ಮೇಲ್ವಿಚಾರಕರು ಹಾಗೂ 1.3 ಲಕ್ಷ ಅಧಿಕಾರಿಗಳನ್ನು ನಿಯೋಜಿಸಲಾಗುತ್ತದೆ. ದೇಶದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿರುವ ಈ ಪ್ರಕ್ರಿಯೆ ನಾಗರಿಕರಿಗೆ ಸ್ವಯಂ-ಗಣತಿಯ ಅವಕಾಶ ನೀಡುತ್ತದೆ.

'ಡಿ.31ರ ಒಳಗೆ ಗಡಿ ನಿಗದಿಪಡಿಸಿ'

ಆಡಳಿತಾತ್ಮಕ ಪ್ರದೇಶಗಳ ಗಡಿಗಳಲ್ಲಿ ಬದಲಾವಣೆ ಪ್ರಸ್ತಾವಗಳಿದ್ದರೆ 2025ರ ಡಿಸೆಂಬರ್ 31ರೊಳಗೆ ಪೂರ್ಣಗೊಳಿಸಲು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರಿಜಿಸ್ಟ್ರಾರ್ ಜನರಲ್ ಸೂಚಿಸಿದ್ದಾರೆ.

'ಜನಗಣತಿ ಪ್ರಕ್ರಿಯೆಗಾಗಿ ಎಲ್ಲ ಗ್ರಾಮಗಳು ಮತ್ತು ಪಟ್ಟಣಗಳನ್ನು ಏಕರೂಪದ ಬ್ಲಾಕ್‌ಗಳಾಗಿ ವಿಂಗಡಿಸಲಾಗುವುದು. ಪ್ರತಿ ಬ್ಲಾಕ್‌ಗೆ ಒಬ್ಬ ಗಣತಿದಾರರನ್ನು ನಿಯೋಜಿಸಲಾಗುವುದು' ಎಂದು ಹೇಳಿದ್ದಾರೆ.

ನಿಯಮಗಳ ಪ್ರಕಾರ ಜಿಲ್ಲೆಗಳು, ಉಪ ವಿಭಾಗಗಳು, ತಾಲ್ಲೂಕುಗಳು ಮತ್ತು ಪೊಲೀಸ್ ಠಾಣೆಗಳಂತಹ ಆಡಳಿತಾತ್ಮಕ ಪ್ರದೇಶಗಳ ಗಡಿ ಮಿತಿಗಳನ್ನು ಅಂತಿಮಗೊಳಿಸಿದ ಮೂರು ತಿಂಗಳ ನಂತರವೇ ಜನಗಣತಿ ನಡೆಸಬಹುದು. ಗಣತಿ ಅವಧಿಯಲ್ಲಿ ಗಡಿಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡದಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

'ಮಹಾಘಟಬಂಧನ' ಗೆದ್ದರೆ ವಕ್ಫ್ ಕಾಯ್ದೆ ಕಸದ ಬುಟ್ಟಿಗೆ

ತೇಜಸ್ವಿ ಯಾದವ್

ಪಟ್ನಾ (ಪಿಟಿಐ): ಬಿಹಾರದಲ್ಲಿ 'ಮಹಾಘಟಬಂಧನ' ಮೈತ್ರಿಕೂಟವು ಅಧಿಕಾರಕ್ಕೇರಿದರೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ತಂದಿರುವ ವಕ್ಫ್ ಕಾಯ್ದೆಯನ್ನು ಕಸದ ಬುಟ್ಟಿಗೆ ಎಸೆಯಲಿದೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಭಾನುವಾರ ಹೇಳಿದ್ದಾರೆ.

ಇಲ್ಲಿನ ಗಾಂಧಿ ಮೈದಾನದಲ್ಲಿ ನಡೆದ 'ವಕ್ಫ್ ಉಳಿಸಿ, ಸಂವಿಧಾನ ಉಳಿಸಿ' ರ‍್ಯಾಲಿಯಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಪ್ರತಿಭಟನೆಯ ಸಂಕೇತವಾಗಿ ಕಪ್ಪು ಪಟ್ಟಿ ಧರಿಸಿದ್ದರು. 'ಆರ್‌ಜೆಡಿಯು ವಕ್ಫ್ ಕಾಯ್ದೆಯನ್ನು ಪ್ರಬಲವಾಗಿ ವಿರೋಧಿಸುತ್ತದೆ ಎಂದು ನಮ್ಮ ರಾಷ್ಟ್ರೀಯ ಅಧ್ಯಕ್ಷ ಲಾಲು ಪ್ರಸಾದ್ ಸ್ಪಷ್ಟಪಡಿಸಿದ್ದಾರೆ. ನಮ್ಮ ಪಕ್ಷದ ಸಂಸದರು ಇದನ್ನು ಸಂಸತ್ತಿನ ಎರಡೂ ಸದನಗಳಲ್ಲಿ ವಿರೋಧಿಸಿದ್ದಾರೆ. ವಕ್ಫ್ ಕಾಯ್ದೆ ವಿರೋಧಿಸಿ ನಾವು ನ್ಯಾಯಾಲಯದ ಮೊರೆ ಹೋಗಿದ್ದೇವೆ' ಎಂದಿದ್ದಾರೆ.

'ಬಿಹಾರದಲ್ಲಿ ಎನ್‌ಡಿಎ ಸರ್ಕಾರ ಪತನಗೊಳ್ಳುವ ಹಾದಿಯಲ್ಲಿದೆ ಎಂಬುದನ್ನು ರಾಜ್ಯದ ನನ್ನ ಮುಸ್ಲಿಂ ಸಹೋದರರು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ನವೆಂಬರ್‌ನಲ್ಲಿ, ರಾಜ್ಯದಲ್ಲಿ ಬಡವರ ಪರವಾಗಿರುವ ಹೊಸ ಸರ್ಕಾರ ಸ್ಥಾಪಿಸಲಾಗುವುದು ಮತ್ತು ಅದು ವಕ್ಫ್ ಕಾಯ್ದೆಯನ್ನು ಕಸದ ಬುಟ್ಟಿಗೆ ಎಸೆಯಲಿದೆ' ಎಂದು ಹೇಳಿದ್ದಾರೆ.

ಮಳೆ: 162 ವಿದ್ಯಾರ್ಥಿಗಳ ರಕ್ಷಣೆ

ಜೆಮ್‌ಶೆಡ್‌ಪುರ(ಜಾರ್ಖಂಡ್)(ಪಿಟಿಐ): ಜಾರ್ಖಂಡ್‌ನಲ್ಲಿ ಭಾರಿ ಮಳೆ ಸುರಿದು ಪ್ರವಾಹ ಉಂಟಾದ ಪರಿಣಾಮ, ಪೂರ್ವ ಸಿಂಗಭೂಮ್ ಜಿಲ್ಲೆಯ ಖಾಸಗಿ ವಸತಿ ಶಾಲೆಯೊಂದರಲ್ಲಿ ಸಿಲುಕಿದ್ದ 162 ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ಪ್ರವಾಹದಿಂದಾಗಿ, ಕೌವಾಲಿ ಪೊಲೀಸ್ ಠಾಣೆ ವ್ಯಾಪ್ತಿಯ ಪಂಡರ್‌ಸೋಲಿ ಎಂಬಲ್ಲಿನ ಲವಕುಶ ವಸತಿ ಶಾಲೆಯು ಭಾಗಶಃ ಮುಳುಗಿ, ವಿದ್ಯಾರ್ಥಿಗಳು ಸಿಲುಕಿದ್ದರು. ಶಿಕ್ಷಕರು ಎಲ್ಲ ವಿದ್ಯಾರ್ಥಿಗಳನ್ನು ಶಾಲೆಯ ಚಾವಣಿಗೆ ಸ್ಥಳಾಂತರಿಸಿದ್ದರು. ರಾತ್ರಿಯಿಡೀ ಅವರು ಚಾವಣಿಯಲ್ಲಿ ಇದ್ದರು' ಎಂದು ತಿಳಿಸಿದ್ದಾರೆ.

'ಈ ಕುರಿತು ಭಾನುವಾರ ಬೆಳಿಗ್ಗೆ 5.30ಕ್ಕೆ ಮಾಹಿತಿ ಲಭಿಸಿದ ತಕ್ಷಣ, ಪೊಲೀಸ್ ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ತೆರಳಿದರು. ಗ್ರಾಮಸ್ಥರ ನೆರವಿನಿಂದ ವಿದ್ಯಾರ್ಥಿಗಳನ್ನು ರಕ್ಷಣೆ ಮಾಡಿದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಗ್ರಾಮೀಣ) ರಿಷಭ ಗರ್ಗ್ ಹೇಳಿದ್ದಾರೆ.

ದೇಶದಾದ್ಯಂತ ವ್ಯಾಪಿಸಿದ ಮುಂಗಾರು

ನವದೆಹಲಿ (ಪಿಟಿಐ): ನಿಗದಿಗಿಂತ 9 ದಿನಗಳ ಮುನ್ನವೇ ಮುಂಗಾರು ದೇಶಾದ್ಯಂತ ವ್ಯಾಪಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. 2020ರ ಬಳಿಕ ಇದೇ ಮೊದಲ ಬಾರಿಗೆ ಮುಂಗಾರು ಬೇಗ ದೇಶದಾದ್ಯಂತ ಆವರಿಸಿದೆ. ದೆಹಲಿಗೆ ಜೂನ್ 27ರಂದು ಮುಂಗಾರು ತಲುಪಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ 2 ದಿನ ತಡವಾಗಿ ಪ್ರವೇಶಿಸಿದೆ. ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳ ಪ್ರವೇಶಿಸಿ, ಜುಲೈ 8ರ ವೇಳೆಗೆ ದೇಶದಾದ್ಯಂತ ವ್ಯಾಪಿಸುತ್ತದೆ.

ಕಾನೂನು ಕಾಲೇಜಿನ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಖಂಡಿಸಿ ಪ್ರತಿಭಟನೆ

ಕೇಂದ್ರ ಸಚಿವ ಮಜುಂದಾರ್ ಬಂಧನ; ಬಿಡುಗಡೆ

ಕೋಲ್ಕತ್ತ (ಪಿಟಿಐ): ಕಾನೂನು ಕಾಲೇಜಿನ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದನ್ನು ಖಂಡಿಸಿ ಪ್ರತಿಭಟಿಸಿದ ಕೇಂದ್ರ ಸಚಿವ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರನ್ನು ಕೋಲ್ಕತ್ತ ಪೊಲೀಸರು ಶನಿವಾರ ರಾತ್ರಿ ಬಂಧಿಸಿದರು.

ವೈಯಕ್ತಿಕ ಬಾಂಡ್ ಸಲ್ಲಿಸಿ ಜಾಮೀನು ಪಡೆಯುವಂತೆ ಸೂಚಿಸಿದರೂ, ಈ ಪ್ರಸ್ತಾವವನ್ನು ತಿರಸ್ಕರಿಸಿದ ಕೇಂದ್ರ ಸಚಿವರು ಹಾಗೂ ಬಿಜೆಪಿ ಮುಖಂಡರನ್ನು ಪೊಲೀಸರು ಭಾನುವಾರ ಬೆಳಿಗ್ಗೆ ಬಿಡುಗಡೆ ಮಾಡಿದರು.

ಲಾಲ್ ಬಜಾರ್‌ನಲ್ಲಿರುವ ಪೊಲೀಸ್ ಪ್ರಧಾನ ಕಚೇರಿಯಿಂದ ಹೊರಬಂದು ಸುದ್ದಿಗಾರರೊಂದಿಗೆ ಮಾತನಾಡಿದ ಮಜುಂದಾರ್ ಅವರು, 'ಪಶ್ಚಿಮ ಬಂಗಾಳವು ಪ್ರಜಾಪ್ರಭುತ್ವವನ್ನು ಕೊಲ್ಲುವ ರಾಜ್ಯವಾಗಿ ಮಾರ್ಪಟ್ಟಿದೆ' ಎಂದು ದೂರಿದರು.

ಮುಖ್ಯಾಂಶಗಳು

- ಬಿಜೆಪಿಯಿಂದ ಜಾಮೀನು ನಿರಾಕರಣೆ ಆಂದೋಲನ
- ಪಶ್ಚಿಮ ಬಂಗಾಳದ ವಿವಿಧೆಡೆ ವಿಪಕ್ಷಗಳ ಪ್ರತಿಭಟನೆ
- ಮುಖ್ಯಮಂತ್ರಿ ವಿರುದ್ಧ ಮಜುಂದಾರ್ ವಾಗ್ದಾಳಿ

ಪ್ರತಿಭಟನೆಯ ವೇಳೆ ಬಂಧನಕ್ಕೊಳಗಾದವರು ಪೊಲೀಸ್ ಠಾಣೆಗಳಲ್ಲಿ ವೈಯಕ್ತಿಕ ಬಾಂಡ್ ಸಲ್ಲಿಸಿ ಜಾಮೀನು ಪಡೆಯುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಒತ್ತಾಯಿಸಿ, 'ಜಾಮೀನು ನಿರಾಕರಣೆ' ಆಂದೋಲನ ನಡೆಸುವುದಾಗಿ ಹೇಳಿದರು.

ಕೋಲ್ಕತ್ತದ ಶಿಕ್ಷಣ ಸಂಸ್ಥೆಗಳ ಒಳಗೆ ಎಂಟು ತಿಂಗಳ ಅವಧಿಯಲ್ಲಿ ಎರಡು ಸಾಮೂಹಿಕ ಅತ್ಯಾಚಾರ ಘಟನೆಗಳು ನಡೆದಿವೆ. ಆಡಳಿತ ಎಲ್ಲಿದೆ? ಎಂದು ಕೇಂದ್ರ ಸಚಿವರು ಹರಿಹಾಯ್ದರು.

ಶಾಸಕನಿಗೆ ಶೋಕಾಸ್ ನೋಟಿಸ್

ಸಾಮೂಹಿಕ ಅತ್ಯಾಚಾರದ ಕುರಿತಂತೆ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಶಾಸಕ ಮದನ್ ಮಿತ್ರಾ ಅವರಿಗೆ ತೃಣಮೂಲ ಕಾಂಗ್ರೆಸ್ ಭಾನುವಾರ ಶೋಕಾಸ್ ನೋಟಿಸ್ ನೀಡಿದೆ.

'ಪಕ್ಷದ ನಿಯಮಗಳನ್ನು ಉಲ್ಲಂಘಿಸಿ ಹೇಳಿಕೆ ನೀಡಿದ್ದೀರಿ. ಮೂರು ದಿನಗಳಲ್ಲಿ ಉತ್ತರಿಸಿ' ಎಂದು ಟಿಎಂಸಿ ರಾಜ್ಯ ಘಟಕದ ಅಧ್ಯಕ್ಷ ಸುಬ್ರತಾ ಭಕ್ಷಿ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತೆಯನ್ನು ಪೊಲೀಸರು ಬಂಧಿಸಿದರು — ಪಿಟಿಐ ಚಿತ್ರ

' 'ವಿದ್ಯಾರ್ಥಿನಿಯು ಒಬ್ಬಂಟಿಯಾಗಿ ಕಾಲೇಜಿಗೆ ಹೋಗದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಅಲ್ಲಿಗೆ ಹೋಗುವಾಗ ತನ್ನೊಟ್ಟಿಗೆ ಸ್ನೇಹಿತರನ್ನು ಕರೆದೊಯ್ಯಬೇಕಿತ್ತು ಅಥವಾ ಪರಿಚಯದವರಿಗೆ ತಿಳಿಸಬೇಕಿತ್ತು. ಈ ಘಟನೆಯು ವಿದ್ಯಾರ್ಥಿನಿಯರಿಗೆ ಸಂದೇಶವೊಂದನ್ನು ನೀಡಿದೆ. ಆ ಹುಡುಗಿ ಅಲ್ಲಿಗೆ ಹೋಗದಿದ್ದರೆ, ಈ ಘಟನೆ ಸಂಭವಿಸುತ್ತಿರಲಿಲ್ಲ' ಎಂದಿದ್ದರು.

ಅತ್ಯಾಚಾರ ನಡೆದ ದಕ್ಷಿಣ ಕೋಲ್ಕತ್ತದಲ್ಲಿರುವ ಕಾನೂನು ಕಾಲೇಜಿಗೆ ಬಿಜೆಪಿಯು ಶನಿವಾರ ರಾತ್ರಿ ಪ್ರತಿಭಟನಾ ಜಾಥಾವನ್ನು ಹಮ್ಮಿಕೊಂಡಿತ್ತು. ಇದನ್ನು ತಡೆದ ಪೊಲೀಸರು ಪ್ರಮುಖರನ್ನು ಬಂಧಿಸಿದ್ದರು.

> ರಾಜ್ಯದಲ್ಲಿ ಮಹಿಳಾ ಮುಖ್ಯಮಂತ್ರಿ ಇದ್ದರೂ, ಮಹಿಳೆಯರ ಮೇಲೆ ದೌರ್ಜನ್ಯದ ಘಟನೆಗಳು ನಿರ್ಭಯದಿಂದ ನಡೆಯುತ್ತಿವೆ
> **ಸುಕಾಂತ ಮಜುಂದಾರ್,** ಕೇಂದ್ರ ಸಚಿವ

> ಟಿಎಂಸಿಯ ಗೂಂಡಾಗಳು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಅತ್ಯಾಚಾರದಿಂದ 'ರಾಷ್ಟ್ರದ ಆತ್ಮಸಾಕ್ಷಿ'ಗೆ ಆಘಾತವಾಗಿದೆ
> **ಧರ್ಮೇಂದ್ರ ಪ್ರಧಾನ್,** ಕೇಂದ್ರ ಸಚಿವ

ಸೋಮವಾರ, ಜೂನ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 180 | ಪುಟ 14

prajavani.net prajavani ● www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯೋಧರ ಗೌರವಾರ್ಥ ಚಾರಣ

1965ರ ಭಾರತ– ಪಾಕಿಸ್ತಾನ ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ಸ್ಮರಣಾರ್ಥ ಫಿಯರಿ 15ನೇ ಬೆಟಾಲಿಯನ್‌ನ ಯೋಧರ ತಂಡವೊಂದು ಹಿಮಾಚಲಪ್ರದೇಶದ ಸರಿ ಪಾಸ್‌ಗೆ ಚಾರಣ ಆರಂಭಿಸಿದೆ.

ಹೊಸ ಬದುಕು

ವೈವಾಹಿಕ ಜೀವನದಿಂದ ದೂರವಾಗಿದ್ದ ಸುಮಾರು 90 ದಂಪತಿಯನ್ನು ಉತ್ತರ ಪ್ರದೇಶದ ಪೊಲೀಸರು ಆಪ್ತ ಸಮಾಲೋಚನೆಯ ಮೂಲಕ ಒಂದುಗೂಡಿಸಿದ್ದಾರೆ.

ಹಸಿರು ಅಂಕಣದಲ್ಲಿ ವಿಂಬಲ್ಡನ್ ವೈಭವ 8

ಅನಂತ್ ಅಂಬಾನಿಗೆ ₹20 ಕೋಟಿ ವೇತನ 4

ಜುಲೈ ಕೊನೆಗೆ ಜಾತಿ ಸಮೀಕ್ಷೆ ವರದಿ

ಒಳ ಮೀಸಲು: ಪರಿಶಿಷ್ಟ ಜಾತಿ ಸಮೀಕ್ಷೆ ಇಂದು ಮುಕ್ತಾಯ
ದತ್ತಾಂಶಗಳ ವಿಶ್ಲೇಷಣೆ: ಇ ಆಡಳಿತ ಇಲಾಖೆ ಜತೆ ಚರ್ಚೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಶಿಫಾರಸು ಮಾಡಲು ರಾಜ್ಯ ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಜುಲೈ ಅಂತ್ಯಕ್ಕೆ ಶಿಫಾರಸುಗಳ ಸಹಿತ ವರದಿ ಸಲ್ಲಿಸಲು ಸಿದ್ಧತೆ ನಡೆಸಿದೆ.

ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳ ದತ್ತಾಂಶ ಸಂಗ್ರಹಿಸಲು ರಾಜ್ಯದಾದ್ಯಂತ ನಡೆಯುತ್ತಿರುವ 'ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆ'ಯು ಸೋಮವಾರ (ಜೂನ್ 30) ಮುಕ್ತಾಯ ವಾಗಲಿದೆ. ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಶಿಫಾರಸುಗಳ ಸಹಿತ ಜುಲೈ ಅಂತ್ಯದ ಒಳಗೆ ವರದಿ ಸಲ್ಲಿಸಬೇಕೆಂಬ ಉದ್ದೇಶ ದಿಂದ, ಸಂಗ್ರಹಿಸಿರುವ ದತ್ತಾಂಶ ಗಳನ್ನು ವಿಶ್ಲೇಷಿಸಲು ಇ- ಆಡಳಿತ ಇಲಾಖೆಯ ಜೊತೆ ಚರ್ಚೆ ನಡೆಸಲಾಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಮೇ 5ರಿಂದ ಪರಿಶಿಷ್ಟ ಜಾತಿಯ ಕುಟುಂಬಗಳ ಮನೆ ಮನೆ ಸಮೀಕ್ಷೆ ಆರಂಭಗೊಂಡಿತ್ತು. ರಾಜ್ಯದಲ್ಲಿ 2025ರ ವೇಳೆಗೆ ಪರಿಶಿಷ್ಟ ಜಾತಿಯವರ ಜನಸಂಖ್ಯೆಯನ್ನು ಅಂದಾಜಿಸಿ (1.16 ಕೋಟಿ) ಹೋಲಿಸಿದಾಗ ಜೂನ್ 27ರವರೆಗೆ ಇಡೀ ರಾಜ್ಯದಲ್ಲಿ ಸಮೀಕ್ಷೆಯಲ್ಲಿ ಶೇಕಡ 91ರಷ್ಟು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇಕಡಾ 51ರಷ್ಟು ಪ್ರಗತಿ ಆಗಿದೆ.

2025ರ ಅಂದಾಜು ಜನಸಂಖ್ಯೆಗೆ ಹೋಲಿಸಿದರೆ 12 ಜಿಲ್ಲೆಗಳಲ್ಲಿ ಶೇ 100 ಮತ್ತು ಅದಕ್ಕಿಂತ ಹೆಚ್ಚು ಜನರು ಸಮೀಕ್ಷೆಯಲ್ಲಿ ಭಾಗಿ ಆಗಿದ್ದಾರೆ. ಈ ಪೈಕಿ, ಹಾವೇರಿ ಜಿಲ್ಲೆಯಲ್ಲಿ ಅತೀ ಹೆಚ್ಚು ಜನರು ಮಾಹಿತಿ ನೀಡಿದ್ದಾರೆ. ಒಂಬತ್ತು ಜಿಲ್ಲೆಗಳಲ್ಲಿ ಶೇ 95ರಿಂದ ಶೇ 99ರಷ್ಟು, ಏಳು ಜಿಲ್ಲೆಗಳಲ್ಲಿ ಶೇ 90ರಿಂದ ಶೇ 94ರಷ್ಟು ಜನರು ನೋಂದಾಯಿಸಿ ಕೊಂಡಿದ್ದಾರೆ. ದಕ್ಷಿಣ ಕನ್ನಡದಲ್ಲಿ ಶೇ 89, ರಾಮನಗರ ದಲ್ಲಿ ಶೇ 86, ಬೆಂಗಳೂರು ನಗರ ಜಿಲ್ಲೆ (ಬಿಬಿಎಂಪಿ ಹೊರತುಪಡಿಸಿ) ಶೇ 80ರಷ್ಟು ಜನರು ಸಮೀಕ್ಷೆಯಲ್ಲಿ ಭಾಗವಹಿಸಿ ಮಾಹಿತಿ ನೀಡಿದ್ದಾರೆ.

2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 1.04 ಕೋಟಿ ಪರಿಶಿಷ್ಟ ಜಾತಿಯವರಿದ್ದು, ಆ ಪೈಕಿ, ಆದಿ ಆಂಧ್ರ (ಎಎ), ಆದಿ ಕರ್ನಾಟಕ (ಎಕೆ), ಆದಿ ದ್ರಾವಿಡ (ಎಡಿ) ಎಂದು 44 ಲಕ್ಷ (ಶೇಕಡ 43.36) ಜನ ಘೋಷಿಸಿಕೊಂಡಿದ್ದರು. ಕೆಲವು ಜಿಲ್ಲೆಗಳಲ್ಲಿ 'ಆದಿ ಕರ್ನಾಟಕ' ಎಂದು ಹೊಲೆಯರೂ ಬರೆಸಿ ಕೊಂಡಿದ್ದರು. ಮಾದಿಗರೂ ಘೋಷಿಸಿ ಕೊಂಡಿದ್ದರು. ಆದಿ ದ್ರಾವಿಡರೂ ಇದೇ ರೀತಿ ಬರೆಸಿಕೊಂಡಿದ್ದರು. ಎಎ, ಎಕೆ, ಎಡಿ ಎನ್ನುವುದು ಒಂದೊಂದು ಜಾತಿಯಲ್ಲ ಬದಲಾಗಿ 'ಜಾತಿಗಳ ಗುಂಪು'. ಹೀಗಾಗಿ, ಈ ಜನರು ಸಮೀಕ್ಷೆಯಲ್ಲಿ ತಮ್ಮ ಉಪ ಜಾತಿಗಳನ್ನು ನಮೂದಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದರೂ 8 ಲಕ್ಷ ಹೆಚ್ಚು ಜನರು ನಾನಾ ಕಾರಣಗಳಿಗೆ ತಮ್ಮ ಉಪ ಜಾತಿಯನ್ನು ನಮೂದಿಸಿಲ್ಲ. ಒಳ ಮೀಸಲಾತಿಗೆ ವರ್ಗೀಕರಣ ಮಾಡುವ ಹಂತದಲ್ಲಿ ಎಎ, ಎಕೆ, ಎಡಿ ಎಂದು ನಮೂದಿಸಿರುವ ಒಟ್ಟು ಜನಸಂಖ್ಯೆ- ಯನ್ನು ಗಂಭೀರವಾಗಿ ಪರಿಗಣಿಸಿ, ಪರಿಹಾರ ಕಂಡುಕೊಳ್ಳಲಾಗುವುದು.

2-3 ದಿನಗಳಲ್ಲಿ ಈ ಅಂಕಿಸಂಖ್ಯೆಗಳು ಸ್ಪಷ್ಟವಾಗಲಿವೆ ಎಂದು ಆಯೋಗದ ಮೂಲಗಳು ತಿಳಿಸಿವೆ.

'ಕೆಲವು ಕುಟುಂಬಗಳಿಗೆ ಮೂಲ ಜಾತಿ ಗೊತ್ತಿದ್ದರೂ ಆ ಜಾತಿಗಳು ಪರಿಶಿಷ್ಟರ 101 ಜಾತಿಗಳ ಪಟ್ಟಿಯಲ್ಲಿ ಇಲ್ಲ. ಅಂಥವರು ಉಪ ಜಾತಿ ಹೇಳಿದರೂ ನಮೂದಿಸಲು ಸಾಧ್ಯ ಆಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ 'ಮನ್ಸ', ಕೊಡಗಿನ 'ಕೆಂಬಟ್ಟಿ', ಉಡುಪಿಯ 'ಮೇರ', ರಾಯಚೂರಿನ 'ಮಾದಿಗ ದಾಸಿರಿ' ಇಂತಹ ಕೆಲವು ಉಪ ಜಾತಿಗಳು ಎಕೆ, ಎಡಿ, ಎಎ ಆಗಿಯೇ ಮುಂದುವರಿಯಲಿವೆ.

▶8

ಒಳ ಮೀಸಲು ಸಮೀಕ್ಷೆ

1.04 ಕೋಟಿ 2011ರ ಜನಗಣತಿಯಲ್ಲಿ ಪರಿಶಿಷ್ಟರ ಸಂಖ್ಯೆ

1.16 ಕೋಟಿ 2025ರ ಅಂದಾಜು ಪರಿಶಿಷ್ಟರ ಜನಸಂಖ್ಯೆ

1.06 ಕೋಟಿ ಸಮೀಕ್ಷೆಗೆ ಒಳಪಟ್ಟವರು (ಜೂನ್ 27ರವರೆಗೆ)

91% 2025ರ ಅಂದಾಜು ಪರಿಶಿಷ್ಟರ ಜನಸಂಖ್ಯೆ ಹೋಲಿಸಿದರೆ ಶೇಕಡಾವಾರು

ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಹಿಂದುಳಿದಿರುವಿಕೆ, ಉದ್ಯೋಗದಲ್ಲಿ ಪ್ರಾತಿನಿಧ್ಯ ಕೊರತೆ ಗುರುತಿಸಿ ಒಳ ಮೀಸಲಾತಿಗೆ ಉಪ ಜಾತಿಗಳನ್ನು ವರ್ಗೀಕರಿಸಲಾಗುವುದು
ಎಚ್.ಎನ್. ನಾಗಮೋಹನದಾಸ್, ನಿವೃತ್ತ ನ್ಯಾಯಮೂರ್ತಿ

ಪರಿಶಿಷ್ಟ ಕೇರಿಗಳಲ್ಲೂ 'ತಾರತಮ್ಯ'

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಲ್ಲಿ, 10 ಜಾತಿಯವರು ಒಟ್ಟಿಗೆ ವಾಸ ಮಾಡುವ ಒಂದೇ ಒಂದು ಕೇರಿ ರಾಜ್ಯದಲ್ಲಿ ಇಲ್ಲ. ಆ ಮೂಲಕ, ಈ ಜಾತಿಗಳ ನಡುವೆಯೇ ತಾರತಮ್ಯ ಇರುವ ಅಂಶ ಸಮೀಕ್ಷೆಯಲ್ಲಿ ಬಹಿರಂಗವಾಗಿದೆ. 'ಹೊಲೆಯರ ಕೇರಿಯೇ ಬೇರೆ. ಮಾದಿಗರ ಕೇರಿಯೇ ಬೇರೆ. ಬೋವಿ, ಲಂಬಾಣಿ ಸಮುದಾಯದವರ ಕೇರಿಗಳೇ ಬೇರೆ. ಈ ಉಪಜಾತಿಯವರು ಒಬ್ಬರ ಮನೆಗೆ ಇನ್ನೊಬ್ಬರು ಹೋಗುವುದಿಲ್ಲ. ಒಬ್ಬರು ಮಾಡಿದ ಅಡುಗೆಯನ್ನು ಇನ್ನೊಂದು ಜಾತಿಯವರು ತಿನ್ನುವುದಿಲ್ಲ. ಒಂದು ಜಾತಿಯವರ ಬಾವಿಯಿಂದ ಇನ್ನೊಂದು ಜಾತಿಯವರು ನೀರು ಸೇದುವುದಿಲ್ಲ. ಹೆಣ್ಣು ಕೊಡುವ, ತರುವ ಸಂಬಂಧವೂ ಇಲ್ಲ. ಇದರರ್ಥ, ಈ ಯಾವುದೇ ಜಾತಿಗಳೂ ಸಮಾನಾಂತರ ಜಾತಿಗಳಲ್ಲ' ಎಂದು ಆಯೋಗ ತಿಳಿಸಿದೆ.

ಸರ್ಕಾರದ ಸಿಬ್ಬಂದಿಯಲ್ಲೂ 'ಎಎ', 'ಎಕೆ', 'ಎಡಿ'

ಸರ್ಕಾರದ 43 ಇಲಾಖೆಗಳಿಂದ ಪರಿಶಿಷ್ಟ ಜಾತಿಯವರ ಮಾಹಿತಿ ಸಂಗ್ರಹಿಸಲಾಗಿದೆ. ಅದರಲ್ಲೂ ಶೇ 25ರಷ್ಟು ಸಿಬ್ಬಂದಿ ಎಎ, ಎಡಿ, ಎಎ ಎಂದೇ ನಮೂದಿಸಿಕೊಂಡಿದ್ದು, ಉಪ ಜಾತಿಯನ್ನು ಹೇಳಿಕೊಂಡಿಲ್ಲ. ನಿಗಮಗಳಲ್ಲೂ ಇದೇ ಪರಿಸ್ಥಿತಿಯಿದೆ. ಪರಿಶಿಷ್ಟ ಜಾತಿಯ ಫಲಾನುಭವಿಗಳಲ್ಲಿ ಉಪ ಜಾತಿಯ ಮಾಹಿತಿ ಸಿಕ್ಕಿಲ್ಲ. ಪರಿಶಿಷ್ಟ ಜಾತಿಯವರಿಗಾಗಿಯೇ ಇರುವ ಏಳು ನಿಗಮಗಳಿಂದ ಮಾತ್ರ ಉಪ ಜಾತಿವಾರು ಫಲಾನುಭವಿಗಳ ಪಟ್ಟಿ ಲಭ್ಯವಾಗಿದೆ. ಇನ್ನು ಮೊದಲ ಸಾರ್ವತ್ರಿಕ ಚುನಾವಣೆ ನಡೆದ 1952ರಿಂದ 2024ರವರೆಗೆ ಲೋಕಸಭೆ, ವಿಧಾನಸಭೆಗೆ ಆಯ್ಕೆಯಾದವರ ಮಾಹಿತಿಯನ್ನೂ ಸಂಗ್ರಹಿಸಲಾಗಿದೆ. ಚುನಾವಣಾ ಆಯೋಗ ಕೂಡಾ ಪರಿಶಿಷ್ಟ ಜಾತಿ ಎಂದಷ್ಟೆ ಮಾಹಿತಿ ನೀಡಿದೆ. ಮನೆ, ಮನೆ ಸಮೀಕ್ಷೆಯ ವೇಳೆ ಈ ಜನಪ್ರತಿನಿಧಿಗಳ ಉಪಜಾತಿ ಗೊತ್ತಾಗಿದೆ. ಆ ವೇಳೆಯಲ್ಲೂ 'ಎಎ', 'ಎಕೆ', 'ಎಡಿ' ಎಂದು ನಮೂದಿಸಿರುವ ಸಾಧ್ಯತೆಯೂ ಇದೆ. ದತ್ತಾಂಶಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ಪರಿಗಣಿಸಲಾಗುವುದು ಎಂದು ಆಯೋಗ ತಿಳಿಸಿದೆ.

ಕೆರೆಗೆ ಹೂವಿನ ಹೊದಿಕೆ...

ಚಿತ್ರ: ರಂಗಸ್ವಾಮಿ

ಕೊಡಗು ಜಿಲ್ಲೆಯ ಕುಶಾಲನಗರದ ಬೈಚನಹಳ್ಳಿಯ ತಾವರೆಕೆರೆಯಲ್ಲಿ ಅರಳಿರುವ ಹೂಗಳು ಹೊದಿಕೆ ಹೊದಿಸಿದಂತೆ ಕಾಣುತ್ತಿದ್ದು, ಕಣ್ಮನ ಸೆಳೆಯುತ್ತಿವೆ

ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಬಾನು

ಕನ್ನಡ ಸಾಹಿತ್ಯ ಪರಿಷತ್ ● ಕಾರ್ಯಕಾರಿ ಸಮಿತಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯಲ್ಲಿ ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ನಿರೀಕ್ಷೆಯಂತೆಯೇ ಲೇಖಕಿ, ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವ ಕನ್ನಡ ಸಾಹಿತ್ಯ ಪರಿಷತ್ತು ಹೊಸ ಪದ್ಧತಿಯನ್ನು ಆರಂಭಿಸಿದೆ.

ಬಳ್ಳಾರಿ ನಗರದ ಹೋಟೆಲ್‌ನಲ್ಲಿ ಭಾನುವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಅಂತಿಮಗೊಳಿಸಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಮಾಧ್ಯಮಗಳಿಗೆ ತಿಳಿಸಿದರು.

▶4

'ಭಿನ್ನ ದನಿಗಳನ್ನು ಕೇಳಿಸಿಕೊಳ್ಳಬೇಕಿದೆ, ಸಮಯ ಕೊಡಿ'

ಬಾನು ಮುಷ್ತಾಕ್

ಮೈಸೂರು: 'ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನವನ್ನು ಒಪ್ಪಬೇಕೋ, ಬೇಡವೋ ಎಂಬ ಬಗ್ಗೆ ನಿರ್ಧರಿಸಲು ನನಗೆ ಸ್ವಲ್ಪ ಸಮಯ ಬೇಕು' ಎಂದು ಲೇಖಕಿ, ಬಾನು ಮುಷ್ತಾಕ್ ಹೇಳಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಕನ್ನಡಿಗರ ದೊಡ್ಡ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಎಲ್ಲರೂ ಸೇರಿ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ. ಅವರ ನಿರ್ಧಾರ ಗೌರವಿಸುತ್ತೇನೆ, ಮನ್ನಣೆಯನ್ನೂ ಕೊಡುತ್ತೇನೆ. ಆದರೆ, ಪರಿಷತ್ತಿನ ಕೆಲವು ಜವಾಬ್ದಾರಿಗಳ ಬಗ್ಗೆ ಈಗ ಚರ್ಚೆ ನಡೆಯುತ್ತಿದ್ದು, ಅದನ್ನೂ ನಾನು ಗಮನಿಸಬೇಕಾಗಿದೆ' ಎಂದರು.

▶4

ಚಟಿಕೆ ಸುದ್ದಿ

ಮಹಾರಾಷ್ಟ್ರ: ತ್ರಿಭಾಷಾ ಸೂತ್ರದ ಆದೇಶ ವಾಪಸ್

ಫಡಣವೀಸ್

ಮುಂಬೈ (ಪಿಟಿಐ): ಮಹಾರಾಷ್ಟ್ರದ ಶಾಲೆಗಳಲ್ಲಿ ತ್ರಿಭಾಷಾ ಸೂತ್ರ ಅಳವಡಿಕೆಯ ಭಾಗವಾಗಿ 1ರಿಂದ 5ನೇ ತರಗತಿವರೆಗೆ ಹಿಂದಿಯನ್ನು ಭಾಷೆಯಾಗಿ ಪರಿಚಯಿಸಿದ್ದ ಆದೇಶವನ್ನು ಹಿಂಪಡೆದಿರುವುದಾಗಿ ಮಹಾರಾಷ್ಟ್ರ ಸರ್ಕಾರ ಘೋಷಿಸಿದೆ.

ರಾಜ್ಯ ವಿಧಾನಸಭೆಯ ಮಳೆಗಾಲದ ಅಧಿವೇಶನ ಆರಂಭದ ಹಿಂದಿನ ದಿನ ಸರ್ಕಾರ ಈ ನಿರ್ಧಾರ ಪ್ರಕಟಿಸಿದೆ. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದಲ್ಲಿ ಭಾನುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಫಡಣವೀಸ್, 'ರಾಜ್ಯದಲ್ಲಿ 1ನೇ ತರಗತಿಯಿಂದ ತ್ರಿಭಾಷಾ ಸೂತ್ರ ಅಳವಡಿಕೆ ಕುರಿತು ಸರ್ಕಾರ ಈ ವರ್ಷದ ಏಪ್ರಿಲ್ ಮತ್ತು ಜೂನ್‌ನಲ್ಲಿ ಹೊರಡಿಸಿದ್ದ ಆದೇಶಗಳನ್ನು ಹಿಂಪಡೆಯಲು ಸಂಪುಟ ನಿರ್ಧರಿಸಿದೆ' ಎಂದರು.

ಎಲ್‌ಒಸಿ ದಾಟಲು ಯತ್ನ: ಪಾಕ್ ಪ್ರಜೆ ಸೆರೆ

ಪೂಂಛ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ತಾರ್ಕುಂಡಿ ವಲಯದ ಗಡಿ ನಿಯಂತ್ರಣ ರೇಖೆಯನ್ನು (ಎಲ್‌ಒಸಿ) ದಾಟಲು ಪ್ರಯತ್ನಿಸಿದ ಆರೋಪದಡಿ, ಪಾಕಿಸ್ತಾನದ ಪ್ರಜೆಯನ್ನು ಭಾರತೀಯ ಸೇನೆ ಭಾನುವಾರ ಬಂಧಿಸಿದೆ.

ಪಾಕಿಸ್ತಾನದ ಕೊಟ್ಲಿ ಜಿಲ್ಲೆಯ ನಿಕಿಯಾಲ್ ತೆಹ್ಸಿಲ್‌ನ ಡೆಟೋಟ್ ನಿವಾಸಿ ಮೊಹಮ್ಮದ್ ಆರಿಬ್ ಅಹ್ಮದ್ ಎಂದು ಗುರುತಿಸಲಾಗಿದ್ದು, ಆತನನ್ನು ಸೇನಾಧಿಕಾರಿಗಳು ತನಿಖೆಗೆ ಒಳಪಡಿಸಿದ್ದಾರೆ. ಆರೋಪಿಯಿಂದ ಕೆಲ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಶಾಸಕರ ಜೊತೆ ಚರ್ಚೆ ಇಂದಿನಿಂದ

3 ದಿನ 40 ಶಾಸಕರ ಜತೆ ಸುರ್ಜೇವಾಲಾ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿ ವಿರುದ್ಧ ಸ್ವಪಕ್ಷೀಯ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿ- ಸುತ್ತಿರುವ ಬೆನ್ನಲ್ಲೇ, ಅದರ ಶಮನಕ್ಕಾಗಿ ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸೋಮವಾರ ದಿಂದ (ಜೂನ್ 30) ಮೂರು ದಿನ ಶಾಸಕರೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಲಿದ್ದಾರೆ.

ರಣದೀಪ್‌ಸಿಂಗ್ ಸುರ್ಜೇವಾಲಾ

'ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಯಲ್ಲಿ ಲಂಚ ಪಡೆಯ- ಲಾಗುತ್ತಿದೆ' ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ, 'ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವೇ ಇಲ್ಲ' ಎಂದು ಕಾಗವಾಡ ಶಾಸಕ ರಾಜು ಕಾಗೆ ಬಹಿರಂಗವಾಗಿ ಆರೋಪ ಮಾಡಿದ್ದಾರೆ. ಅವರಿಗೆ ಬೆಂಬಲವಾಗಿ ಇನ್ನಷ್ಟು ಶಾಸಕರು ಧ್ವನಿಗೂಡಿಸುವ ಸಾಧ್ಯತೆಯನ್ನು ಅರಿತ ಕಾಂಗ್ರೆಸ್ ಹೈಕಮಾಂಡ್, ಬೇಗುದಿ ವ್ಯಾಪಿಸುವು ದನ್ನು ತಡೆಯಲು ಮತ್ತು ಶಾಸಕರ ಅಹವಾಲು ಆಲಿಸಲು ಸುರ್ಜೇವಾಲಾಗೆ ಸೂಚನೆ ನೀಡಿದೆ.

'ಸುರ್ಜೇವಾಲಾ ಅವರು ಜೂನ್ 30ರಿಂದ ಜುಲೈ 2ರವರೆಗೆ ಕೆಪಿಸಿಸಿಯ ಭಾರತ್ ಜೋಡೊ ಭವನದಲ್ಲಿ ಶಾಸಕರ ಜೊತೆ ಪಕ್ಷ ಸಂಘಟನೆ ಮತ್ತು ಅಭಿವೃದ್ಧಿ ಕುರಿತು ಚರ್ಚೆ ನಡೆಸಲಿದ್ದಾರೆ. ವೇಳಾಪಟ್ಟಿಗೆ ಅನುಸಾರವಾಗಿ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಬಹುದು' ಎಂದು ಶಾಸಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪತ್ರ ಬರೆದಿದ್ದಾರೆ.

▶4

ಸುರ್ಜೇವಾಲಾ ಅವರು ಶಾಸಕರನ್ನು ಖುದ್ದಾಗಿ ಭೇಟಿ ಮಾಡಲಿದ್ದಾರೆ. ಈ ಬಗ್ಗೆ ಅವರೇ ಶಾಸಕರಿಗೆ ತಿಳಿಸಿದ್ದಾರೆ. ನಾನು ಕೂಡ ಶಾಸಕರಿಗೆ ಮಾಹಿತಿ ನೀಡಿದ್ದೇನೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪ್ರತ್ಯೇಕ ಸಭೆ

ಸುರ್ಜೇವಾಲಾ ಅವರು ಬಿ.ಆರ್. ಪಾಟೀಲ ಮತ್ತು ರಾಜು ಕಾಗೆ ಅವರ ಜೊತೆ ಮೊದಲು ಪ್ರತ್ಯೇಕವಾಗಿ ಸಭೆ ನಡೆಸಲಿದ್ದಾರೆ. ಇಬ್ಬರಿಗೂ ತಲಾ ಅರ್ಧ ಗಂಟೆಯ ಸಮಯಾವಕಾಶ ನೀಡಲಾಗಿದೆ. ಈ ಇಬ್ಬರನ್ನಲ್ಲದೆ, ಮೂರು ದಿನಗಳಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಿರುವ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ಗೌರಿಬಿದನೂರಿನ ಪಕ್ಷೇತರ ಶಾಸಕ ಪುಟ್ಟಸ್ವಾಮಿಗೌಡ, ಬೆಂಗಳೂರು ವಿಭಾಗದ 27 ಶಾಸಕರು ಸೇರಿ 40 ಶಾಸಕರ ಜೊತೆ ಸುರ್ಜೇವಾಲಾ ಚರ್ಚೆ ನಡೆಸಲಿದ್ದಾರೆ. ಪ್ರತಿಯೊಬ್ಬ ಶಾಸಕರಿಗೂ ತಲಾ 20 ನಿಮಿಷಗಳ ಸಮಯಾವಕಾಶ ನೀಡಲಾಗಿದೆ.

'ಸೆಪ್ಟೆಂಬರ್ ನಂತರ ರಾಜ್ಯದಲ್ಲಿ ರಾಜಕೀಯ ಕ್ರಾಂತಿ ನಡೆಯಲಿದೆ' ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹಾಗೂ 'ವರ್ಷಾಂತ್ಯದಲ್ಲಿ ಸರ್ಕಾರದಲ್ಲಿ ಸಣ್ಣಪುಟ್ಟ ಬದಲಾವಣೆ ಆಗಲಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಇತ್ತೀಚೆಗೆ ನೀಡಿದ ಹೇಳಿಕೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಸೇರಿದಂತೆ ನಾನಾ ಚರ್ಚೆಗಳಿಗೆ ಕಾರಣವಾಗಿದೆ. ಇದೇ ವೇಳೆ, ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಸಿಗುತ್ತಿಲ್ಲ ಎಂದು ಹಲವು ಶಾಸಕರು ಬಹಿರಂಗವಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ, ಸಂಭಾವ್ಯ ಸಂಪುಟ ಪುನಾರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಪಕ್ಷದೊಳಗೆ ಧ್ವನಿ ಎದ್ದಿದೆ. ಸರ್ಕಾರ ಎರಡು ವರ್ಷ ಪೂರ್ಣಗೊಳಿಸಿರುವ ಕಾರಣ ಸಂಪುಟ ಪುನರ್ ರಚನೆಗೆ ಕಾಂಗ್ರೆಸ್‌ನಲ್ಲಿ ಒತ್ತಡ ಹೆಚ್ಚಾಗುತ್ತಿದೆ. ಈ ಬೆನ್ನಲ್ಲೇ, ಶಾಸಕರ ಜೊತೆ ಸುರ್ಜೇವಾಲಾ ಅವರು ಸಭೆ ನಡೆಸುತ್ತಿರುವುದು ಮಹತ್ವ ಪಡೆದುಕೊಂಡಿದೆ.

50 ಮಂದಿಗೆ ಗಾಯ ● ಆರು ಮಂದಿಯ ಸ್ಥಿತಿ ಗಂಭೀರ

ಪುರಿ: ಮತ್ತೊಮ್ಮೆ ಕಾಲ್ತುಳಿತ, 3 ಸಾವು

ಪುರಿ (ಪಿಟಿಐ): ಪುರಿ ಜಗನ್ನಾಥ ದೇವರ ರಥಯಾತ್ರೆಗೆ ಸಂಬಂಧಿಸಿ ಭಾನುವಾರ ಇಲ್ಲಿನ ಶ್ರೀ ಗುಂಡಿಚಾ ದೇವಾಲಯದ ಬಳಿ ಧಾರ್ಮಿಕ ಆಚರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಬೆಳಗಿನ ಜಾವ 4.20ಕ್ಕೆ ಕಾಲ್ತುಳಿತ ಸಂಭವಿಸಿದೆ. ಈ ಘಟನೆಯಲ್ಲಿ ಇಬ್ಬರು ಮಹಿಳೆಯರು ಮತ್ತು ಒಬ್ಬ ಪುರುಷ ಮೃತಪಟ್ಟಿದ್ದು, 50 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಆರು ಮಂದಿಯ ಸ್ಥಿತಿ ಗಂಭೀರವಾಗಿದೆ.

ಶುಕ್ರವಾರ ಆರಂಭಗೊಂಡಿದ್ದ ರಥಯಾತ್ರೆ ವೇಳೆ ಕಾಲ್ತುಳಿತ ಸಂಭವಿಸಿ, 500 ಮಂದಿ ಗಾಯಗೊಂಡಿದ್ದರು.

ಪ್ರಕರಣದ ತನಿಖೆಯನ್ನು 30 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ತಿಳಿಸಿದ್ದಾರೆ.

ಪುರಿ ಜಗನ್ನಾಥ, ದೇವಿ ಸುಭದ್ರ ಹಾಗೂ ಬಾಲಚಂದ್ರ ದೇವರ ಮೂರ್ತಿಗಳಿದ್ದ ರಥವು ಗುಂಡಿಚಾ ದೇವಾಲಯದ ಬಳಿ ನಿಲುಗಡೆಗೊಂಡಿತ್ತು. ದೇವರ ಮೂರ್ತಿಗೆ ಅಡ್ಡಲಾಗಿ ಹಾಕಲಾಗಿದ್ದ ಪರದೆಯನ್ನು ಸರಿಸುವಾಗ ಕಾಲ್ತುಳಿತ ಸಂಭವಿಸಿದೆ. ಪರದೆ ತೆರೆಯುತ್ತಿದ್ದಂತೆಯೇ ದೇವರ ಮೂರ್ತಿಗಳನ್ನು ಕಾಣಲು ಭಕ್ತರು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದರು.

'ಧಾರ್ಮಿಕ ವಿಧಿಯ ವಸ್ತುಗಳಿದ್ದ ಎರಡು ಟ್ರಕ್‌ಗಳು ರಥದ ಸಮೀಪಕ್ಕೆ ಬರಬೇಕಿದ್ದವು. ರಥದ ಸಮೀಪವೇ ಸಾವಿರಾರು ಭಕ್ತರು ಸೇರಿದ್ದರು. ಟ್ರಕ್ ಕಾರಣಕ್ಕಾಗಿ ಸ್ಥಳದಲ್ಲಿ ಗಲಿಬಿಲಿ ಉಂಟಾಯಿತು' ಎಂದು ಪೊಲೀಸರು ತಿಳಿಸಿದರು.

▶4

ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಸ್ಥರು ಆಸ್ಪತ್ರೆಯ ಮುಂಭಾಗ ಭಾನುವಾರ ರೋದಿಸಿದರು —ಪಿಟಿಐ ಚಿತ್ರ

ಭಕ್ತೆಯ ಮನೆಗೆ ಹೋಗುವ ಜಗನ್ನಾಥ

ಗುಂಡಿಚಾ ದೇವಸ್ಥಾನವು ಪುರಿ ಜಗನ್ನಾಥ ದೇವಸ್ಥಾನದಿಂದ ಮೂರು ಕಿ.ಮೀ ದೂರದಲ್ಲಿದೆ. ಗುಂಡಿಚಾ ದೇವಿಯು ಜಗನ್ನಾಥನ ಭಕ್ತೆ ಎಂದು ಹೇಳಲಾಗುತ್ತದೆ. ಈಕೆಯ ಭಕ್ತಿಗೆ ಮೆಚ್ಚಿ ಜಗನ್ನಾಥನು, 'ಪ್ರತಿ ವರ್ಷ ರಥಯಾತ್ರೆಯ ವೇಳೆ ನಿಮ್ಮ ಮನೆಗೆ ಬರುತ್ತೇನೆ' ಎಂದು ಹೇಳಿದ್ದನು ಎಂಬುದಾಗಿ ಪುರಾಣಗಳಲ್ಲಿ ಹೇಳಲಾಗಿದೆ. ಇದರಂತೆ ರಥಯಾತ್ರೆ ಆರಂಭವಾದ ಬಳಿಕ ರಥವು ಗುಂಡಿಚಾ ದೇವಾಲಯಕ್ಕೆ ಬರುತ್ತದೆ. ಏಳು ದಿನಗಳವರೆಗೆ ಇಲ್ಲೇ ಇರುತ್ತದೆ. ಬಳಿಕ, ಜಗನ್ನಾಥ ದೇವಸ್ಥಾನಕ್ಕೆ ರಥವು ವಾಪಸಾಗುತ್ತದೆ. ಈ ಬಾರಿ ಜುಲೈ 5ಕ್ಕೆ ರಥವು ಮರಳಲಿದೆ.

ಸರ್ಕಾರದ ಹಾಗೂ ನನ್ನ ಪರವಾಗಿ ಪುರಿ ಜಗನ್ನಾಥನ ಭಕ್ತರಲ್ಲಿ ಕ್ಷಮೆ ಕೇಳುತ್ತೇನೆ. ದೇವರ ಮೂರ್ತಿಯನ್ನು ನೋಡಲು ಭಕ್ತರಲ್ಲಿದ್ದ ಅತ್ಯುತ್ಸಾಹದಿಂದಲೇ ಘಟನೆ ಸಂಭವಿಸಿದೆ
ಮೋಹನ್ ಚರಣ್ ಮಾಝಿ, ಒಡಿಶಾ ಮುಖ್ಯಮಂತ್ರಿ

ಕಾಲ್ತುಳಿತದಲ್ಲಿ ನೂರಾರು ಮಂದಿ ಗಾಯಗೊಂಡು ಒಂದು ದಿನ ಬಳಿಕವೇ ಮತ್ತೊಮ್ಮೆ ಕಾಲ್ತುಳಿತ ಸಂಭವಿಸಿದೆ. ಶಾಂತಿಯುತವಾಗಿ ಆಚರಣೆಯನ್ನು ನಡೆಸಲು ಸಾಧ್ಯವಾಗದೇ ಇರುವುದು ಸರ್ಕಾರದ ವೈಫಲ್ಯ
ನವೀನ್ ಪಟ್ನಾಯಕ್
ಒಡಿಶಾ ವಿಧಾನಸಭೆ ವಿರೋಧ ಪಕ್ಷದ ನಾಯಕ

ರಾಜ್ಯ ಸರ್ಕಾರದ ಕ್ರಮಗಳು

- ಪುರಿ ಜಿಲ್ಲೆಯ ಜಿಲ್ಲಾಧಿಕಾರಿ ಸಿದ್ಧಾರ್ಥ್ ಶಂಕರ್ ಸ್ವೈನ್ ಹಾಗೂ ಎಸ್‌ಪಿ ವಿನೀತ್ ಅಗರ್ವಾಲ್ ವರ್ಗಾವಣೆ. ಇಬ್ಬರು ಪೊಲೀಸ್ ಅಧಿಕಾರಿಗಳ ಅಮಾನತು
- ಕಾಲ್ತುಳಿತ ಕುರಿತು ತನಿಖೆಗೆ ಆದೇಶ
- ಮೃತರ ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ಘೋಷಣೆ
- ರಥಯಾತ್ರೆ ಸಂಬಂಧ ಇನ್ನೂ ಹಲವು ಆಚರಣೆಗಳು ನಡೆಯಬೇಕಿರುವುದರಿಂದ ಕೆಲವು ಹಿರಿಯ ಐಪಿಎಸ್ ಹಾಗೂ ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಜವಾಬ್ದಾರಿ

ಜುಲೈ 8ರೊಳಗೆ ವ್ಯಾಪಾರ ಒಪ್ಪಂದ ಸಾಧ್ಯತೆ ಕಡಿಮೆ

● ಜ್ಞಾನೇಂದ್ರ ಕೇಶ್ರಿ

ನವದೆಹಲಿ: ಅಮೆರಿಕ ಮತ್ತು ಭಾರತ ನಡುವಿನ ಬಹು ನಿರೀಕ್ಷಿತ ವ್ಯಾಪಾರ ಒಪ್ಪಂದವು ನಿಗದಿತ ಗಡುವು ಜುಲೈ 8ರ ಒಳಗೆ ಪೂರ್ಣಗೊಳ್ಳುವ ಸಾಧ್ಯತೆ ಕಡಿಮೆ ಎಂದು ಮೂಲಗಳು ಹೇಳಿವೆ.

ಏಪ್ರಿಲ್ 2ರಂದು ಅಮೆರಿಕವು ಪ್ರತಿ ಸುಂಕ ಹೇರಿತ್ತು. ಇದಕ್ಕೆ 90 ದಿನಗಳ 'ವಿರಾಮ' ಘೋಷಿಸಿತ್ತು. 'ವಿರಾಮ'ವು ಜುಲೈ 9ರ ವರೆಗೆ ಜಾರಿಯಲ್ಲಿ ಇರಲಿದೆ. ಹೀಗಾಗಿ, ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ಕುರಿತಂತೆ ಅನಿಶ್ಚಿತ ಸ್ಥಿತಿ ಮನೆ ಮಾಡಿದ್ದು, ಇದು ರಫ್ತುದಾರರ ಆತಂಕ ಹೆಚ್ಚಿಸಿದೆ.

ಹೈನುಗಾರಿಕೆ ಮತ್ತು ಕೃಷಿ ಕ್ಷೇತ್ರಗಳ ಹಿತಾಸಕ್ತಿ ಕಾಪಾಡುವುದಕ್ಕೆ ಭಾರತ ಒತ್ತು ನೀಡಿದೆ. ಈ ವಿಚಾರವು ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ವಿಳಂಬವಾಗಲು ಕಾರಣ ಎಂದೂ ಮೂಲಗಳು ಹೇಳಿವೆ.

ಸೇಬು ಹಣ್ಣುಗಳು, ಕುಲಾಂತರಿ ಆಹಾರಗಳು ಸೇರಿ ಕೃಷಿ ಉತ್ಪನ್ನಗಳು, ಹೈನು ಉತ್ಪನ್ನಗಳಿಗೆ ರಿಯಾಯಿತಿ ತೆರಿಗೆ ಪಡೆಯುವ ಮೂಲಕ ತನ್ನ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು ಮುಕ್ತವಾಗಿಸಿಕೊಳ್ಳಲು ಅಮೆರಿಕ ಪ್ರಯತ್ನಿಸುತ್ತಿದೆ ಎಂದು ಇವೇ ಮೂಲಗಳು ತಿಳಿಸಿವೆ.

ಆದರೆ, ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಾಜಿಯಾಗಲು ಭಾರತ ಒಪ್ಪಿಲ್ಲ. ಅದರಲ್ಲೂ, ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ರಿಯಾಯಿತಿಯು ಭಾರತ ಈವರೆಗೆ ಸಹಿ ಮಾಡಿದ ಯಾವುದೇ ವ್ಯಾಪಾರ ಒಪ್ಪಂದಗಳ ಭಾಗವೂ ಆಗಿಲ್ಲ. ಇದೇ ವೇಳೆ, 'ಭಾರತದ ಹಿತಾಸಕ್ತಿ ಕಾಪಾಡುವುದು ನಮ್ಮ ಆದ್ಯತೆ' ಎಂದು ಕೇಂದ್ರ ಸರ್ಕಾರದ ಮೂಲವೊಂದು ಹೇಳಿದೆ.

▶8

ಮುಖ್ಯಾಂಶಗಳು

- ಗಡುವಿನೊಳಗೆ ಒಪ್ಪಂದ ಆಗದಿದ್ದಲ್ಲಿ ಭಾರತಕ್ಕೆ ಪರಿಷ್ಕೃತ ಸುಂಕದ ಭೀತಿ
- ಸಮಾಲೋಚನೆ: ಅಮೆರಿಕದಲ್ಲಿ ಭಾರತದ ನಿಯೋಗ

ಬಿಡ್‌ಗೆ ನಿರಾಸಕ್ತಿ: 'ಪಿಪಿಪಿ' ಮಾದರಿಯ ಯೋಜನೆ ಕೈಬಿಟ್ಟ ಸರ್ಕಾರ

'ಇ.ವಿ' ಚಾರ್ಜಿಂಗ್ ಕೇಂದ್ರಗಳಿಗೆ ಗ್ರಹಣ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡಲು ರಾಜ್ಯದ ವಿವಿಧೆಡೆ 2,500 'ಇವಿ ಚಾರ್ಜಿಂಗ್ ಕೇಂದ್ರ'ಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ರದ್ದಾಗಿದೆ.

22 ಜಿಲ್ಲೆಗಳಿಗೆ 605 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಟೆಂಡರ್ ಕರೆಯಲಾಗಿತ್ತು. ಅದರಲ್ಲಿ 4 ಜಿಲ್ಲೆಗಳಿಗೆ ಕೇವಲ ಒಬ್ಬ ಬಿಡ್ಡುದಾರ ಭಾಗವಹಿಸಿದ್ದು, ಉಳಿದ 18 ಜಿಲ್ಲೆಗಳಲ್ಲಿ ಬಿಡ್‌ಗಳೇ ಸ್ವೀಕೃತವಾಗಿಲ್ಲ. ಹೀಗಾಗಿ ಯೋಜನೆಯನ್ನೇ ಕೈಬಿಡಲು ಸರ್ಕಾರ ಆದೇಶ ಹೊರಡಿಸಿದೆ.

ಮೊದಲ ಹಂತದಲ್ಲಿ 1,190 ಮತ್ತು 2ನೇ ಹಂತದಲ್ಲಿ 1,310 ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಆದೇಶ ಹೊರಡಿಸಿತ್ತು. ಯೋಜನೆಯ ನೋಡಲ್ ಸಂಸ್ಥೆಯಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು 'ಕ್ರಿಯಾಯೋಜನೆ' ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿತ್ತು.

2023–24ನೇ ಸಾಲಿನಲ್ಲಿ ರಾಜ್ಯದ 9 ಜಿಲ್ಲೆಗಳಲ್ಲಿ ಒಟ್ಟು 585 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಕಾರ್ಯಾದೇಶ ನೀಡಲಾಗಿದ್ದರೂ ಒಂದೂ ಸ್ಥಾಪನೆಯಾ- ಗಲಿಲ್ಲ. 2024–25ರಲ್ಲಿ ಇನ್ನುಳಿದ 22 ಜಿಲ್ಲೆಗಳಲ್ಲಿ 605 ಕೇಂದ್ರಗಳ ಸ್ಥಾಪನೆಗೆ ಟೆಂಡರ್ ಕರೆಯಲಾಗಿತ್ತು. ಅದರಲ್ಲಿ 4 ಜಿಲ್ಲೆಗಳಿಗೆ ಒಬ್ಬರಷ್ಟೇ ಭಾಗವಹಿಸಿದ್ದರು.

ಪ್ರತಿ ಯೂನಿಟ್‌ಗೆ ₹1 ಆದಾಯ: ಸರ್ಕಾರಿ ಸಂಸ್ಥೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳಿಂದ ಸ್ಥಾಪಿಸಲಾಗುವ ಚಾರ್ಜಿಂಗ್ ಕೇಂದ್ರಗಳಿಗೆ ಸ್ಥಳ ಒದಗಿಸುವ ಸರ್ಕಾರಿ ಇಲಾಖೆಗಳಿಗೆ ಚಾರ್ಜಿಂಗ್‌ನಿಂದ ದಾಖಲಾಗುವ ಪ್ರತಿ ಯೂನಿಟ್ ಮೇಲೆ ₹1 ಆದಾಯ ಮತ್ತು ಪಿಪಿಪಿ ಮಾದರಿಯಲ್ಲಿ ಕರೆಯಲಾಗುವ ಟೆಂಡರ್‌ನಲ್ಲಿ ಪ್ರತಿ ಯೂನಿಟ್ ಮೇಲೆ ₹1 ಆದಾಯ ಹಂಚಲು ಆದೇಶ ಹೊರಡಿಸಲಾಗಿತ್ತು.

ವಿದ್ಯುತ್ ಚಾಲಿತ ವಾಹನಗಳ ಖರೀದಿಗೆ ಸಬ್ಸಿಡಿ ಇಳಿಕೆಯಾಗಿದೆ. ಮತ್ತೊಂದು ಕಡೆ ಚಾರ್ಜಿಂಗ್ ಸ್ಟೇಷನ್‌ಗಳ ಕೊರತೆಯಿದೆ. ಹೀಗಾಗಿ ಉದ್ಯಮಕ್ಕೆ ಹೊಡೆತ ಬೀಳುತ್ತದೆ
ವಿನಯಕುಮಾರ್, ಮಾಲೀಕರು, ಇ-ಮಾಂಡವ್ಯ ಮೋಟಾರ್ಸ್, ಮಂಡ್ಯ

ಹಿನ್ನಡೆಗೆ ಕಾರಣಗಳೇನು?

- ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ವರದಿ ಸಲ್ಲಿಸಿ, ಹಿನ್ನಡೆಗೆ ಕಾರಣಗಳನ್ನು ವಿವರಿಸಿದ್ದಾರೆ
- ಕಾರ್ಯಾದೇಶ ಪಡೆದ ಏಜೆನ್ಸಿಗಳಿಗೆ ಇತರೆ ಇಲಾಖೆಗಳು ಭೂಗುತ್ತಿಗೆ ಒಪ್ಪಂದವನ್ನು ಕಾರ್ಯಗತಗೊಳಿಸಲು ಸಹಕಾರ ನೀಡಲಿಲ್ಲ
- ಏಜೆನ್ಸಿ ನಿಯಮಗಳ ಪ್ರಕಾರ ಅನೂಕೂಲಕರ ಸ್ಥಳಗಳನ್ನು ಗುರುತಿಸುವುದು ಸಾಧ್ಯವಾಗಲಿಲ್ಲ
- ಎಲೆಕ್ಟ್ರಿಕ್ ವಾಹನಗಳು ನಿರೀಕ್ಷಿತ ಮಟ್ಟದಲ್ಲಿ ಬಳಕೆಯಲ್ಲಿರದ ಕಾರಣ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದರಿಂದ ಏಜೆನ್ಸಿಗಳಿಗೆ ಆರ್ಥಿಕ ಹೊರೆಯಾಗುತ್ತದೆ

100 ಕೇಂದ್ರ ಸ್ಥಾಪನೆ: ಬೆಸ್ಕಾಂಗೆ ಆದೇಶ

ಪಿಪಿಪಿ ಮಾದರಿಯಲ್ಲಿ 'ಇ.ವಿ ಚಾರ್ಜಿಂಗ್ ಕೇಂದ್ರ'ಗಳನ್ನು ತೆರೆಯಲು ಹಿನ್ನಡೆಯಾದ ಬೆನ್ನಲ್ಲೇ ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ ₹35 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧೆಡೆ 100 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ವಹಿಸುವಂತೆ ನೋಡಲ್ ಸಂಸ್ಥೆಯಾದ ಬೆಸ್ಕಾಂಗೆ ಸರ್ಕಾರ ಆದೇಶಿಸಿದೆ.

▶8

ಜುಲೈ 4ರಂದು 'ನಾಡ ಉಳಿಸಿ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ರೈತರ ಭೂಮಿ ಸ್ವಾಧೀನಪಡಿಸಿಕೊಳ್ಳುವುದನ್ನು ಕೈಬಿಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದಕ್ಕಾಗಿ ಜುಲೈ 4ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ 'ನಾಡ ಉಳಿಸಿ ಸಮಾವೇಶ' ನಡೆಸಲು ಸಂಯುಕ್ತ ಹೋರಾಟ ಕರ್ನಾಟಕ, ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿ ಹಾಗೂ ಸಮಾನ ಮನಸ್ಕ ಸಂಘಟನೆಗಳ ಮುಖಂಡರು ನಿರ್ಧರಿಸಿದ್ದಾರೆ.

ಭೂ ಸ್ವಾಧೀನ ವಿರೋಧಿಸಿ 'ಭೂಮಿ ಸತ್ಯಾಗ್ರಹ' ನಡೆಯುತ್ತಿರುವ ಫ್ರೀಡಂ ಪಾರ್ಕ್‌ನಲ್ಲಿ ಭಾನುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಗಳ ಮುಖಂಡರು, 'ಸಮಾವೇಶದಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಿಂದಲೂ ರೈತ ಪರ ಹೋರಾಟಗಾರರು, ಸಮಾನ ಮನಸ್ಕರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

▶8

ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

[Financially Sound and Well Managed Bank as per RBI Parameters Dated 01-12-2022]

ಸ್ಥಾಪನೆ : 1976
ಆಡಳಿತ ಕಛೇರಿ : ನಂ.195/33 , "ಶ್ರೀ ಸುಧಾ ರಜತ ಭವನ", 1ನೇ ಮಹಡಿ ಆರ್.ವಿ.ರಸ್ತೆ , ಜಯನಗರ , ಬೆಂಗಳೂರು-560 004. ದೂರವಾಣಿ : 26565651, 26560195, 8867701055 ಫ್ಯಾಕ್ಸ್ : 26567189
Email : generalmanager@srisudhabank.com Website : www.srisudhabank.com

ದಿನಾಂಕ: 31-03-2025ಕ್ಕೆ ಅಂತ್ಯಗೊಂಡ 2024-2025ನೇ ಸಾಲಿನ ಲಾಭ ಮತ್ತು ನಷ್ಟದ ತಃಖ್ತೆ

31-03-2024ಕ್ಕೆ ಮೊಬಲಗು	ಕ್ರಮ. ಸಂಖ್ಯೆ	ನಷ್ಟಾಂಶಗಳು		31-03-2025ಕ್ಕೆ ಮೊಬಲಗು	31-03-2024ಕ್ಕೆ ಮೊಬಲಗು	ಕ್ರಮ. ಸಂಖ್ಯೆ	ಲಾಭಾಂಶಗಳು		31-03-2025ಕ್ಕೆ ಮೊಬಲಗು
	1	ಠೇವಣಿ ಮೇಲೆ ಬಡ್ಡಿ ಪಾವತಿಸಿದ್ದು	265034320.75			1	ಬಡ್ಡಿ ಮತ್ತು ಸೋಡಿ	415100647.66	
198200811.66		(-) ಅಂತರ ಶಾಖಾ ಬಡ್ಡಿ	49355804.00	215678516.75	362667226.93		(-) ಅಂತರ ಶಾಖಾ ಬಡ್ಡಿ	49355804.00	365744843.66
73260648.00	2	ಸಿಬ್ಬಂದಿ ವೇತನ, ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ		72964193.00	349682.00	2	ದಳ್ಳಾಳಿ ಮತ್ತು ವಿನಿಮಯಗಳು		318007.00
------		ನಿರ್ದೇಶಕರು/ಉಪಸಮಿತಿ ಸದಸ್ಯರ ಫೀ		------	1437500.00	3	ಸರ್ಕಾರಿ ಋಣಪತ್ರಗಳ ಮಾರಾಟದಿಂದ ಬಂದ ಲಾಭ		3429715.00
12690681.40	3	ಕರ/ದರ/ವಿಮೆ/ವಿದ್ಯುತ್/ಇತರೆ		13637177.80	13636717.74	4	ಇತರೆ ಆದಾಯಗಳು		11104028.21
72000.00		ಕಾನೂನು ಸಲಹಾ ಶುಲ್ಕ		0.00					
540668.00	4	ಅಂಚೆ ಮತ್ತು ದೂರವಾಣಿ		773609.00					
1807470.00	5	ಆಡಿಟ್ ಶುಲ್ಕ		1881453.00					
5276317.00	6	ಸವಕಳಿ ಮತ್ತು ರಿಪೇರಿ		6664055.28					
2058697.68	7	ಮುದ್ರಣ ಮತ್ತು ಲೇಖನ ಸಾಮಾಗ್ರಿ/ಜಾಹೀರಾತು		1403038.99					
100210.00	8	ಇತರೆ ಆಸ್ತಿ ಮಾರಾಟದಿಂದ ನಷ್ಟ		183741.00					
9193960.00	9	ಪ್ರಾವಿಜನ್ ಅಂಡ್ ಕಂಟಿಂಜೆನ್ಸೀಸ್		1418960.00					
13815356.94	10	ಇತರೆ ಖರ್ಚು		15967226.68					
15200000.00		ಆದಾಯ ತೆರಿಗೆ		12559404.00					
45874305.99		ನಿವ್ವಳ ಲಾಭ		37465218.37					
378091126.67		ಒಟ್ಟು		**380596593.87**	**378091126.67**		ಒಟ್ಟು		**380596593.87**

ದಿನಾಂಕ 31-03-2025ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

31-03-2024ಕ್ಕೆ ಮೊಬಲಗು	ಕ್ರಮ. ಸಂಖ್ಯೆ	ಬಂಡವಾಳ ಮತ್ತು ಜವಾಬ್ದಾರಿಗಳು		31-03-2025ಕ್ಕೆ ಮೊಬಲಗು	31-03-2024ಕ್ಕೆ ಮೊಬಲಗು	ಕ್ರಮ. ಸಂಖ್ಯೆ	ಆಸ್ತಿ ಮತ್ತು ಸ್ವತ್ತುಗಳು		31-03-2025ಕ್ಕೆ ಮೊಬಲಗು
30,00,00,000-00		ಅಧಿಕೃತ ಷೇರು ಬಂಡವಾಳ		30,00,00,000-00	269506757.32	1	ಕೈಯಲ್ಲಿರುವ ಹಾಗೂ ಬ್ಯಾಂಕ್ ಚಾಲ್ತಿ ಖಾತೆಗಳಲ್ಲಿರುವ ನಗದು		227993195.96
250251700.00	1	ಹಂಚಿಕೆಯಾಗಿರುವ ಹಾಗೂ ಪಾವತಿಯಾದ ಷೇರು ಬಂಡವಾಳ		265460700.00	649529071.08	2	ಇತರೆ ಬ್ಯಾಂಕ್ ಖಾತೆಗಳು		727653185.79
460456503.94	2	ಆಪದ್ಧನ ಮತ್ತು ಇತರೆ ನಿಧಿಗಳು		481951446.93	50000000.00	3	ಕರೆ ಠೇವಣಿ		100000000.00
------	3	ಪ್ರಿನ್ಸಿಪಲ್ ಸಬ್ಸಿಡಿಯರಿ ಸ್ಟೇಟ್ ಪಾಲುದಾರಿಕೆ ನಿಧಿ		------	1205394660.00	4	ಹೂಡಿಕೆಗಳು		1202100700.00
3690911114.07	4	ಠೇವಣಿಗಳು		4067165983.26	------	5	ಪ್ರಿನ್ಸಿಪಲ್ ಸಬ್ಸಿಡಿಯರಿ ಸ್ಟೇಟ್ ಪಾಲುದಾರಿಕೆ ನಿಧಿಯಿಂದ ಹೂಡಿಕೆ		------
------	5	ಹೊರಗಿನಿಂದ ತಂದ ಸಾಲಗಳು		------	2177193056.22	6	ಸಾಲ ಮತ್ತು ಮುಂಗಡಗಳು		2501361804.50
------	6	ಹೊಂದಾಣಿಕೆಗೆ ಬಾಕಿ ಇರುವ-ಬರತಕ್ಕ ಬಿಲ್ಲುಗಳು		------	67305965.00	7	ವಸೂಲಾಗತಕ್ಕ ಬಡ್ಡಿ		75557536.00
1697838723.77	7	ಶಾಖಾ ಹೊಂದಾಣಿಕೆಗಳು (ಕಾಂಟ್ರ)	1737133267.57		------	8	ಬರತಕ್ಕ ಬಿಲ್ಲುಗಳು		------
34062672.00	8	ಓವರ್ ಡ್ಯೂ ಇಂಟರೆಸ್ಟ್ ರಿಸರ್ವ್ (ಕಾಂಟ್ರ)		40552840.00	1697838723.77	9	ಶಾಖೆಗಳ ಹೊಂದಾಣಿಕೆ (ಕಾಂಟ್ರ)	1737133267.57	------
13124927.00	9	ಪಾವತಿಸಬೇಕಾದ ಬಡ್ಡಿ		28030063.00	17036117.00	10&11	ಸ್ಥಿರ/ಚರ ಆಸ್ತಿಗಳು (ತೇಮಾನ ನಂತರ)		24147037.60
20809446.57	10	ಇತರೆ ಜವಾಬ್ದಾರಿಗಳು		13910788.55	79525042.95	12	ಇತರೆ ಆಸ್ತಿಗಳು		75723580.26
------		ಹೊಂದಾಣಿಕೆಗೆ ಬಾಕಿಯಿರುವ ಖಾತೆ		------					
45874305.99	11	ನಿವ್ವಳ ಲಾಭ		37465218.37					
	12	**ಆಕಸ್ಮಿಕ ಹೊಣೆಗಳು**							
18905366.00		ಬ್ಯಾಂಕ್ ಗ್ಯಾರಂಟಿ ಬಾಬ್ತು	20705366.00						
6955045.34		ಡಿ.ಇ.ಎ.ಎಫ್.ಪೇಯಬಲ್	7539781.25						
24134294.00		ಗಳಿಕೆ ರಜೆ ವೇತನ ಪೇಯಬಲ್	26860981.00						
140108.00		ದಾವಾ ಖರ್ಚು	65886.00						
703017.00		ಅಮಲ್ಜಾರಿ ಖರ್ಚು	452340.00						
4515490669.57		ಒಟ್ಟು ಮೊತ್ತ		**4934537040.11**	**4515490699.57**		ಒಟ್ಟು ಮೊತ್ತ		**4934537040.11**

B. **Disclosure in financial statements - 'Notes to Accounts'**

1. Regulatory Capital - a) Composition of Regulatory Capital (Amount in crore)

Sr.No.	Particulars	31-03-2025	31-03-2024
i)	Paid up share capital and reserves (net of deductions, if any)	56.10	53.08
ii)	Other Tier 1 capital including 25% of net profit	1.19	1.15
iii)	Tier 1 capital (i + ii)	57.29	54.23
iv)	Tier 2 capital	6.20	4.99
v)	Total capital (Tier 1+Tier 2)	63.49	59.22
vi)	Total Risk Weighted Assets (RWAs)	264.11	218.76
vii)	Paid-up share capital and reserves as percentage of RWAs	21.24%	24.26%
viii)	Tier 1 Ratio (Tier 1 capital as a percentage of RWAs)	21.69%	24.79%
ix)	Tier 2 Ratio (Tier 2 capital as a percentage of RWAs)	2.35%	2.28%
x)	Capital to Risk Weighted Assets Ratio (CRAR) (Total Capital as a percentage of RWAs)	24.04%	27.07%

2. Asset liability management - a) Maturity pattern of certain items of assets and liabilities (Amount in crore)

	Day 1	2 to 7 days	8 to 14 Days	15 to 30 Days	31 days to 2 months	Over 2 months and to 3 months	Over 3 months and up to 6 Months	Over 6 months and up to 1 year	Over 1 year and up to 3 years	Over 3 years and up to 5 years	Over 5 years	Total
Deposits	73.25	19.67	9.91	15.42	24.84	27.46	55.13	147.89	29.97	0.92	2.26	406.72
Advances	5.52	0.32	1.11	7.80	2.83	6.32	10.75	35.58	9.87	26.93	143.11	250.14
Investments	-	-	-	-	-	-	-	-	-	-	100.00	100.00
Borrowings	-	-	-	-	-	-	-	-	-	-	-	-

3. Investments - a) Composition of Investment Portfolio (Amount in crore)

Particulars	As on 31-03-2025				As on 31-03-2024			
	Government Securities	Other Approved Securities	Others	Total investments in India	Government Securities	Other Approved Securities	Others	Total investments in India
Held to Maturity								
Gross	80.12	-	20.21	100.33	80.14	-	0.12	80.26
Less: Provision for non- performing investments (NPI)		-			0	-	-	0
Net	80.12	-	20.21	100.33	80.14	-	0.12	80.26
Held for Trading								
Gross	19.88	-	-	19.88	40.28	-	-	40.28
Less: Provision for depreciation and NPI / LICMF / TSIICL	1.06	-		1.06	1.06	-	-	1.06
Net	18.82	-	-	18.82	39.22	-	-	39.22
Total Investments	100.00	-	20.21	120.21	120.41	-	0.12	120.53
Less: Provision for non-performing investments	-	-	-	-	0	-	-	0
Less: Provision for depreciation and NPI	1.06	-	-	1.06	1.06	-	-	1.06
Net	98.94	-	20.21	119.15	119.35	-	0.12	119.35

b) Movement of Provisions for Depreciation and Investment Fluctuation Reserve (Amount in crore)

Particulars	31-03-2025	31-03-2024
i) Movement of provisions held towards depreciation on investments		
a) Opening balance	1.06	1.92
b) Add: Provisions made during the year	-	-
c) Less: Write off / write back of excess provisions during the year	-	0.86
d) Closing balance	1.06	1.06
ii) Movement of Investment Fluctuation Reserve		
a) Opening balance	2.90	1.75
b) Add: Provisions made during the year	-	1.15
c) Less: Write off / write back of excess provisions during the year	-	-
d) Closing balance	2.90	2.90
iii) Closing balance in IFR as a percentage of closing balance of investments in AFS and HFT/Current category	14.59%	7.20%

c) Sale and transfers to/from HTM category: Securities amounting to Rs. Nil transferred from AFS to HTM category at the beginning of the year.

d) Non-SLR investment portfolio : i) Non-performing Non-SLR investments : NIL
ii) Issuer composition of non-SLR investments (Amount in crore)

Sr. No.	Issuer	Amount		Extent of Private Placement		Extent of Below Investment Grade Securities		Extent of Unrated Securities		Extent of Unlisted Securities	
(1)	(2)	(3)		(4)		(5)		(6)		(7)	
		31-03-2025	31-03-2024	31-03-2025	31-03-2024	31-03-2025	31-03-2024	31-03-2025	31-03-2024	31-03-2025	31-03-2024
a)	PSUs										
b)	FIs										
c)	Banks										
d)	Private Corporates										
e)	Subsidiaries/ Joint Ventures										
f)	Others (NTPCL) / LICMF/TSIICL	20.21	0.12	20.21	0.12	NIL	NIL	NIL	NIL	NIL	NIL
g)	Provision held towards depreciation										
	Total *	20.21	0.12	20.21	0.12	NIL	NIL	NIL	NIL	NIL	NIL

e) Repo transactions (in face value terms) : NIL

4) Asset quality: *a) Classification of advances and provisions held* (Amount in crore)

Particulars	Standard	Non-Performing				Total
	Total Standard Advances	Sub- standard	Doubtful	Loss	Total Non-Performing Advances	
Gross Standard Advances and NPAs						
Opening Balance	212.37	0.93	3.29	1.13	5.35	217.72
Add: Additions during the year	107.27	2.69	1.85	0	4.54	111.81
Less: Reductions during the year*	76.79	0.81	1.79	0	2.60	79.39
Closing balance	242.85	2.81	3.35	1.13	7.29	250.14
Reductions in Gross NPAs due to						
i) Upgradation						
ii) Recoveries (excluding recoveries from upgraded accounts)						
iii) Technical/ Prudential16 Write-offs						
iv) Write-offs other than those under (iii) above						
Provisions (excluding Floating Provisions)						
Opening balance of provisions held (including excess provision held)	1.03	0.25	5.64	1.13	7.02	8.05
Add: Fresh provisions made during the year	0.12	0.03	0	0	0.03	0.15
Less: Excess provision reversed/ Write-off loans	0	0	0.03	0	0.03	0.03
Closing balance of provisions held	1.15	0.28	5.61	1.13	7.02	8.17
Net NPAs						
Opening Balance	-	0	0	0	0	0
Add: Fresh additions during the year	-	0	0	0	0	0
Less: Reductions during the year	-	0	0	0	0	0
Closing Balance	-	-	-	-	-	-

Ratios (in per cent)	Current Year 31-03-2025	Previous Year 31-03-2024
Gross NPA to Gross Advances	2.91%	2.46%
Net NPA to Net Advances	0.11%	0%
Provision coverage ratio	96.27%	131.11%

b) Sector-wise Advances and Gross NPAs (Amount in crore)

Sl. No.	Sector	Current Year 31-03-2025			Previous Year 31-03-2024		
		Outstanding Total Advances	Gross NPAs	Percentage of Gross NPAs to Total Advances in that sector	Outstanding Total Advances	Gross NPAs	Percentage of Gross NPAs to Total Advances in that sector
i)	Priority Sector						
a)	Agriculture and allied activities						
b)	Advances to industries sector eligible as priority sector lending	0.83					
c)	Services	78.11	0.93	1.19%			
d)	Personal loans & Others	45.70	0.93	2.03%	104.36	3.93	3.76%
	Subtotal (i)	124.64	1.86	1.49%	104.36	3.93	3.76%
ii)	Non-priority Sector						
a)	Agriculture and allied activities						
b)	Industry						
c)	Services	106.37	2.11	1.98%			
d)	Personal loans & Others	19.13	3.32	17.35%	113.36	1.42	1.25%
	Sub-total (ii)	125.50	5.43	4.33%	113.36	1.42	1.25%
	Total (I + ii)	250.14	7.29	2.91%	217.72	5.35	2.46%

c) Particulars of resolution plan and restructuring: NIL

d) Fraud account (Amount in crores)

	Current year 31-03-2025	Previous year 31-03-2024
Number of frauds reported	6	6
Amount involved in fraud	0.93	0.93
Amount of provision made for such frauds	0.93	0.93
Amount of Unamortized provision debited from 'other reserves' as at the end of the year	NIL	NIL

e) Disclosure under Resolution Framework for COVID-19-related Stress: Format for disclosures to be made half yearly starting September 30, 2021 (Amounts in crore)

Type of borrower	Exposure to accounts classified as Standard consequent to implementation of resolution plan– Position as at the end of the previous half-year (A)	Of (A), aggregate debt that slipped into NPA during the half- year	Of (A) amount written off during the half-year	Of (A) amount paid by the borrowers during the half- year	Exposure to accounts classified as Standard consequent to iimplementation of resolution plan – Position as at the end of this half-year
Personal Loans					
Corporate persons*					
Of which MSMEs					
Others & personal	32.84	1.53	-	9.65	23.19
Total	32.84	1.53	-	9.65	23.19

5) Exposures: *a) Exposure to real estate sector* (Amount in crore)

Category	Current Year 31-03-2025	Previous Year 31-03-2024
Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	8.74	6.98
Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits;	42.82	37.07
Total Exposure to Real Estate Sector	51.56	44.05

b) Risk category-wise country exposure: NIL

c) Unsecured advances (Amounts in crore)

Particulars	Current Year 31-03-2025	Previous Year 31-03-2024
Total unsecured advances of the bank	**19.41**	**21.32**

6) Concentration of deposits, advances, exposures and NPAs: *a) Concentration of deposits* (Amount in crore)

Particulars	Current Year 31-03-2025	Previous Year 31-03-2024
Total deposits of the twenty largest depositors	**88.29**	**72.08**
Percentage of deposits of twenty largest depositors to total deposits of the bank	**21.79%**	**19.53%**

b) Concentration of advances (Amount in crore)

Particulars	Current Year 31-03-2025	Previous Year 31-03-2024
Total advances to the twenty largest borrowers	**81.93**	**69.40**
Percentage of advances to twenty largest borrowers to total advances of the bank	**32.87%**	**31.88%**

c) Concentration of NPAs (Amount in crore)

Particulars	Current Year 31-03-2025	Previous Year 31-03-2024
Total Exposure to the top twenty NPA accounts	**3.62**	**1.95**
Percentage of exposures to the twenty largest NPA exposure to total Gross NPAs.	**49.66%**	**36.45%**

7) Transfers to Depositor Education and Awareness Fund (DEA Fund) (Amount in crore)

Sl. No	Particulars	Current Year 31-03-2025	Previous Year 31-03-2024
i)	Opening balance of amounts transferred to DEA Fund	**0.70**	**0.65**
ii)	Add: Amounts transferred to DEA Fund during the year	**0.06**	**0.05**
iii)	Less: Amounts reimbursed by DEA Fund towards claims	**0.0021**	**0.0032**
iv)	Closing balance of amounts transferred to DEA Fund	**0.75**	**0.70**

8) **Disclosure of complaints : NIL**

9) **Disclosure of penalties imposed by the Reserve Bank of India : NIL**

10) **Other Disclosures: *a) Business ratios***

Sl. No.	Particular	Current Year 31-03-2025	Previous Year 31-03-2024
i	Interest Income as a percentage to Working Funds	7.45%	8.11%
ii	Non-interest income as a percentage to Working Funds	0.33%	0.41%
iii	Cost of Deposits	6.70%	6.31%
iv	Net Interest Margin	3.00%	3.75%
v	Operating Profit as a percentage to Working Funds	1.06%	1.60%
vi	Return on Assets	0.77%	1.03%
vii	Business (deposits plus advances) per employee (in crore)	9.12	8.76
viii	Profit per employee (in crore)	0.05	0.07

b) Provisions and contingencies (Amount in crore)

Provision debited to Profit and Loss Account	Current Year 31-03-2025	Previous Year 31-03-2024
Provisions for NPI	NIL	NIL
Provision towards NPA	NIL	0.60
Provision made towards Income tax	1.26	1.52
Other Provisions and Contingencies (IDR + IFR + Housing Reserve + Amortization)	0.02	0.32

c) Payment of DICGC Insurance Premium (Amount in crore)

Sl.No.	Particulars	Current Year 31-03-2025	Previous Year 31-03-2024
i)	Payment of DICGC Insurance Premium	**0.50**	**0.40**

d) Disclosure of facilities granted to directors and their relatives : NIL

e) In accordance with the Reserve Bank of India Circular No. DOR.CAP.REC. No.30/09.18.201/2024-25 dated July 30, 2024, the Bank has transferred the brought forward balance in the Dividend Equalisation Fund (DEF), which was earlier appropriated from net profits, to the General Reserve. This transfer has been carried out as a one-time measure permitted under the said Circular to enhance regulatory capital. Consequently, the transferred amount now forms part of Tier-I capital for the purpose of computing Capital to Risk-weighted Assets Ratio (CRAR).

f) The bank has reviewed RBI Circular RBI/2024-25/58 dated August 2, 2024, and confirms that its accounting practices remain consistent with IRACP norms. As on 31-3-2024, the bank had two accounts viz., 'Reserve for Bad and Doubtful Debts' Balance of Rs.6.21 Cr.) and 'Additional BDDR for Loss Assets' (Balance of Rs.0.80 Cr.) both created through debits to the P&L Account or transfers from provisions created through debits to the P&L Account. While none of the BDDR was created from net profit appropriations as of 31-03-2024 and NPA provisions exceed the required IRACP norms, no adjustments were warranted. However, for clarity and compliance with the above circular, both the accounts 'Reserve for Bad and Doubtful Debts' and 'Additional BDDR for Loss Assets' have been renamed as BDDR / 'Provision for NPA' and Addl BDDR Loss Assets/ NPA Provision and the balance is carried under 'Reserve fund and Other Reserves'.

ಸಹಿ/-	ಸಹಿ/-	ಸಹಿ/-	ಸಹಿ/-
[ಕೋಕಿಲ ಎನ್.ಎಸ್.]	[ಮುರಳೀಧರ]	[ಟಿ. ವಾಸನ್]	[ಡಾ॥ ಎಂ.ತಿಮ್ಮೇಗೌಡ]
ಪ್ರಧಾನ ವ್ಯವಸ್ಥಾಪಕರು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ದೃಢೀಕರಣ

ನಮ್ಮ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳಂತೆ, ಬ್ಯಾಂಕಿನ ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಹಾಗೂ ಮಾಹಿತಿಗಳ ಮೇಲಿನ ಟಿಪ್ಪಣಿಗಳು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಹಾಗೂ ನಿಯಮಗಳು 1960ರಲ್ಲಿರುವ ಅವಕಾಶಗಳಂತೆ, ಅಲ್ಲದೆ ರಿಜರ್ವ ಬ್ಯಾಂಕು, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಸಿದ್ದಪಡಿಸಿರುವ ಬ್ಯಾಂಕಿನ (1) ದಿನಾಂಕ: 31.03.2025ರಂತ್ಯಕ್ಕೆ ಇರುವ ಆಸ್ತಿ ಜವಾಬ್ದಾರಿ ತಃಖ್ತೆ, (2) ಸನ್ 2024-2025ನೇ ಸಾಲಿನ ಲಾಭ ಹಾನಿ ಪತ್ರಿಕೆ ಹಾಗೂ ಸನ್ 2024-2025 ನೇ ಸಾಲಿಗೆ ಪ್ರಾರಂಭಿಕ/ಅಂತಿಮ ಶಿಲ್ಕುಗಳನ್ನೊಳಗೊಂಡ ಜಮಾ ಖರ್ಚು ತ:ಖ್ತೆಯು, ವರದಿಯಲ್ಲಿ ವಿವರವಾಗಿ ವಿಮರ್ಷಿಸಿದ ಅಲಾಯದಾ ವರದಿಗೊಳಪಟ್ಟು ಬ್ಯಾಂಕಿನ ನೈಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇವೆ.

ಬೆಂಗಳೂರು.
ದಿನಾಂಕ: 25-06-2025

ಜಿ.ಆರ್.ಎಸ್.ಎಂ. ಅಂಡ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್ **FRN 000863S**
ಸಹಿ/-
CA ಎ. ರಾಜ್ ಗೋಪಾಲ್, ಪಾಲುದಾರರು
M.No. 205296

ಚಿಟಿಕೆ ಸುದ್ದಿ

ಕರ್ಣಾಟಕ ಬ್ಯಾಂಕ್ ಸಿಇಒ ರಾಜೀನಾಮೆ

ಶ್ರೀಕೃಷ್ಣನ್ ಹರಿಹರ ಶರ್ಮ

ಬೆಂಗಳೂರು: ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಶ್ರೀಕೃಷ್ಣನ್ ಹರಿಹರ ಶರ್ಮ ಅವರ ರಾಜೀನಾಮೆಯನ್ನು ಬ್ಯಾಂಕ್‌ನ ಆಡಳಿತ ಮಂಡಳಿ ಅಂಗೀಕರಿಸಿದ್ದು, ಆ ಸ್ಥಾನಕ್ಕೆ ಹೊಸಬರನ್ನು ಗುರುತಿಸಲು ಶೋಧ ಸಮಿತಿಯನ್ನು ರಚಿಸಿದೆ.

ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ ರಾವ್ ಅವರ ರಾಜೀನಾಮೆಯನ್ನೂ ಆಡಳಿತ ಮಂಡಳಿ ಒಪ್ಪಿದೆ. ಶರ್ಮ ಅವರು ರಾಜೀನಾಮೆಗೆ ವೈಯಕ್ತಿಕ ಕಾರಣ ನೀಡಿದ್ದಾರೆ. ಮುಂಬೈಗೆ ವಾಪಸ್ಸಾಗುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಶರ್ಮ ಅವರ ರಾಜೀನಾಮೆಯು ಜುಲೈ 15ರಿಂದ ಅನ್ವಯ ಆಗಲಿದೆ. ರಾವ್ ಅವರ ರಾಜೀನಾಮೆ ಜುಲೈ 31ರಿಂದ ಅನ್ವಯ ಆಗಲಿದೆ ಎಂದು ಹೇಳಿದೆ.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ವೈಟ್‌ಫೀಲ್ಡ್ ಏರಿಯಾ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಅಸೋಸಿಯೇಷನ್‌ನ 2025–26ನೇ ಸಾಲಿಗೆ ಎಸ್. ಚಂದ್ರಶೇಖರನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶ್ರೀನಿವಾಸ್ ಕುಮಾರ್ ಸಿ. (ಚುನಾಯಿತ ಅಧ್ಯಕ್ಷ), ಶ್ರೀನಿವಾಸರಾಜು ಜೆ. (ಉಪಾಧ್ಯಕ್ಷ), ರಾಘವ ಕೆ. (ಕಾರ್ಯದರ್ಶಿ), ರಂಗಾರೆಡ್ಡಿ (ಜಂಟಿ ಕಾರ್ಯದರ್ಶಿ), ಅಜಯ್ ಬನ್ಸಾಲ್ (ಖಜಾಂಚಿ). ಹರಿಪ್ರಸಾದ್ ರೆಡ್ಡಿ, ದಿನೇಶ್ ಸಿ.ಎಚ್., ರೋಹನ್ ನಾಯಕ್, ವಿ. ಸೋಮಸುಂದರಂ, ಶಿವಕುಮಾರ್ ಎಂ., ಕುನಾಲ್ ವರ್ಮಾ ಅವರು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಯುವಿಸಿಇ: ಹೆಸರಿಗಷ್ಟೇ ಸ್ವಾಯತ್ತ ಸಂಸ್ಥೆ

ಖಾಲಿ ಹುದ್ದೆಗಳ ಭರ್ತಿಗೆ ಮೀನಮೇಷ ಪ್ರಸ್ತಾವಕ್ಕೆ ಸಿಗದ ಒಪ್ಪಿಗೆ

• ಎ.ಎಂ.ಸುರೇಶ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವ ವಿದ್ಯಾಲಯ (ಯುವಿಸಿಇ) ಸ್ವಾಯತ್ತ ಸಂಸ್ಥೆಯಾಗಿ ಎರಡು ವರ್ಷವಾದರೂ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಅಲ್ಲದೆ ಅಗತ್ಯವಿರುವ ಅನುದಾನವನ್ನೂ ನೀಡಿಲ್ಲ. ಇದರಿಂದಾಗಿ ಶೈಕ್ಷಣಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ.

ಯುವಿಸಿಇಯನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಬೆಂಗಳೂರು ವಿಶ್ವ ವಿದ್ಯಾಲಯದಿಂದ ಪ್ರತ್ಯೇಕಗೊಳಿಸಿ, 2023ರಲ್ಲೇ ಸ್ವಾಯತ್ತ ಸಂಸ್ಥೆಯನ್ನಾಗಿ ಘೋಷಿಸಲಾಗಿದೆ. ಆದರೆ, ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿದ ಉದ್ದೇಶ ಇನ್ನೂ ಈಡೇರಿಲ್ಲ ಎಂಬ ಅಸಮಾಧಾನ ಅಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯಿಂದಲೇ ವ್ಯಕ್ತವಾಗಿದೆ.

ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಒಟ್ಟು 3,600 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇದು ಸರ್ಕಾರಿ ಸಂಸ್ಥೆಯಾಗಿದ್ದು, ಶುಲ್ಕ ಕಡಿಮೆ ಎಂಬ ಕಾರಣಕ್ಕೆ ಬಡವರು, ಮಧ್ಯಮ ವರ್ಗದವರು ಹಾಗೂ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಹೆಚ್ಚಾಗಿ ಇಲ್ಲಿ ಸೀಟು ಆಯ್ಕೆ ಮಾಡಿಕೊಳ್ಳುತ್ತಾರೆ. ಇಲ್ಲಿ ಪ್ರವೇಶ ಪಡೆಯಲು ಪೈಪೋಟಿ ಇದ್ದು ಮಂಜೂರಾದ ಎಲ್ಲ ಸೀಟುಗಳು ಭರ್ತಿಯಾಗುತ್ತವೆ.

ಮುಖ್ಯಾಂಶಗಳು

- 3,600 ವಿದ್ಯಾರ್ಥಿಗಳು ವ್ಯಾಸಂಗ
- ಪ್ರವೇಶ ಪಡೆಯಲು ಪೈಪೋಟಿ
- ಮಂಜೂರಾದ ಎಲ್ಲ ಸೀಟುಗಳು ಭರ್ತಿ

ಬೋಧಕರ ವಿಭಾಗದಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ 139. ಆದರೆ, ಪ್ರಸ್ತುತ 66 ಮಂದಿ ಅಷ್ಟೇ ಕಾಯಂ ಸಿಬ್ಬಂದಿ ಇದ್ದಾರೆ. ಖಾಲಿ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದು, ಕೆಲವು ವಿಭಾಗಗಳು ಬಹುತೇಕ ಅವರ ಮೇಲೆ ಅವಲಂಬನೆಯಾಗಿವೆ. ಇನ್ನು ಬೋಧಕೇತರ ವಿಭಾಗದಲ್ಲಿ 294 ಹುದ್ದೆಗಳು ಮಂಜೂರಾಗಿದ್ದು ಕೇವಲ 30 ಮಂದಿ ಅಷ್ಟೇ ಕಾಯಂ ಸಿಬ್ಬಂದಿ ಇದ್ದಾರೆ.

ಇನ್ನೂ ಸಿಗದ ಒಪ್ಪಿಗೆ: 'ಮಂಜೂರಾಗಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಸಂಸ್ಥೆಯ ಆಡಳಿತ ಮಂಡಳಿ ನಿರ್ಧರಿಸಿದ್ದು, ಮೊದಲ ಹಂತದಲ್ಲಿ 20 ಬೋಧಕ ಮತ್ತು 30 ಬೋಧಕೇತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿ ವರ್ಷದ ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಒಪ್ಪಿಗೆ ಸಿಕ್ಕಿಲ್ಲ' ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ತಮ್ಮನೋವು ತೋಡಿಕೊಂಡರು.

ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ

ಪಠ್ಯಕ್ರಮ ಪರಿಷ್ಕರಣೆಗೆ ಸಮಿತಿ

ಪಠ್ಯಕ್ರಮ ಪರಿಷ್ಕರಣೆ ಸಂಬಂಧ ಈಗಾಗಲೇ ಸಮಿತಿ ರಚನೆಯಾಗಿದ್ದು, ದೇಶದಲ್ಲಿನ ವಿವಿಧ ಐಐಟಿಗಳು ಮತ್ತು ಕಂಪನಿಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದೆ. ಬದಲಾದ ಕಾಲಘಟ್ಟದಲ್ಲಿ ಯಾವ ರೀತಿಯ ಪಠ್ಯಕ್ರಮ ಅಗತ್ಯವಿದೆ ಎಂಬ ಬಗ್ಗೆ ಸಮಿತಿ ಪರಾಮರ್ಶೆ ನಡೆಸಿ ವರದಿ ನೀಡಲಿದೆ. ಅದನ್ನು ಆಧರಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಪಠ್ಯಕ್ರಮ ಅಳವಡಿಸಿಕೊಳ್ಳಲಾಗುವುದು ಎಂದು ಯುವಿಸಿಇ ನಿರ್ದೇಶಕ ಸುಭಾಶಿಷ್ ತ್ರಿಪಾಠಿ 'ಪ್ರಜಾವಾಣಿ'ಗೆ ತಿಳಿಸಿದರು.

ಖಾಸಗಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು ಮಾರುಕಟ್ಟೆಯಲ್ಲಿನ ಉದ್ಯೋಗಾವಕಾಶ, ಬೇಡಿಕೆಗೆ ತಕ್ಕಂತೆ ಕಾಲಕಾಲಕ್ಕೆ ಪಠ್ಯಕ್ರಮ ಪರಿಷ್ಕರಣೆ ಮಾಡುತ್ತಿವೆ. ಆದರೆ, ಯುವಿಸಿಇ ಹಲವು ವರ್ಷಗಳಿಂದ ಪಠ್ಯಕ್ರಮ ಪರಿಷ್ಕರಣೆ ಮಾಡಿಲ್ಲ. ವಾಸ್ತವದಲ್ಲಿ ಉಪಯೋಗಕ್ಕೆ ಬಾರದ ತುಂಬಾ ಹಳೆಯ ಪಠ್ಯಕ್ರಮ ಇದೆ ಎಂಬ ಅಸಮಾಧಾನ ವಿದ್ಯಾರ್ಥಿಗಳಿಂದ ವ್ಯಕ್ತವಾಗಿತ್ತು. ಇದನ್ನು ಗಮನಿಸಿ ಪಠ್ಯಕ್ರಮ ಬದಲಾವಣೆಗೆ ಸಂಸ್ಥೆಯ ಆಡಳಿತ ಮಂಡಳಿ ಮುಂದಾಗಿದೆ.

2023ರ ನಂತರ 17 ಪ್ರಾಧ್ಯಾಪಕರು ನಿವೃತ್ತಿಯಾಗಿದ್ದಾರೆ. ಇನ್ನು ಎರಡು ವರ್ಷದಲ್ಲಿ 13 ಮಂದಿ ನಿವೃತ್ತಿಯಾಗಲಿದ್ದಾರೆ. ಈ ಹುದ್ದೆಗಳನ್ನು ತುಂಬದೆ ಇದ್ದರೆ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಮಂಜೂರಾಗಿರುವ ಹುದ್ದೆಗಳನ್ನು ಸರ್ಕಾರ ಆದ್ಯತೆ ಮೇಲೆ ಭರ್ತಿ ಮಾಡಬೇಕು. 12 ವರ್ಷಗಳ ಹಿಂದೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿತ್ತು. ಅದಾದ ಬಳಿಕ ಯಾವುದೇ ನೇಮಕಾತಿಗಳು ನಡೆದಿಲ್ಲ ಎಂದು ತಿಳಿಸಿದರು.

'ಸ್ವಾಯತ್ತ ಸಂಸ್ಥೆಯಾದ ನಂತರ ಎರಡು ಹಂತಗಳಲ್ಲಿ ಸರ್ಕಾರ ₹40 ಕೋಟಿ ಅಷ್ಟೇ ಅನುದಾನ ನೀಡಿದೆ. ಇದು ತುಂಬಾ ಕಡಿಮೆ. ಹಳೆಯ ಕಟ್ಟಡಗಳ ನವೀಕರಣ, ಬಣ್ಣ ಬಳಿಯಲು ಇದನ್ನು ಬಳಸಿಕೊಳ್ಳಲಾಗುತ್ತಿದೆ. ಐಐಟಿ ಮಾದರಿಯಲ್ಲಿ ಇದನ್ನು ಅಭಿವೃದ್ಧಿ ಪಡಿಸಲು ₹500 ಕೋಟಿ ಅಗತ್ಯವಿದೆ. ಆದರೆ, ಅಷ್ಟೊಂದು ಅನುದಾನ ಬಿಡುಗಡೆಯಾಗಿಲ್ಲ' ಎಂದು ಪ್ರಾಧ್ಯಾಪಕರೊಬ್ಬರು ಹೇಳಿದರು.

ಯುವಿಸಿಇಗೆ 108 ವರ್ಷಗಳ ಇತಿಹಾಸವಿದೆ. 1917ರಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರು ಈ ಸಂಸ್ಥೆಯನ್ನು ಸ್ಥಾಪಿಸಿದ್ದು, ಪದವಿ ವಿಭಾಗದಲ್ಲಿ ಎಂಟು ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ 24 ವಿಷಯಗಳಲ್ಲಿ ವ್ಯಾಸಂಗ ಮಾಡಲು ಇಲ್ಲಿ ಅವಕಾಶವಿದೆ.

ಹೊಸ ಕ್ಯಾಂಪಸ್‌ಗೆ 52 ಎಕರೆ ಮಂಜೂರು

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಯುವಿಸಿಇಯ ಹೊಸ ಕ್ಯಾಂಪಸ್ ನಿರ್ಮಾಣಕ್ಕೆ 52 ಎಕರೆ ಜಾಗ ಮಂಜೂರಾಗಿದೆ. ಇದರ ನೀಲನಕ್ಷೆ, ಕಟ್ಟಡದ ನಕ್ಷೆ ಸಿದ್ಧಪಡಿಸಲು ಸರ್ಕಾರ ₹6.5 ಕೋಟಿ ಮಂಜೂರು ಮಾಡಿದೆ.

ಸಿದ್ಧತಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಲಿದೆ. ಇದಕ್ಕೆ ಬೇಕಾದ ಹಣವನ್ನು ಸರ್ಕಾರ ಮಂಜೂರು ಮಾಡುವ ವಿಶ್ವಾಸವಿದೆ ಎಂದು ಆಡಳಿತ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕೇತೋಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ ಮಾತನಾಡಿದರು

'ಭಕ್ತ ಭಂಡಾರದ ಕುಟೀರ ಜುಲೈ 6ಕ್ಕೆ ಉದ್ಘಾಟನೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಗ್ರಾಮೀಣ ಭಾಗದಲ್ಲಿರುವ ಕುರುಬ ಸಮಾಜದವರು ಸಂಕಷ್ಟದಲ್ಲಿದ್ದಾರೆ. ಶಿಕ್ಷಣ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸ ಮಾಡಲಾಗುತ್ತಿದೆ' ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ಕೇತೋಹಳ್ಳಿಯಲ್ಲಿ ಬೆಂಗಳೂರು ಮಟ್ಟದ ಕುರುಬ ಸಮಾಜದ ಮುಖಂಡರು, ಕುರುಬರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಕುರುಬ ಸಮಾಜ ಮಠ ಕಟ್ಟುತ್ತಿರುವುದು ಯಾವುದೇ ಧರ್ಮ, ಜಾತಿಯವರ ವಿರುದ್ಧವಲ್ಲ. ನಮ್ಮ ಸಮಾಜದ ಜೊತೆಗೆ ಎಲ್ಲ ಸಮಾಜದವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದು ನಮ್ಮ ಧ್ಯೇಯ' ಎಂದರು.

'ಬೀರೇಂದ್ರ ಕೇಶವ ತಾರಕಾನಂದ ಪುರಿ ಅವರ 19ನೇ ವರ್ಷದ ಪುಣ್ಯಾರಾಧನೆ, ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಬೆಂಗಳೂರಿನ ಕೇತೋಹಳ್ಳಿ ಶಾಖಾಮಠ 'ಭಕ್ತರ ಭಂಡಾರದ ಕುಟೀರ' ಜುಲೈ 6ರಂದು ಉದ್ಘಾಟನೆಯಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕನಕಗುರುಪೀಠ ಹೊಸದುರ್ಗದ ಈಶ್ವರಾನಂದಪುರಿ ಸ್ವಾಮೀಜಿ, ವಿವಿಧ ಜಾತಿಯ ಮಠಗಳ ಪೀಠಧ್ಯಕ್ಷರು, ಸಚಿವರು, ಶಾಸಕರು ಪಾಲ್ಗೊಳ್ಳಲಿದ್ದಾರೆ' ಎಂದರು.

ಮುಖ್ಯಾಂಶಗಳು

- ಬೆಂಗಳೂರು ಮಟ್ಟದ ಕುರುಬರ ಸಂಘದ ಪದಾಧಿಕಾರಿಗಳ ಸಭೆ
- ಸಮಾಜದವರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ಉಪಾಧ್ಯಕ್ಷ ಎಂ.ಸಿ.ರಾಜಣ್ಣ, ಲೋಕೋಪಯೋಗಿ ಇಲಾಖೆಯ ಆಡಳಿತಾಧಿಕಾರಿ ಎ.ಸೋಮಶೇಖರ್ ಇದ್ದರು.

ಸಹಕಾರ ನಗರದಲ್ಲಿ ಅಭಿಯಾನಕ್ಕೆ ಚಾಲನೆ ನೀಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

'ವಂಚನೆಯಿಂದ ರಕ್ಷಿಸಿಕೊಳ್ಳಲು ಇ–ಖಾತಾ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ಬದುಕು, ಆಸ್ತಿ, ಖಾತೆಗಳ ರಕ್ಷಣೆಯೇ ನಮ್ಮ ಗ್ಯಾರಂಟಿ. ನಿಮ್ಮ ಆಸ್ತಿ ರಕ್ಷಣೆಗೆ ನಮ್ಮ ಸರ್ಕಾರ ನಿಮ್ಮ ಮನೆ ಬಾಗಿಲಿಗೆ ಬಂದಿದೆ. ಇ-ಖಾತೆ ಮಾಡಿಸಿಕೊಳ್ಳುವ ಮೂಲಕ ನಿಮ್ಮ ಆಸ್ತಿ ರಕ್ಷಿಸಿಕೊಳ್ಳಿ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಹಕಾರ ನಗರದಲ್ಲಿ ಭಾನುವಾರ ನಡೆದ ಬಿಬಿಎಂಪಿ ಯಲಹಂಕ ವಲಯ ಮಟ್ಟದ ಇ-ಖಾತಾ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

'ನಿಮ್ಮ ಆಸ್ತಿಗಳ ದಾಖಲೆ ಸರಿಪಡಿಸಲು ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ದಾಖಲೆ ಸ್ಕ್ಯಾನ್ ಮಾಡಿಸಲಾಗಿದೆ. ಯಾರೂ ಲಂಚ ನೀಡದೇ ಆಸ್ತಿ ಖಾತಾ ದಾಖಲೆ ಪಡೆಯಬೇಕು ಎಂಬುದು ನನ್ನ ಆಲೋಚನೆ' ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಕಷ್ಟಪಟ್ಟು ದುಡಿದ ಯಾರದ್ದೋ ಮನೆ-ಆಸ್ತಿಯನ್ನು ನಕಲಿ ದಾಖಲೆ ಸೃಷ್ಟಿಸಿ ಇನ್ನಾರೋ ಕಬಳಿಸುವುದನ್ನು ತಪ್ಪಿಸಲು, ಪ್ರತಿಯೊಬ್ಬರ ಆಸ್ತಿ ಮಾಲೀಕತ್ವಕ್ಕೆ ಬಲ ತುಂಬಲು ಇ-ಖಾತಾ ವ್ಯವಸ್ಥೆ ಜಾರಿಗೆ ತರಲಾಗಿದೆ' ಎಂದು ತಿಳಿಸಿದರು.

ಇ–ಖಾತಾ ಮೇಳದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇ–ಖಾತಾ ವಿತರಿಸಿದರು. ಸಚಿವ ಕೃಷ್ಣ ಬೈರೇಗೌಡ ಉಪಸ್ಥಿತರಿದ್ದರು

'ಪೇಪರ್ ಖಾತಾ ಚಾಲ್ತಿಯಲ್ಲಿದ್ದ ಸಮಯದಲ್ಲಿ ನಕಲಿ ಖಾತೆಗಳ ಮೂಲಕ ಭೂ ಮಾಫಿಯಾದವರು ಹಲವರ ಆಸ್ತಿಗಳನ್ನು ಲಪಟಾಯಿಸಿರುವ ಉದಾಹರಣೆಗಳಿವೆ. ನಕಲಿ ದಾಖಲೆ ಸೃಷ್ಟಿಸಿ ಕಬಳಿಸುವುದನ್ನು, ಆಸ್ತಿ ಉಳಿಸಿಕೊಳ್ಳಲು ಸಂಬಂಧಪಟ್ಟವರು ಲಕ್ಷಾಂತರ ರೂಪಾಯಿ ಮಧ್ಯವರ್ತಿಗಳಿಗೆ ನೀಡುವುದನ್ನು ಕೊನೆಗೊಳಿಸಲಾಗುವುದು ಎಂದು ಹೇಳಿದರು.

'ಬ್ಯಾಟರಾಯನಪುರ ಕ್ಷೇತ್ರದಲ್ಲಿ 5 ತಿಂಗಳಲ್ಲಿ 150ಕ್ಕೂ ಹೆಚ್ಚು ಇ-ಖಾತಾ ಅಭಿಯಾನ ನಡೆಸಲಾಗಿದೆ. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ವಯಂ ಸೇವಕರು 50,000 ಜನರಿಗೆ ಉಚಿತವಾಗಿ ಇ-ಖಾತಾ ಮಾಡಿಕೊಟ್ಟಿದ್ದಾರೆ. ಈ ಮೂಲಕ ರಾಜ್ಯದಲ್ಲೇ ಅತೀ ಹೆಚ್ಚು ಇ-ಖಾತಾ ವಿತರಿಸಿರುವ ಕ್ಷೇತ್ರ ಎಂಬ ಹೆಗ್ಗಳಿಕೆಗೆ ಬ್ಯಾಟರಾಯನಪುರ ಪಾತ್ರವಾಗಿದೆ. ವಿರೋಧ ಪಕ್ಷದ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆಯೂ ಸುಳ್ಳುಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಅಭಿಯಾನದಲ್ಲಿ 4,000ಕ್ಕೂ ಅಧಿಕ ಜನ ಭಾಗ ವಹಿಸಿದ್ದರು. 1,500 ಜನಕ್ಕೆ ಸ್ಥಳದಲ್ಲೇ ಇ-ಖಾತಾ ನೀಡಲಾಯಿತು. ಅಭಿಯಾನ ಸೋಮವಾರವೂ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ ರೇವಣ್ಣ ಉಪಸ್ಥಿತರಿದ್ದರು.

ರಾಷ್ಟ್ರೀಯ ಇ-ಆಡಳಿತ ಚಿನ್ನದ ಪ್ರಶಸ್ತಿ

ಬಿಬಿಎಂಪಿಯ ಇ-ಖಾತಾ ವ್ಯವಸ್ಥೆಗೆ 2024–25ನೇ ಸಾಲಿನಲ್ಲಿ ರಾಷ್ಟ್ರೀಯ ಇ-ಆಡಳಿತ ಚಿನ್ನದ ಪ್ರಶಸ್ತಿ ಸಂದಿದೆ. 2024ರ ಅ.10ಕ್ಕೆ ಇ-ಖಾತಾ ನೀಡುವ ಬೃಹತ್ ಕಾರ್ಯ ಆರಂಭವಾಗಿತ್ತು. 2025ರ ಜೂನ್ 27ರವರೆಗೆ ಶೇ 25.5ರಷ್ಟು ಖಾತಾದಾರರು ಇ–ಖಾತಾ ಪಡೆದಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 25 ಲಕ್ಷ ಸ್ವತ್ತುಗಳ ಪೈಕಿ 5.34 ಲಕ್ಷ ಸ್ವತ್ತುಗಳಿಗೆ ಇ-ಖಾತಾ ಪೂರ್ಣಗೊಂಡಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಬಂಜಾರ ಸಂಸ್ಕೃತಿ ಕಿರುಹೊತ್ತಿಗೆ: ಲೇಖಕರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು ಕಿರು ಹೊತ್ತಿಗೆಗಳನ್ನು ಹೊರ ತರುತ್ತಿದ್ದು, ಇದಕ್ಕಾಗಿ ಲೇಖಕರಿಂದ ಅರ್ಜಿ ಆಹ್ವಾನಿಸಿದೆ.

ಸಮುದಾಯದ ಕಲೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮತ್ತು ಪರಂಪರೆಯ ವಿವಿಧ ಆಯಾಮಗಳನ್ನು ದಾಖಲಿಸಲು ಅಕಾಡೆಮಿ ಉದ್ದೇಶಿಸಿದೆ. ಯೋಜನೆಯ ಭಾಗವಾಗಿ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಕನಿಷ್ಠ 25 ಪುಟಗಳ 100 ಕೃತಿಗಳನ್ನು ಪ್ರಕಟಿಸಲು ನಿರ್ಧರಿಸಿದೆ. ಆರಂಭಿಕ ಹಂತದಲ್ಲಿ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ 50 ಕಿರು ಹೊತ್ತಿಗೆಗಳ ರಚನೆಗಾಗಿ ಲೇಖಕರನ್ನು ಆಯ್ಕೆ ಮಾಡಲಾಗುವುದು ಎಂದು ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ತಿಳಿಸಿದ್ದಾರೆ.

ಈ ಯೋಜನೆಯ ಅಡಿಯಲ್ಲಿ ಲೇಖಕರು ಬಂಜಾರ ಕಲಾ ಪರಂಪರೆ, ಬಂಜಾರ ಭಾಷೆ ಮತ್ತು ಸಾಹಿತ್ಯ, ಬಂಜಾರ ಜನಜೀವನ ಮತ್ತು ಸಂಪ್ರದಾಯಗಳು, ಆಚರಣೆಗಳು, ಹಬ್ಬಗಳು, ಬಂಜಾರ ಸಮುದಾಯದ ಹಿರಿಯ ಸಾಧಕರು, ಸಾಹಿತಿಗಳು, ಕಲಾವಿದರು ಹಾಗೂ ತಜ್ಞರು, ರಾಷ್ಟ್ರ-ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತರು, ಬಂಜಾರ ಹೋರಾಟಗಾರರು ಮತ್ತು ಪ್ರಮುಖ ಸಾಮಾಜಿಕ, ಸಾಂಸ್ಕೃತಿಕ ಮುಖಂಡರು, ಬಂಜಾರ ಪ್ರಮುಖ ಶ್ರದ್ಧಾ ಕೇಂದ್ರಗಳು, ಬಂಜಾರ ಐತಿಹಾಸಿಕ ತಾಣಗಳು, ಬಂಜಾರ ಸಮಾಜಶಾಸ್ತ್ರ, ಬಂಜಾರ ಶಿಕ್ಷಣ, ಬಂಜಾರ ನೃತ್ಯ, ಬಂಜಾರ ಸಂಗೀತ, ಬಂಜಾರ ನಾಟಕಗಳು ಹಾಗೂ ಪ್ರಯೋಗಗಳು ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕಿರು ಹೊತ್ತಿಗೆ ರಚಿಸಬಹುದು ಎಂದಿದ್ದಾರೆ.

ಆಸಕ್ತ ಲೇಖಕರು ಕೃತಿಗಳ ಶೀರ್ಷಿಕೆ, ಸಾರಾಂಶ, ಸ್ವವಿವರಗಳನ್ನು ಜುಲೈ 19ರೊಳಗೆ ಅಕಾಡೆಮಿ ಕಚೇರಿಗೆ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಯುವ ಬಂಜಾರ ಸಂಶೋಧಕರಿಗೆ ಆದ್ಯತೆ ನೀಡಲಾಗುವುದು. ಲೇಖಕರಿಗೆ ನಿಯಮಾನುಸಾರ ಗೌರವ ಸಂಭಾವನೆ ಪಾವತಿಸಲಾಗುವುದು ಎಂದು ತಿಳಿಸಿದ್ದಾರೆ.

ಅಂಚೆ ಮೂಲಕ 'ರಿಜಿಸ್ಟ್ರಾರ್, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕನ್ನಡ ಭವನ, 1ನೇ ಮಹಡಿ, ಜೆ.ಸಿ ರಸ್ತೆ, ಬೆಂಗಳೂರು-560002' ವಿಳಾಸಕ್ಕೆ ಕಳುಹಿಸಬೇಕು. ವಿವರಕ್ಕೆ: ದೂ.ಸಂ. 080 29917745 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಬಿಜೆಪಿಗೆ ಕೆ.ಎಸ್. ಈಶ್ವರಪ್ಪ ಕರೆತರಲು ಕುರುಬ ನಾಯಕರ ಒತ್ತಾಯ

ಪ್ರಜಾವಾಣಿ ವಾರ್ತೆ


ಕೆ.ಎಸ್. ಈಶ್ವರಪ್ಪ

ಬೆಂಗಳೂರು: ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕುರುಬ ಸಮುದಾಯಕ್ಕೆ ಹೆಚ್ಚಿನ ಟಿಕೆಟ್ ನೀಡಬೇಕು ಮತ್ತು ಪಕ್ಷದ ಸಂಘಟನೆಯಲ್ಲೂ ಪ್ರಮುಖ ಸ್ಥಾನಗಳನ್ನು ನೀಡಬೇಕು ಎಂದು ಬಿಜೆಪಿಯಲ್ಲಿನ ಕುರುಬ ಸಮುದಾಯದ ನಾಯಕರು ಒತ್ತಾಯಿಸಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಲ್ಲಿ ಬಿ.ವೈ.ವಿಜಯೇಂದ್ರ ಅವರೇ ಮುಂದುವರಿಯಬೇಕು. ಕೆ.ಎಸ್. ಈಶ್ವರಪ್ಪ ಅವರನ್ನು ಮರಳಿ ಪಕ್ಷಕ್ಕೆ ಕರೆತರುವ ಸಂಬಂಧ ವರಿಷ್ಠರು ಬೇಗ ತೀರ್ಮಾನ ತೆಗೆದುಕೊಳ್ಳಬೇಕು ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಈಶ್ವರಪ್ಪ ಅವರು ಪಕ್ಷ ಕಟ್ಟಿ ಬೆಳೆಸಿದ ನಾಯಕರಲ್ಲಿ ಒಬ್ಬರು. ಕಳೆದ ಚುನಾವಣೆ ಸಂದರ್ಭದಲ್ಲಿ ಅವರನ್ನು ಉಚ್ಚಾಟಿಸಲಾಯಿತು. ರಾಜ್ಯದ ಕುರುಬ ಸಮುದಾಯದಲ್ಲಿ ಸಿದ್ದರಾಮಯ್ಯ ಅವರ ನಂತರದ ಅತಿದೊಡ್ಡ ನಾಯಕ ಈಶ್ವರಪ್ಪ. ಅವರನ್ನು ಮತ್ತೆ ಪಕ್ಷಕ್ಕೆ ಕರೆತಂದರೆ ದೊಡ್ಡ ಶಕ್ತಿ ತಂದಂತಾಗುತ್ತದೆ. ಅವರು ಸದಾ ಪಕ್ಷ ನಿಷ್ಠರು' ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಇನ್ನು ಒಂದೆರಡು ತಿಂಗಳಲ್ಲಿ ಕುರುಬ ಸಮುದಾಯದ ಬೃಹತ್ ಸಮಾವೇಶ ನಡೆಸಿ ಪಕ್ಷದ ವರಿಷ್ಠರಿಗೂ ಆಹ್ವಾನ ನೀಡುವ ಸಂಬಂಧ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯಲ್ಲಿ ಪಕ್ಷದ ನಾಯಕರಾದ ಶಾಸಕರಾದ ಬೈರತಿ ಬಸವರಾಜು, ದೊಡ್ಡನಗೌಡ ಪಾಟೀಲ, ವಿಧಾನ ಪರಿಷತ್ ಸದಸ್ಯ ರಘುನಾಥರಾವ್ ಮಲ್ಕಾಪೂರೆ, ಮಾಜಿ ಸಚಿವ ವರ್ತೂರು ಪ್ರಕಾಶ್ ಭಾಗವಹಿಸಿದ್ದರು.

₹7.10 ಲಕ್ಷ ವಿದ್ಯಾರ್ಥಿವೇತನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಡಿಗ ಸಮುದಾಯದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಭಾನುವಾರ ₹7.10 ಲಕ್ಷ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸಲಾಯಿತು.

ಈಡಿಗ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘವು ವಿವಿಧ ದತ್ತಿಗಳು, ದಾನಿಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ ಉದ್ಘಾಟಿಸಿದ ಕೋಲಾರದ ದೇವರಾಜ್ ಅರಸು ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಜಿ.ಎಚ್. ನಾಗರಾಜ್ ಮಾತನಾಡಿ, 'ಈಡಿಗ ಸಮುದಾಯ ಸಂಘಟಿಸಿದವರನ್ನು ಶಿಕ್ಷಣ, ಉದ್ಯೋಗ ದೊರಕಲು ಕಾರಣರಾದವರನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು. ಸಮುದಾಯದ ಉದ್ಯಮಿಗಳು, ಸ್ಥಿತಿವಂತರು ವಿದ್ಯಾರ್ಥಿಗಳಿಗೆ ನೆರವಾಗಬೇಕು' ಎಂದರು.

'ಸಮುದಾಯವನ್ನು ಕಟ್ಟಿ ಬೆಳೆಸಿದ ಕೆ.ಎನ್. ಗುರುಸ್ವಾಮಿ, ಕೆ. ವೆಂಕಟಸ್ವಾಮಿ, ಕೆ.ಎ. ನೆಟ್ಟಕಲ್ಲಪ್ಪ ಇನ್ನಿತರ ಹಿರಿಯರ ದೂರದೃಷ್ಟಿ, ಮಾರ್ಗದರ್ಶನ ನಮಗೆಲ್ಲ ಸ್ಫೂರ್ತಿಯಾಗಬೇಕು' ಎಂದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ಟಿ. ಶಿವಕುಮಾರ್ ಮಾತನಾಡಿ, 'ವಿದ್ಯೆಯ ಜೊತೆಗೆ ಆರೋಗ್ಯದ ಕಡೆಗೂ ಗಮನ ಕೊಡಬೇಕು. ಯೋಗ, ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು. ಪರಿಸರವನ್ನು ಸಂರಕ್ಷಿಸಬೇಕು' ಎಂದು ಹೇಳಿದರು.

ವಿವಿಧ ಕ್ಷೇತ್ರದ ಸಾಧಕರಾದ ಡಾ. ನಳಿನಾಕ್ಷಿ ಸಣ್ಣಪ್ಪ, ಡಾ. ಎಸ್.ಆರ್. ಕೇಶವಮೂರ್ತಿ, ಮೆಟ್ರೊ ರೈಲು ಚಾಲಕಿ ಎಲ್. ರಶ್ಮಿ ಅವರನ್ನು ಗೌರವಿಸಲಾಯಿತು. ಸತ್ಯದರ್ಶನ ಟ್ರಸ್ಟ್ ಅಧ್ಯಕ್ಷ ನರಸಿಂಹ ಸ್ವಾಮಿ ಅವರ 'ಸತ್ಯದ ಬೆಳಕು' ಸಂಕಲನ ಬಿಡುಗಡೆ ಮಾಡಲಾಯಿತು. ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಂ. ನಾಗರಾಜ್, ಕಾರ್ಯದರ್ಶಿ ಟಿ.ಎಲ್. ಹನುಮಂತರಾಯ, ಪತ್ರಕರ್ತ ಇ.ವಿ. ಸತ್ಯನಾರಾಯಣ ಇದ್ದರು.

ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನ ವಿತರಿಸಲಾಯಿತು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಯುವ ವಕೀಲರು ವೃತ್ತಿಯಲ್ಲಿ ಕೌಶಲ, ನೈತಿಕತೆ ಮತ್ತು ಗುಣಮಟ್ಟ ಕಾಪಾಡಿಕೊಳ್ಳುವುದು ಹೇಗೆ?' **ಉಪನ್ಯಾಸ:** ಅಭಯ್ ಎಸ್. ಓಕಾ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಬೆಂಗಳೂರು ವಕೀಲರ ಅಕಾಡೆಮಿ, ಸ್ಥಳ: ಬೆಂಗಳೂರು ವಕೀಲರ ಸಂಘ, ಹೈಕೋರ್ಟ್ ಯೂನಿಟ್, ಹಾಲ್ ಸಂಖ್ಯೆ 2, ಮಧ್ಯಾಹ್ನ 1.30ರಿಂದ

ಅಭಯ್ ಎಸ್. ಓಕಾ

'ಸತ್ಯ ಹರಿಶ್ಚಂದ್ರ' ನಾಟಕ ಪ್ರದರ್ಶನ: ನಿರ್ದೇಶನ: ವಿ.ಎನ್. ಅಶ್ವತ್ಥ, ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ರಂಗಶ್ರೀ ರಂಗಸ್ವಾಮಿ, ಅಮರೇಶ್ ಪಾಪಣ್ಣ, ಬಿ. ರಾಮಕೃಷ್ಣ, ಮಹೇಶ್ ಕುಮಾರ್, ರಾಮಕೃಷ್ಣ, ಎಂ. ಜಗದೀಶಗೌಡ, ವಿ. ಸುದರ್ಶನ್, ಆಯೋಜನೆ: ಪರಸ್ಪರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ಪಿಎಸ್ ಸಂಸ್ಮರಣೆ, ಪಾರ್ವತೀಸುತ ಸಂಗೀತ ಶ್ರೇಷ್ಠ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಸೃಷ್ಟಿ ಉಮೇಶ್, ಸೃಷ್ಟಿ ಶ್ರೀನಿವಾಸ್, ಅಧ್ಯಕ್ಷತೆ: ಎನ್. ರಾಮನಾಥ್, ಅತಿಥಿಗಳು: ಲಹರಿ ವೇಲು, ಸಾತ್ವಿಕ್ ಚಕ್ರವರ್ತಿ, ವಿದ್ಯಾಧರ್ ಪರ್ವತಪ್ಪ ಪೂಜಾರ್, ಚಿಕ್ಕರಸು ಹುಲ್ಲೂರು, ರೂಪಶ್ರೀ ಮೋಹನ್, ವನ್ದಿತ ಶಾಸ್ತ್ರಿ, ಆಯೋಜನೆ: ಎ. ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಅವರ ಎರಡು ಭಾಷಣಗಳ ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಮಂಗ್ಳೂರು ವಿಜಯ, ಮಾವಳ್ಳಿ ಶಂಕರ್, ಸುಬ್ಬು ಹೊಲೆಯಾರ್, ಆಯೋಜನೆ: ಅಂಬೇಡ್ಕರ್ ವಿಚಾರ ವೇದಿಕೆ, ಸ್ಥಳ: ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

ಮೂಡ್ನಾಕೂಡು ಚಿನ್ನಸ್ವಾಮಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್‌ನೊಂದಿಗೆ ಸಂಯೋಜನೆ

ವಿವಿಧ ಆ್ಯಪ್‌ಗಳಲ್ಲಿ ಮೆಟ್ರೊ ಟಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣಿಕರಿಗೆ ಯಾವುದೇ ಆ್ಯಪ್‌ನಲ್ಲಿ ಟಿಕೆಟ್ ಖರೀದಿಸಲು ಅನುಕೂಲವಾಗುವಂತೆ ಮಾಡಲು ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್‌ನೊಂದಿಗೆ (ಒಎನ್‌ಡಿಸಿ) ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಸಂಯೋಜನೆ ನಡೆಸಲಿದೆ.

ಪ್ರಸ್ತುತ ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಪಾವತಿ ಮಾಡಿ ಟಿಕೆಟ್ ಖರೀದಿಸಲು, ಸ್ಮಾರ್ಟ್‌ಕಾರ್ಡ್ ಮೂಲಕ ಸಂಚರಿಸಲು, ವಾಟ್ಸ್‌ಆ್ಯಪ್ ಚಾಟ್‌ಬಾಟ್ ಹಾಗೂ ಪೇಟಿಎಂನಲ್ಲಿ ಟಿಕೆಟ್ ಖರೀದಿ ಮಾಡಲು ಅವಕಾಶವಿದೆ. ಒಎನ್‌ಡಿಸಿ ಜೊತೆಗೆ ಸಂಯೋಜನೆಯ ಬಳಿಕ ಟುಮ್ಮಾಕೊ, ರೆಡ್‌ಬಸ್, ಔಟ್ ಪಾಥ್, ಹೈವೇ ಡಿಲೈಟ್, ನಮ್ಮ ಯಾತ್ರಿ, ರ‍್ಯಾಪಿಡೊ ಸೇರಿದಂತೆ ಹತ್ತಕ್ಕೂ ಅಧಿಕ ಅಪ್ಲಿಕೇಶನ್‌ಗಳಲ್ಲಿ ಟಿಕೆಟ್ ಖರೀದಿಸಲು ಅವಕಾಶವಾಗಲಿದೆ.

ಈ ಯೋಜನೆಯು ಸಾರ್ವಜನಿಕ ಸಾರಿಗೆಗಳನ್ನು ಸಂಯೋಜಿಸುವ, ಪ್ರಯಾಣ ಸಂಪರ್ಕಗಳನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿದೆ. ಪ್ರಯಾಣಿಕರು ಏಕೀಕೃತ ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ ಮೆಟ್ರೊ ಟಿಕೆಟ್‌ಗಳನ್ನು ಖರೀದಿಸಲು, ಸ್ಮಾರ್ಟ್‌ಕಾರ್ಡ್‌ಗಳನ್ನು ರೀಚಾರ್ಜ್ ಮಾಡಲು, ಬಸ್ ಪಾಸ್‌ಗಳನ್ನು ಪಡೆಯಲು ಸಾಧ್ಯವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರ‍್ಯಾಪಿಡೊ, ನಮ್ಮ ಯಾತ್ರಿ ಆ್ಯಪ್‌ಗಳಲ್ಲಿ ಮೆಟ್ರೊ ಟಿಕೆಟ್ ಪರೀಕ್ಷೆ ನಡೆಸಲಾಗುತ್ತಿದೆ. ಬಹು ಆ್ಯಪ್‌ಗಳಲ್ಲಿ ಟಿಕೆಟ್ ಖರೀದಿಸುವುದರ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ ಇನ್ನು ಮೂರ್ನಾಲ್ಕು ತಿಂಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ ಎಂದಿದ್ದಾರೆ.

ಇತ್ತೀಚೆಗೆ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಸ್ವಯಂ ಟಿಕೆಟ್ ನೀಡುವ ಯಂತ್ರಗಳನ್ನು ಅಳವಡಿಸಲಾಗಿದೆ. ಇವು 30 ಸೆಕೆಂಡುಗಳಲ್ಲಿ ಟಿಕೆಟ್‌ಗಳನ್ನು ಒದಗಿಸುತ್ತಿರುವುದರಿಂದ ಪ್ರಯಾಣಿಕರ ದಟ್ಟಣೆ ವೇಳೆಯಲ್ಲಿ ಟಿಕೆಟ್‌ಗೆ ಉಂಟಾಗುವ ನೂಕುನುಗ್ಗಲು ತಪ್ಪಿದೆ ಎಂದು ಹೇಳಿದ್ದಾರೆ.

ಹಸಿರು ಮಾರ್ಗ: ನಿಧಾನಗತಿಯಲ್ಲಿ ಸಾಗಿದ ಮೆಟ್ರೊ ರೈಲು

ನಮ್ಮ ಮೆಟ್ರೊ ಹಸಿರು ಮಾರ್ಗದಲ್ಲಿ ಕೆ.ಆರ್. ಮಾರುಕಟ್ಟೆ–ನ್ಯಾಷನಲ್ ಕಾಲೇಜು ನಿಲ್ದಾಣಗಳ ನಡುವೆ ನಾಲ್ಕೈದು ದಿನಗಳಿಂದ ಮೆಟ್ರೊ ವಿಪರೀತ ನಿಧಾನವಾಗಿ ಸಾಗುತ್ತಿದೆ. ಹಳಿ ನಿರ್ವಹಣೆ ನಡೆಯುತ್ತಿದ್ದರಿಂದ ಹೀಗಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಆರ್. ಮಾರುಕಟ್ಟೆ ಮೆಟ್ರೊ ನಿಲ್ದಾಣದಿಂದ ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣಕ್ಕೆ ನಡೆದುಕೊಂಡು ಹೋದರೂ ಇದಕ್ಕಿಂತ ವೇಗವಾಗಿ ತಲುಪಬಹುದು. ಬೆಳಿಗ್ಗೆ ಕೆಲಸಕ್ಕೆ ತೆರಳುವವರಿಗೆ ಬಹಳ ತೊಂದರೆಯಾಗಿದೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಹಳಿ ನಿರ್ವಹಣೆ ಕೆಲಸ ಭಾನುವಾರ ಮುಗಿದಿದೆ. ಸೋಮವಾರದಿಂದ ಯಾವುದೇ ತಡೆಯಿಲ್ಲದೇ ಮೆಟ್ರೊ ಸಂಚರಿಸಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಂದಿನಿ ಮಳಿಗೆಗೆ ಸ್ಥಳ ಮಂಜೂರು ಮಾಡುವಂತೆ ಪತ್ರ

ಬೆಂಗಳೂರು: ನಗರದ ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆಗಳನ್ನು ತೆರೆಯಲು ಸ್ಥಳ ಮಂಜೂರು ಮಾಡುವಂತೆ ಕೋರಿ, ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷ ಡಿ.ಕೆ. ಸುರೇಶ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ದಕ್ಷಿಣ ಭಾರತದಲ್ಲಿಯೇ ಅತ್ಯಂತ ದೊಡ್ಡ ಹಾಲು ಉತ್ಪಾದಕರ ಸಹಕಾರ ಸಂಘವಾಗಿರುವ ಬಮೂಲ್, ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಜಾಲ ವಿಸ್ತರಿಸುವ ದೃಷ್ಟಿಯಿಂದ ಮೆಟ್ರೊ ನಿಲ್ದಾಣಗಳ ಮುಂಭಾಗದಲ್ಲಿ ನಂದಿನಿ ಪಾರ್ಲರ್‌ಗಳನ್ನು ತೆರೆಯಲು ಕೆಎಂಎಫ್/ಬಮೂಲ್ ಹೆಸರಿಗೆ ಜಾಗ ಮಂಜೂರು ಮಾಡುವಂತೆ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಅತಿಥಿ ಉಪನ್ಯಾಸಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ವೃತ್ತದಲ್ಲಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಅತಿಥಿ ಉಪನ್ಯಾಸಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜಿಯೊ ಟೆಕ್ನಾಲಜಿ ಎಂಜಿನಿಯರಿಂಗ್, ಎನ್ವಿರಾನ್‌ಮೆಂಟಲ್ ಎಂಜಿನಿಯರಿಂಗ್ ಮತ್ತು ವಾಟರ್ ರಿಸೋರ್ಸ್ ಎಂಜಿನಿಯರಿಂಗ್ ವಿಷಯಗಳನ್ನು ಬೋಧಿಸಲು ಎಂ.ಟೆಕ್/ಪಿಎಚ್.ಡಿ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ನಿಗದಿತ ನಮೂನೆಯನ್ನು ವಿವಿ ವೆಬ್‌ಸೈಟ್: www.uvce.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿತ ದಾಖಲೆಗಳ ಪ್ರತಿಯೊಂದಿಗೆ ಕುಲಸಚಿವರು, ಯುವಿಸಿಇ, ಕೆ.ಆರ್. ವೃತ್ತ, ಬೆಂಗಳೂರು–01 ಇವರಿಗೆ ಜುಲೈ 8ರ ಒಳಗೆ ಸಲ್ಲಿಸಬೇಕು ಎಂದು ಕುಲಸಚಿವರು ತಿಳಿಸಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ

‘ಅವರು ತಿಂದು ನಮಗೆ ಒರೆಸುತ್ತಿದ್ದಾರೆ..’

ಅಧಿಕ ದರ ವಸೂಲಿ ಮಾಡುವ ಕಂಪನಿಗಳ ಮೇಲೆ ಕ್ರಮಕ್ಕೆ ಆಟೊ ಚಾಲಕರ ಆಗ್ರಹ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ‘ಪ್ರಯಾಣಿಕರಿಂದ ಕಿತ್ತುಕೊಳ್ಳುವುದು ಅಗ್ರಿಗೇಟರ್ ಕಂಪನಿಗಳು. ಆರೋಪ ಸುತ್ತಿಕೊಳ್ಳುವುದು ಮಾತ್ರ ಆಟೊ ಚಾಲಕರ ಮೇಲೆ. ಕೋತಿ ತಾನು ತಿಂದು ಮೇಕೆ ಮೂತಿಗೆ ಒರೆಸಿದಂತಾಗಿದೆ ನಮ್ಮ ಸ್ಥಿತಿ...’

‘ಅಗ್ರಿಗೇಟರ್ ಕಂಪನಿಗಳ ಅಡಿಯಲ್ಲಿ ಕೆಲಸ ಮಾಡುವ ಆಟೊ ಚಾಲಕರ ಅಳಲು ಇದು. ಅಧಿಕ ದರ ಯಾವ ಆ್ಯಪ್‌ನಲ್ಲಿ ತೋರಿಸುತ್ತದೆಯೋ ಅದನ್ನು ನಡೆಸುತ್ತಿರುವ ಅಗ್ರಿಗೇಟರ್ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳಿ’ ಎಂಬುದು ಅವರ ಒತ್ತಾಯ.

‘ಅಧಿಕ ದರ ವಸೂಲಿ ಮಾಡುತ್ತಿರುವುದು ಕಂಡು ಬಂದರೆ ಅಂಥ ಆಟೊಗಳ ಪರ್ಮಿಟ್ ರದ್ದು ಮಾಡಲು ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಆಟೊ ಚಾಲಕ, ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಆ್ಯಪ್‌ಗಳಲ್ಲಿ ಅಧಿಕ ದರ ತೋರಿಸಿದರೆ ಅದಕ್ಕೆ ಕಾರಣರಲ್ಲದ ನಮ್ಮ ಮೇಲೆ ಯಾಕೆ ಕ್ರಮ ಕೈಗೊಳ್ಳಬೇಕು? ನಮ್ಮ ಆಟೊಗಳ ಪರ್ಮಿಟ್ ಯಾಕೆ ರದ್ದು ಮಾಡಬೇಕು’ ಎಂಬುದು ಆಟೊ ಚಾಲಕರ ಪ್ರಶ್ನೆ.

‘ನಮಗೆ ಇಂಥಲ್ಲಿಂದ ಇಂಥಲ್ಲಿಗೆ ಪ್ರಯಾಣಿಕರನ್ನು ಕರೆದೊಯ್ಯುವಂತೆ ಸೂಚನೆ ಬರುತ್ತದೆ. ನಾವು ಹೋಗುತ್ತೇವೆ. ಪ್ರಯಾಣಿಕರು ಒಟಿಪಿ ನಂಬರ್ ಹೇಳಿದ ಮೇಲೆ ಸಂಚಾರ ಆರಂಭಿಸಿ ಅವರು ತಲುಪಬೇಕಾದ ಸ್ಥಳಕ್ಕೆ ಮುಟ್ಟಿಸುತ್ತೇವೆ. ಎಷ್ಟು ದರ ಎಂಬುದು ಆ್ಯಪ್‌ನಲ್ಲಿ ಪ್ರಯಾಣಿಕರಿಗೆ ಮೊದಲೇ ತೋರಿಸಿರುತ್ತದೆ. ಸ್ಕ್ಯಾನ್ ಮಾಡಿ ಪಾವತಿ ಮಾಡುತ್ತಾರೆ. ನಮ್ಮ ಮತ್ತು ಪ್ರಯಾಣಿಕರ ನಡುವೆ ಪಾವತಿಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಗಳು ನಡೆಯುವುದಿಲ್ಲ. ನಾವು ಹೆಚ್ಚುವರಿಯಾಗಿ ಹಣ ಕೇಳುವುದೂ ಇಲ್ಲ’ ಎಂದು ಆಟೊ ಚಾಲಕರೊಬ್ಬರು ತಿಳಿಸಿದರು.

‘ಬೈಕ್ ಟ್ಯಾಕ್ಸಿಗಳನ್ನು ಇದೇ ಅಗ್ರಿಗೇಟರ್ ಕಂಪನಿಗಳು ನಡೆಸುತ್ತಿದ್ದವು. ಅವುಗಳನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ಬಿಂಬಿಸಲು, ಬೈಕ್ ಟ್ಯಾಕ್ಸಿಗಳು ಬೇಕು ಎಂದು ಜನರೇ ಆಗ್ರಹಿಸುವಂತೆ ಮಾಡಲು ಅಗ್ರಿಗೇಟರ್ ಸಂಸ್ಥೆಗಳೇ ಆಟೊ, ಕ್ಯಾಬ್‌ಗಳ ದರವನ್ನು ಆ್ಯಪ್‌ಗಳಲ್ಲಿ ಅಧಿಕ ಮಾಡಿದಂತಿದೆ. ಆಟೊ, ಕ್ಯಾಬ್‌ಗಳ ಚಾಲಕರು ಮಾತ್ರವಲ್ಲ, ಸ್ವಂತ ವಾಹನಗಳನ್ನು ಅಗ್ರಿಗೇಟರ್‌ಗಳೊಂದಿಗೆ ಸಂಯೋಜನೆ ಮಾಡಿರುವ ಮಾಲೀಕರು ಈ ಷಡ್ಯಂತ್ರದ ಬಲಿಪಶುಗಳಾಗುತ್ತಿದ್ದಾರೆ’ ಎಂದು ಸ್ನೇಹಜೀವಿ ಆಟೊ ಚಾಲಕರ ಟ್ರೇಡ್ ಯೂನಿಯನ್ ಅಧ್ಯಕ್ಷ ಸಂತೋಷ್ ಕುಮಾರ್ ತಿಳಿಸಿದರು.

‘ಈಗ ಬಹುತೇಕ ಆಟೊಗಳು ಅಗ್ರಿಗೇಟರ್‌ಗಳೊಂದಿಗೆ ಸಂಯೋಜನೆಯಾಗಿವೆ. ಅಗ್ರಿಗೇಟರ್ ಕಂಪನಿಗಳಷ್ಟೇ ದರ ಹೆಚ್ಚಳ ಮಾಡಿರುವುದು. ಎಲ್ಲರೂ ತಾವಿದ್ದಲ್ಲಿಂದಲೇ ಆ್ಯಪ್‌ಗಳ ಮೂಲಕ ಬುಕ್ಕಿಂಗ್ ಮಾಡುತ್ತಿರುವುದರಿಂದ ಉಳಿದ ಆಟೊಗಳಿಗೆ ಬಾಡಿಗೆ ಸಿಗುವುದೂ ಕಡಿಮೆ. ದರ ಹೆಚ್ಚಳ ಮಾಡಿದರೆ ಯಾರು ಬರುತ್ತಾರೆ’ ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ಪ್ರಶ್ನಿಸಿದರು.

ಇಂದಿನಿಂದ ಕ್ರಮ

‘ಪ್ರಯಾಣಿಕರಿಂದ ಯಾರು ಅಧಿಕ ದರ ವಸೂಲಿ ಮಾಡುತ್ತಿದ್ದಾರೆ ಎಂಬುದನ್ನು ನಮ್ಮದೇ ರೀತಿಯಲ್ಲಿ ಪತ್ತೆ ಹಚ್ಚುತ್ತೇವೆ. ಅದು ಆ್ಯಪ್ ಆಧಾರಿತ ಇರಲಿ, ಆ್ಯಪ್ ಅಲ್ಲದ ಆಟೊಗಳಿರಲಿ. ಎಲ್ಲರ ಮೇಲೆ ಕಣ್ಣಿಡುತ್ತೇವೆ. ಸೋಮವಾರ ಬೆಳಿಗ್ಗೆಯೇ ಈ ಕಾರ್ಯಾಚರಣೆ ಆರಂಭವಾಗಲಿದೆ. ನಗರದ ಎಲ್ಲ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿಗಳು ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೀಟರ್ ಹಾಕುವುದೇ ಇಲ್ಲ’

‘ನಗರದಲ್ಲಿ ಬಹುತೇಕ ಆಟೊಗಳಲ್ಲಿ ಮೀಟರ್ ಪ್ರಕಾರ ಬಾಡಿಗೆ ತೆಗೆದುಕೊಳ್ಳುತ್ತಿಲ್ಲ. ಮೀಟರ್ ಹಾಕುವುದೇ ಇಲ್ಲ. ಬಾಯಿಗೆ ಬಂದಷ್ಟು ಹೇಳುತ್ತಿದ್ದಾರೆ. ಇದು ಬೈಕ್ ಟ್ಯಾಕ್ಸಿ ನಿಷೇಧವಾದ ಮೇಲೆ ಮಾಡಿದ್ದಲ್ಲ. ಹಲವು ವರ್ಷಗಳಿಂದ ಈ ರೀತಿ ಮಾಡುತ್ತಿದ್ದಾರೆ. ಯಶವಂತಪುರ ರೈಲ್ವೆ ನಿಲ್ದಾಣದಿಂದ 2 ಕಿ.ಮೀ. ಒಳಗೆ ಹೋಗಬೇಕಿದ್ದರೂ ₹200–₹300 ಹೇಳುತ್ತಾರೆ. ಮೀಟರ್ ಹಾಕಿದರೆ ₹30–₹40 ಅಷ್ಟೇ ಆಗುವುದು’ ಎಂದು ರಾಜಾಜಿನಗರದ ಕೆ. ರಮೇಶ್ ದೂರಿದ್ದಾರೆ.

‘ಮೆಜೆಸ್ಟಿಕ್ ಬಸ್ ನಿಲ್ದಾಣ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಸಹಿತ ಹಲವು ಕಡೆಗಳಲ್ಲಿ ಇದೇ ರೀತಿ ಆಗುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

‘ಕೆಲವು ಪ್ರಮುಖ ಸ್ಪಾಟ್‌ಗಳಲ್ಲಿ ಈ ರೀತಿ ಸುಲಿಗೆ ಮಾಡುತ್ತಿರುವುದು ನಿಜ. ಇದರಿಂದ ನಗರದ ಎಲ್ಲ ಆಟೊದವರಿಗೆ ಕೆಟ್ಟ ಹೆಸರು ಬರುತ್ತಿದೆ. ಯಾರು ಸುಲಿಗೆ ಮಾಡುತ್ತಿದ್ದಾರೋ ಅಂಥವರ ಮೇಲೆ ಕ್ರಮ ಕೈಗೊಳ್ಳಿ ಎಂದು ನಾವೇ ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಿದ್ದೇವೆ’ ಎಂದು ಆಟೊ ಸಂಘಟನೆಗಳ ಪದಾಧಿಕಾರಿಗಳು ಹೇಳಿದ್ದಾರೆ.

‘ಪ್ರಾಮಾಣಿಕವಾಗಿ ಮೀಟರ್ ಹಾಕಿಕೊಂಡು ಪ್ರಯಾಣಿಕರನ್ನು ಒಯ್ಯುವ ಆಟೊಗಳು ಅಂಥ ‘ಸ್ಪಾಟ್’ಗಳಿಗೆ ಬಂದರೆ ಸುಲಿಗೆಕೋರರು ಬೈದು ಓಡಿಸುತ್ತಾರೆ. ಇದನ್ನೆಲ್ಲ ಅಧಿಕಾರಿಗಳು ನಿಯಂತ್ರಿಸಬೇಕು’ ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಉದ್ಯಮಿ ಕೊಲೆ ಯತ್ನ: ಸೆರೆ

ಬೆಂಗಳೂರು: ಕೆಲಸದಿಂದ ತೆಗೆದು ಹಾಕಿರುವುದು ಹಾಗೂ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಮಾಲೀಕನನ್ನು ಕೊಲೆ ಮಾಡಲು ಯತ್ನಿಸಿದ್ದ ಮೂವರು ಆರೋಪಿಗಳನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುಂಬೈ ಮೂಲದ ಉದ್ಯಮಿ ಸುಚಿತ್ ಜಯರಾಜ್ ಷಾ ಅವರ ದೂರಿನ ಮೇರೆಗೆ ಕುದುರೆ ತರಬೇತುದಾರ ಜಸ್ವೀರ್ ಸಿಂಗ್, ಈತನ ಸಹೋದರ ದಲಬೀರ್ ಸಿಂಗ್ ಹಾಗೂ ಸಹಾಯಕ ಸನ್ನಿ ಅವರನ್ನು ಬಂಧಿಸಲಾಗಿದೆ.

ಕುದುರೆ ರೇಸ್ ಹವ್ಯಾಸವಿದ್ದ ಕಾರಣ ಸುಚಿತ್ ಅವರು ರೇಸ್ ಕುದುರೆ ಖರೀದಿಸಿದ್ದರು. ಈ ಕುದುರೆಗೆ ಆರೋಪಿ ಜಸ್ವೀರ್ ಸಿಂಗ್ ತರಬೇತುದಾರರಾಗಿದ್ದರು. ಅವರು ತರಬೇತಿ ನೀಡಿದ್ದ ಕುದುರೆಗಳು ಹಲವು ರೇಸ್‌ಗಳಲ್ಲಿ ಗೆಲುವು ಪಡೆದಿದ್ದವು ಎನ್ನಲಾಗಿದೆ. ಸುಚಿತ್ ಅವರು ಪಂಜಾಬ್ ಸ್ಟಡ್ ಫಾರ್ಮ್‌ನಿಂದ ಕುದುರೆ ಖರೀದಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಜಸ್ವೀರ್ ಸಿಂಗ್ ಹಾಗೂ ಉದ್ಯಮಿ ನಡುವೆ ಹಣಕಾಸಿನ ವ್ಯವಹಾರ ನಡೆದಿತ್ತು. ಈ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದು, ಜಸ್ವೀರ್ ಸಿಂಗ್‌ನನ್ನು ಸುಚಿತ್ ಕೆಲಸದಿಂದ ತೆಗೆದು ಹಾಕಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉದ್ಯಮಿ ವಿರುದ್ಧ ಜಸ್ವೀರ್ ಸಿಂಗ್ ಕೋಪಗೊಂಡಿದ್ದರು. ಇತ್ತೀಚೆಗೆ ಉದ್ಯಮಿ ಕುದುರೆ ರೇಸ್‌ಗೆಂದು ತನ್ನ ಸ್ನೇಹಿತನ ಜೊತೆಗೆ ಬೆಂಗಳೂರಿಗೆ ಬಂದು ಪಂಚತಾರಾ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದರು. ಈ ವಿಚಾರ ತಿಳಿದ ಜಸ್ವೀರ್ ಸಿಂಗ್, ಸುಚಿತ್ ಅವರು ಉಳಿದುಕೊಂಡಿದ್ದ ಹೋಟೆಲ್‌ಗೆ ತನ್ನ ಸಹೋದರ ಹಾಗೂ ಸಹಾಯಕನನ್ನು ಕಳಿಸಿದ್ದರು.

ಆರೋಪಿಗಳಿಬ್ಬರು, ಉದ್ಯಮಿಯನ್ನು ಪಾರ್ಕಿಂಗ್ ಸ್ಥಳಕ್ಕೆ ಕರೆದುಕೊಂಡು ಹೋಗಿ ಹಲ್ಲೆ ನಡೆಸಿದ್ದರು. ನಂತರ ಸ್ಕ್ರೂಡ್ರೈವರ್‌ನಿಂದ ಚುಚ್ಚಲು ಯತ್ನಿಸಿದ್ದಾರೆ. ಅಷ್ಟರಲ್ಲಿ ಸುಚಿತ್ ತಪ್ಪಿಸಿಕೊಂಡಿದ್ದರು. ಚಿಕಿತ್ಸೆ ಪಡೆದ ಬಳಿಕ ಆರೋಪಿಗಳ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ನಾಲ್ಕು ವಿಮಾನ ನಿಲ್ದಾಣಗಳಿಗೆ ಬೆದರಿಕೆ ಸಂದೇಶ, ಕಟ್ಟೆಚ್ಚರ

ಹುಬ್ಬಳ್ಳಿ: ರಾಜ್ಯದ ಹುಬ್ಬಳ್ಳಿ, ಬೆಳಗಾವಿ, ಮಂಗಳೂರು ಮತ್ತು ಮೈಸೂರು ವಿಮಾನ ನಿಲ್ದಾಣಗಳ ನಿರ್ದೇಶಕರಿಗೆ ವಿಮಾನ ನಿಲ್ದಾಣದಲ್ಲಿ ಬಾಂಬ್ ಸ್ಫೋಟಿಸುವ ಕುರಿತು ಭಾನುವಾರ ಮಧ್ಯಾಹ್ನ ಇ–ಮೇಲ್ ಮೂಲಕ ಬೆದರಿಕೆ ಸಂದೇಶ ರವಾನೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ನಿಲ್ದಾಣಗಳಲ್ಲಿ ಬಿಗಿ ಭದ್ರತೆ ಹೆಚ್ಚಿಸಲಾಗಿದೆ.

ವಿಮಾನ ನಿಲ್ದಾಣದ ಆವರಣ ಪ್ರವೇಶಿಸುವ ಪ್ರತಿಯೊಬ್ಬ ಪ್ರಯಾಣಿಕರನ್ನು ಮತ್ತು ಸಾರ್ವಜನಿಕರನ್ನು ತೀವ್ರ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು, ಆಂತರಿಕ ಭದ್ರತಾ ಸಿಬ್ಬಂದಿ ಮತ್ತು ಗುಪ್ತಚರ ಇಲಾಖೆ ಸಿಬ್ಬಂದಿ ನಿಗಾ ವಹಿಸಿದ್ದಾರೆ.

‘ರಾಜ್ಯದ ನಾಲ್ಕು ವಿಮಾನ ನಿಲ್ದಾಣಗಳಿಗೆ roadkill kyo ಹೆಸರಿನ ಇ–ಮೇಲ್ ಐಡಿಯಿಂದ ಬೆದರಿಕೆ ಸಂದೇಶ ಬಂದಿದೆ. ತಕ್ಷಣ ಬಾಂಬ್ ತಪಾಸಣಾ ದಳ ಮತ್ತು ಭದ್ರತಾ ಸಿಬ್ಬಂದಿ ಜತೆ ಸಭೆ ನಡೆಸಿ, ನಿಲ್ದಾಣಕ್ಕೆ ಬಿಗಿ ಭದ್ರತೆ ಒದಗಿಸಿದ್ದೇವೆ. ವಿಮಾನ ನಿಲ್ದಾಣದ ಸುತ್ತಮುತ್ತಲಿನ ಸುಮಾರು 50–60 ಎಕರೆ ಪ್ರದೇಶವನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದ್ದಾರೆ. ಸಂದೇಶ ಬಂದ ಇ–ಮೇಲ್ ಐಡಿಯ ಮಾಹಿತಿಯನ್ನು ಪೊಲೀಸರಿಗೆ ನೀಡಿ, ಪ್ರಕರಣ ದಾಖಲಿಸುತ್ತೇವೆ’ ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣದ ನಿರ್ದೇಶಕ ರೂಪೇಶಕುಮಾರ ಶ್ರೀಪಾದ ‘ಪ್ರಜಾವಾಣಿ’ಗೆ ತಿಳಿಸಿದರು.

ಕ್ಯಾಂಟರ್ ಡಿಕ್ಕಿ ನಾಲ್ವರು ಸಾವು

ಕುಣಿಗಲ್: ಪಟ್ಟಣ ಸಮೀಪದ ಬಿದನಗೆರೆ ಹತ್ತಿರದ ರಾಷ್ಟ್ರೀಯ ಹೆದ್ದಾರಿ 75ರ ತಿರುವಿನಲ್ಲಿ ಭಾನುವಾರ ರಾತ್ರಿ ಕಾರಿಗೆ ಕ್ಯಾಂಟರ್ ವಾಹನ ಡಿಕ್ಕಿಯಾಗಿ ಕಾರಿನಲ್ಲಿದ್ದ ಮಾಗಡಿಯ ದಂಪತಿ ಹಾಗೂ ಇಬ್ಬರು ಮಕ್ಕಳು ಸೇರಿ ನಾಲ್ವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಮಾಗಡಿ ಪಟ್ಟಣದ ನಟರಾಜ ಬಡಾವಣೆ ನಿವಾಸಿ ಸೀಬೇಗೌಡ (51), ಪತ್ನಿ ಶೋಭಾ (45), ಪುತ್ರಿ ದುಂಬಿಶ್ರೀ (20), ಪುತ್ರ ಭಾನುಕಿರಣ್ ಗೌಡ (13) ಮೃತರು.

ಕುಣಿಗಲ್ ಬಳಿಯ ಖಾಸಗಿ ವಸತಿ ಶಾಲೆಯಲ್ಲಿ ಓದುತ್ತಿದ್ದ ಮಗ ಭಾನುಕಿರಣ್‌ನನ್ನು ಶಾಲೆಗೆ ಬಿಡಲು ಮಾಗಡಿಯಿಂದ ಕಾರಿನಲ್ಲಿ ಪಟ್ಟಣದ ಕಡೆಗೆ ಬರುತ್ತಿದ್ದರು. ಮುಂದೆ ಸಾಗುತ್ತಿದ್ದ ಕಾರಿಗೆ ಹಿಂಬದಿಯಿಂದ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಿನಲ್ಲಿ ಕಾಡು ಹಂದಿ ದೇಹವೂ ಪತ್ತೆ • ಒಬ್ಬನ ಬಂಧನ; ಪರಾರಿಯಾದ ಸೂತ್ರಧಾರ

ಜಿಂಕೆ ಬೇಟೆ ಜಾಲ ಪತ್ತೆ: 74 ಕೆ.ಜಿ ಮಾಂಸ, ಚರ್ಮ ವಶ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಹೆಚ್ಚಾಗಿರುವ ಚುಕ್ಕಿ ಜಿಂಕೆಗಳು ಮತ್ತು ಕಾಡು ಹಂದಿಗಳನ್ನು ಬೇಟೆಯಾಡಿ ಅವುಗಳ ಮಾಂಸ, ಚರ್ಮ, ಕೊಂಬುಗಳನ್ನು ಮಾರಾಟ ಮಾಡುತ್ತಿದ್ದ ಜಾಲವೊಂದನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಭೇದಿಸಿದ್ದಾರೆ.

ಖಚಿತ ಸುಳಿವಿನ ಮೇರೆಗೆ ಬನ್ನೇರುಘಟ್ಟ ನೈಸ್ ರಸ್ತೆಯ ಜಂಕ್ಷನ್ ಬಳಿ ಭಾನುವಾರ ಬೆಳಗ್ಗೆ ವಾಹನ ತಪಾಸಣೆ ನಡೆಸುತ್ತಿದ್ದ ಅರಣ್ಯ ಅಧಿಕಾರಿಗಳಿಗೆ ಕಾರೊಂದರಲ್ಲಿ ಸಾಗಿಸುತ್ತಿದ್ದ ನಾಲ್ಕು ಮೃತ ಚುಕ್ಕಿ ಜಿಂಕೆ, ಒಂದು ಮೃತ ಕಾಡುಹಂದಿ ಕಳೇಬರ ಪತ್ತೆಯಾಗಿವೆ.

ಕಾರು ಚಾಲಕ ಪ್ರತಾಪ್(31) ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಆತ ಸಿ.ಕೆ. ಪಾಳ್ಯದಲ್ಲಿರುವ ಶೆಡ್‌ನಲ್ಲಿ ಜಿಂಕೆ ಮಾಂಸ, ಚರ್ಮ ಸಂಗ್ರಹಿಸಿರುವುದಾಗಿ ಬಾಯ್ಬಿಟ್ಟಿದ್ದಾನೆ.

ಆರೋಪಿ ನೀಡಿದ ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಸಿ.ಕೆ. ಪಾಳ್ಯ ಶೆಡ್ ಮೇಲೆ ದಾಳಿ ಮಾಡಿದಾಗ 74 ಕೆ.ಜಿ ಜಿಂಕೆ ಮಾಂಸ, ಆರು ಚುಕ್ಕೆ ಜಿಂಕೆಗಳ ಚರ್ಮ, ಬೇಟೆಗೆ ಬಳಸುತ್ತಿದ್ದ ಒಂದು ಸಿಂಗಲ್ ಬ್ಯಾರೆಲ್ ಹಾಗೂ ಒಂದು ಡಬಲ್ ಬ್ಯಾರೆಲ್ ಗನ್, ಹತ್ತು ಗುಂಡು, ಎರಡು ಕಾರು, ಬೈಕ್, ಮಾಂಸ ತೂಗುವ ತೂಕದ ಯಂತ್ರವನ್ನು ವಶಕ್ಕೆ ಪಡೆದಿದ್ದಾರೆ.

ಜಿಂಕೆ ಮತ್ತು ಕಾಡು ಹಂದಿ ಮರಣೋತ್ತರ ಪರೀಕ್ಷೆ ನಡೆಸಿ, ಮಾದರಿ ಸಂಗ್ರಹಿಸಲಾಗಿದೆ. ಈ ದಂಧೆಯ ಪ್ರಮುಖ ಸೂತ್ರಧಾರ ಬಾಲರಾಜು, ಸಿ.ಕೆ. ಪಾಳ್ಯದ ಶೆಡ್ ಜಾಗದ ಮಾಲೀಕ ಭೀಮಪ್ಪ, ಶೆಡ್ ನಿರ್ವಹಣೆ ಮಾಡುತ್ತಿದ್ದ ರಮೇಶ್, ಬೈಕ್ ಮಾಲೀಕ ಫಿಲಿಪ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಾಲ್ವರೂ ಪರಾರಿಯಾಗಿದ್ದಾರೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ವಿ.ಗಣೇಶ್ ತಿಳಿಸಿದರು.

ವಶಪಡಿಸಿಕೊಂಡ ಒಂದು ಕಾರು ಪ್ರತಾಪ್‌ನಿಗೆ, ಮತ್ತೊಂದು ಕಾರು ಬಾಲರಾಜುಗೆ ಸೇರಿದೆ. ಬೈಕ್ ಫಿಲಿಪ್ ಎಂಬಾತನಿಗೆ ಸೇರಿದೆ. ತನಿಖೆ ಮುಂದುವರೆದಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಚುಕ್ಕಿ ಜಿಂಕೆಗಳು ಹೆಚ್ಚಾಗಿವೆ. ಇದನ್ನೇ ಬಂಡವಾಳ ಮಾಡಿಕೊಂಡ ದುಷ್ಕರ್ಮಿಗಳು ಅವುಗಳ ಬೇಟೆಯಾಡಿ ಮಾಂಸ ಮಾರಾಟ ಮಾಡುತ್ತಿದ್ದರು ಎಂದು ಅವರು ಹೇಳಿದ್ದಾರೆ.

ಕಾರ್ಯಾಚರಣೆಯಲ್ಲಿ ಬೆಂಗಳೂರು ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್. ರವೀಂದ್ರ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ.ಗಣೇಶ್, ವಲಯ ಅರಣ್ಯಾಧಿಕಾರಿ ಎನ್.ಆರ್.ಕಾಂಬ್ಳೆ, ಉಪ ವಲಯ ಅರಣ್ಯಾಧಿಕಾರಿಗಳಾದ ಚಿದಾನಂದ್, ಶಿವರಾಜ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಆನೇಕಲ್ ತಾಲ್ಲೂಕಿನ ಸಿ.ಕೆ.ಪಾಳ್ಯ ಶೆಡ್‌ನಿಂದ ವಶಪಡಿಸಿಕೊಳ್ಳಲಾದ ಜಿಂಕೆ ಮತ್ತು ಕಾಡಂದಿಗಳ ಮಾಂಸ, ಜಿಂಕೆ ಚರ್ಮ ಮತ್ತು ಆರೋಪಿ ಜೊತೆ ಅರಣ್ಯ ಇಲಾಖೆಯ ಅಧಿಕಾರಿಗಳು

ಅಪರಾಧ ಸುದ್ದಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

Business Offers

Finance

MSME LOANS
Available for any startup companies,any existing companies NOTE:Also one approved loan available contact-7204995189

BUILDERS ESSENTIAL

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

PERSONAL

Change of Name

CHANGE OF NAME
I, Rahuul Rajendrl Parashar, R/at No. P-512, Sri Thirumala Saravoar, Singasandra, Bengaluru- 560068 have changed my minor son's name from MEDHAANSH SINGH to MEDHANSH vide affidavit dated 27-06-2025 before Notary L. Gopalakrishna, Bengaluru. Henceforth he shall be called as MEDHANSH only

CHANGE OF NAME
I, Rahuul Rajendrl Parashar, R/at No. P-512, Sri Thirumala Saravoar, Singasandra, Bengaluru- 560068 have changed my minor daughter's name from MAIESHA R SINGH to MAIESSHA vide affidavit dated 27-06-2025 before Notary L. Gopalakrishna, Bengaluru. Henceforth she shall be called as MAIESSHA only

CHANGE OF NAME
I, Rahul Singh, R/at No. P-512, Sri Thirumala Saravoar, Singasandra, Bengaluru- 560068 have changed my name to RAHUUL RAJENDRL PARASHAR vide affidavit dated 27-06-2025 before Notary L. Gopalakrishna, Bengaluru. Henceforth I shall be called as RAHUUL RAJENDRL PARASHAR only

CHANGE OF NAME
I, MADHURI SINGH, W/o Rahuul Rajendrl Parashar, residing at No. P-512, Sri Thirumala Saravoar, Singasandra, Bengaluru- 560068 have changed my name to MADHURI R SINGH vide affidavit dated 27-06-2025 before Notary L. Gopalakrishna, Bengaluru. Henceforth I shall be called as MADHURI R SINGH only

VASUDEVA SHENOY N changed my to Vasudeva Shenoy Y vide affidavit dated 26th June 2025 sworn before notary B.M Chandrashekar, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424
+91 9731810277 | +91 9900428036
*Conditions apply

ಹಳೆ ವೈಷಮ್ಯ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ವೈಷಮ್ಯದ ಕಾರಣ ವ್ಯಕ್ತಿಯೊಬ್ಬರ ಮೇಲೆ ದೊಣ್ಣೆ, ಕಲ್ಲುಗಳಿಂದ ಹಲ್ಲೆ ನಡೆಸಿ, ಕೊಲೆ ಮಾಡಿ ಪರಾರಿಯಾಗಿದ್ದ ಮೂವರನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರೇಮ್

ದರ್ಶನ್

ಮಲ್ಲಾಪುರ ನಿವಾಸಿ ಆಂಜಿನಪ್ಪ (33) ಅವರನ್ನು ಕೊಲೆ ಮಾಡಿದ ಆರೋಪದಡಿ ಮರಿಯಣ್ಣ ಪಾಳ್ಯದ ಪ್ರೇಮ್, ಆರ್.ಟಿ.ನಗರದ ದರ್ಶನ್ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ.

ಪತ್ನಿಯಿಂದ ದೂರವಾಗಿದ್ದ ಆಂಜಿನಪ್ಪ ನಗರದಲ್ಲಿ ಉಚಿತವಾಗಿ ಊಟ, ಉಪಾಹಾರ ಸಿಗುವ ಕಡೆಗಳಲ್ಲಿ ಹೋಗಿ ಆಹಾರ ಸೇವಿಸಿ ಜೀವನ ಸಾಗಿಸುತ್ತಿದ್ದರು. ಕೆಲ ದಿನಗಳ ಹಿಂದೆ ಆರೋಪಿ ಪ್ರೇಮ್ ಕುರಿ ಮೇಯಿಸುತ್ತಿದ್ದ ಸಂದರ್ಭದಲ್ಲಿ ಕಲ್ಲುಗಳಿಂದ ಆಂಜಿನಪ್ಪ ಹಲ್ಲೆ ನಡೆಸಿದ್ದರು. ಈ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆದಿತ್ತು.

ಜೂನ್ 23ರಂದು ಆರೋಪಿಗಳು ಮದ್ಯಪಾನಕ್ಕೆ ತೆರಳುವಾಗ ಥಣಿಸಂದ್ರದ ಆಕಾಶವಾಣಿ ಲೇಔಟ್‌ನ ನಿರ್ಜನ ಪ್ರದೇಶದಲ್ಲಿ ಆಂಜಿನಪ್ಪ ಎದುರಾದರು. ಈ ಹಿಂದೆ ನಡೆದ ಜಗಳದಿಂದ ಕೋಪಗೊಂಡಿದ್ದ ಪ್ರೇಮ್, ತನ್ನ ಸಹಚರರ ಜತೆ ಸೇರಿ ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹವನ್ನು ಗಮನಿಸಿದ್ದ ಸ್ಥಳೀಯರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕುಸಿದು ಬಿದ್ದು ಸಾವನ್ನಪ್ಪಿರಬಹುದು ಎಂದು ಆರಂಭದಲ್ಲಿ ಪೊಲೀಸರು ಶಂಕಿಸಿದ್ದರು. ಆದರೆ, ಮರಣೋತ್ತರ ಪರೀಕ್ಷೆ ವರದಿಯಲ್ಲಿ ಹಲ್ಲೆಯಿಂದಾಗಿ ಸಾವು ಸಂಭವಿಸಿದೆ ಎಂದು ತಿಳಿದು ಬಂದಿತ್ತು.

ಕೊಲೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಪೊಲೀಸರು, ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದ ರಸ್ತೆಗಳ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿದ್ದರು. ನಂತರ ಸ್ಥಳೀಯರಿಂದ ಸಂಗ್ರಹಿಸಿದ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಿದರು.

ಟೈರ್ ಸ್ಫೋಟ: ಮನೆಗೆ ನುಗ್ಗಿದ ಬಸ್

ತಿಪಟೂರು: ತಾಲ್ಲೂಕಿನ ಸಿದ್ದಾಪುರ ಗೇಟ್ ಬಳಿ ಭಾನುವಾರ ಬೆಳಗ್ಗೆ ಆಗುಂಬೆಯಿಂದ ಮುಳಬಾಗಿಲಿಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್ ಮುಂಭಾಗದ ಟೈರ್ ಸ್ಫೋಟಗೊಂಡು ಮನೆಯೊಂದಕ್ಕೆ ನುಗ್ಗಿದೆ.

ಬಸ್‌ನಲ್ಲಿದ್ದ 42 ಪ್ರಯಾಣಿಕರ ಪೈಕಿ ಮೂವರು ಮಕ್ಕಳು ಸೇರಿ 33 ಮಂದಿ ಗಾಯಗೊಂಡಿದ್ದಾರೆ. 20ಕ್ಕೂ ಹೆಚ್ಚು ಪ್ರಯಾಣಿಕರಿಗೆ ಕೈ-ಕಾಲು ಹಾಗೂ ತಲೆಗೆ ಗಂಭೀರ ಸ್ವರೂಪದ ಪೆಟ್ಟುಗಳಾಗಿವೆ.

ಗಾಯಗೊಂಡಿದ್ದ ಪಿಎಸ್ಐ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಜಾ ಸಂಗ್ರಹಿಸಿದ್ದ ಸ್ಥಳಕ್ಕೆ ಆರೋಪಿಗಳನ್ನು ಕಾರಿನಲ್ಲಿ ಕರೆದೊಯ್ಯುವ ವೇಳೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ತಲಘಟ್ಟಪುರ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮೆಹಬೂಬ್ ಗುಡ್ಡಳ್ಳಿ (40) ಅವರು ಭಾನುವಾರ ಮೃತಪಟ್ಟಿದ್ದಾರೆ.

ಅವರಿಗೆ ಪತ್ನಿ, ಪುತ್ರ, ಪುತ್ರಿ, ತಂದೆ, ತಾಯಿ ಇದ್ದಾರೆ.

ಜೂನ್ 23ರಂದು ತಲಘಟ್ಟಪುರ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಗಸ್ತಿನಲ್ಲಿದ್ದ ಪಿಎಸ್ಐ ಮೆಹಬೂಬ್ ಗುಡ್ಡಳ್ಳಿ, ಹೆಡ್‌ಕಾನ್‌ಸ್ಟೆಬಲ್ ತುಳಿಸಿದಾಸ್, ಕಾನ್‌ಸ್ಟೆಬಲ್‌ಗಳಾದ ದಾವುದ್ ಸಾಬ್, ಸಣ್ಣ ಜಡಿಯಪ್ಪ, ಗವಿಸಿದ್ದಪ್ಪ ಮತ್ತು ಹೊನಪ್ಪ ಅಗಸನಮಟ್ಟಿ ಅವರು ಖಚಿತ ಮಾಹಿತಿ ಆಧರಿಸಿ, ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಲು ತಿಲಕ್ ನಗರಕ್ಕೆ ತೆರಳಿದ್ದರು.

ಅಲ್ಲಿ ಅನುಮಾನಾಸ್ಪದವಾಗಿ ಕಾರಿನಲ್ಲಿದ್ದ ವಸೀಂ, ಅಜರ್, ಅಮೀರ್ ಅವರನ್ನು ಬಂಧಿಸಿ, ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಗಿದೆ. ಅವರು ನೀಡಿದ ಮಾಹಿತಿ ಮೇರೆಗೆ ಗಾಂಜಾ ಸಂಗ್ರಹ ಮಾಡಿದ್ದ ಸ್ಥಳಕ್ಕೆ ವಸೀಂ ಮತ್ತು ಅಮೀರ್ ಅವರನ್ನು ಅವರ ಕಾರಿನಲ್ಲಿಯೇ ಕರೆದುಕೊಂಡು ಪೊಲೀಸರು ಹೊರಟಿದ್ದಾರೆ. ಅತ್ತಿಬೆಲೆ ಮಾರ್ಗವಾಗಿ ಹೋಗುವಾಗ ಯಲ್ಲಮ್ಮನಗರ ಬಳಿಕ ಕಾರಿನ ಎಡಚಕ್ರ ಕಳಚಿ ಹೋಯಿತು.

ಮೆಹಬೂಬ್ ಗುಡ್ಡಳ್ಳಿ

ಚಾಲನೆ ಮಾಡುತ್ತಿದ್ದ ಪೊಲೀಸ್ ಸಣ್ಣ ಜಡಿಯಪ್ಪ ಅವರು ಕಾರು ನಿಲ್ಲಿಸಿ, ಚಕ್ರ ಹುಡುಕಲು ಹೊರಟರು. ಈ ವೇಳೆ ಕಾರಿನಿಂದ ಹೊರಗೆ ಬಂದ ಪಿಎಸ್‌ಐ, ಮೊಬೈಲ್ ನಲ್ಲಿ ಮಾತನಾಡುತ್ತಿದ್ದ ವೇಳೆ ವೇಗವಾಗಿ ಬಂದ ಲಾರಿ ಹಿಂದಿನಿಂದ ಕಾರಿಗೆ ಡಿಕ್ಕಿ ಹೊಡೆದಿದೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಪಘಾತದ ಬಳಿಕ ಕಾರಿನ ಒಳಗಿದ್ದ ಆರೋಪಿಗಳು ಪರಾರಿಯಾಗಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಪಿಎಸ್ಐ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಈ ಬಗ್ಗೆ ಸೂರ್ಯನಗರ ಪೊಲೀಸ್ ಠಾಣೆಗೆ ದೂರು ನೀಡಿರುವ ಹೆಡ್ ಕಾನ್‌ಸ್ಟೆಬಲ್ ತುಳಿಸಿದಾಸ್, ‘ಅಪಘಾತ ಮಾಡಿದ ಲಾರಿ ಚಾಲಕ ಹಾಗೂ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಕೈಕೋಳ ಸಮೇತ ಪರಾರಿಯಾಗಿರುವ ವಸೀಂ ಮತ್ತು ಅಮೀರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ.

ಮೆಹಬೂಬ್ ಗುಡ್ಡಳ್ಳಿ ಅವರ ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ 10.30ಕ್ಕೆ ಸ್ವಗ್ರಾಮ ಸಿಂದಗಿ ತಾಲ್ಲೂಕಿನ ಓತಿಹಾಳದಲ್ಲಿ ನಡೆಯಲಿದೆ.

ಲಂಡನ್‌ನಲ್ಲಿ ಕೆಲಸದ ಆಮಿಷ: ಬಾವಿಗೆ ನೂಕಿ ಕೊಲೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಖಾಸಗಿ ಕಾಲೇಜಿನ ಉಪನ್ಯಾಸಕರೊಬ್ಬರಿಗೆ ಲಂಡನ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಹತ್ತು ದಿನಗಳ ಹಿಂದೆ ಕರೆದೊಯ್ದು ಕೊಲೆ ಮಾಡಿ ಶವವನ್ನು ತೋಟದ ಬಾವಿಯಲ್ಲಿ ಎಸೆದು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಇಲ್ಲಿಯ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೂನ್ 23ರಂದು ತಾಲ್ಲೂಕಿನ ಕೆಂಪದೇನಹಳ್ಳಿಯ ತೋಟವೊಂದರ ಬಾವಿಯಲ್ಲಿ ಕೊಳತೆ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಅಪರಿಚಿತ ಶವ ಯಲಹಂಕದ ಖಾಸಗಿ ಶಿಕ್ಷಣ ಸಂಸ್ಥೆಯ ಉಪನ್ಯಾಸಕ, ಚಿಂತಾಮಣಿ ತಾಲ್ಲೂಕಿನ ರಾಂಪುರ ಗ್ರಾಮದ ರಾಮಾಂಜಿ(30) ಅವರದ್ದು ಎಂದು ಆರೋಪಿಗಳು ಖಚಿತಪಡಿಸಿದ್ದಾರೆ.

ತಾಲ್ಲೂಕಿನ ಕೈವಾರದ ದೊಡ್ಡಗುಟ್ಟಹಳ್ಳಿ ಗ್ರಾಮದ ಖಾಸಗಿ ಫೈನಾನ್ಸ್ ಸಿಬ್ಬಂದಿ ಸುಧಾಕರ್, ಎಂ.ಮನೋಜ್, ಟೊಮೆಟೊ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದ ತಳಗವಾರದ ಮಂಜುನಾಥ್ ಬಂಧಿತ ಆರೋಪಿಗಳು.

ಎಂ.ಸ್ಸಿ ಕೃಷಿ ಪದವೀಧರರಾಗಿದ್ದ ರಾಮಾಂಜಿ ಅವರಿಗೆ ಲಂಡನ್‌ನಲ್ಲಿ ಕೆಲಸ ಕೊಡಿಸುವುದಾಗಿ ಆರೋಪಿಗಳು ನಂಬಿಸಿದ್ದರು. ಅವರಿಂದ ₹10 ಲಕ್ಷದಿಂದ ₹15 ಲಕ್ಷದವರೆಗೆ ಹಣ ಪಡೆದಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

ಲಂಡನ್‌ಗೆ ಕಳಿಹಿಸುವುದಾಗಿ ರಾಮಾಂಜಿ ಅವರನ್ನು ಲಗೇಜ್ ಸಮೇತ ಮನೆಯಿಂದ ಕರೆದುಕೊಂಡು ಬಂದಿದ್ದ ಆರೋಪಿಗಳು, ಕೈ, ಕಾಲುಗಳನ್ನು ಹಗ್ಗದಿಂದ ಕಟ್ಟಿ, ಸೈಜು ಕಲ್ಲು ಕಟ್ಟಿ ಬಾವಿಗೆ ಎಸೆದು ಪರಾರಿಯಾಗಿದ್ದರು. ಶವದ ಗುರುತು ಪತ್ತೆಯಾಗದ ಕಾರಣ ಗ್ರಾಮಾಂತರ ಠಾಣೆ ಪೊಲೀಸರು ಅಪರಿಚಿತ ಶವ ಎಂದು ಅಂತ್ಯಸಂಸ್ಕಾರ ನೆರವೇರಿಸಿದ್ದರು.

ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣಾ ವ್ಯಾಪ್ತಿಯಲ್ಲಿ ಮಹಿಳೆ ಕೊಲೆ: ಆರೋಪಿ ಪತ್ತೆಗೆ ಶೋಧ

ಕಸದ ಲಾರಿಯಲ್ಲಿ ಶವವಿಟ್ಟು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯನ್ನು ಕೊಲೆ ಮಾಡಿ ಮೃತದೇಹವನ್ನು ಮೂಟೆಕಟ್ಟಿ ಬಿಬಿಎಂಪಿ ಕಸದ ಲಾರಿಯಲ್ಲಿಟ್ಟು ದುಷ್ಕರ್ಮಿಗಳು ಪರಾರಿಯಾಗಿರುವ ಘಟನೆ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣಾ ವ್ಯಾಪ್ತಿಯ ಸ್ಕೇಟಿಂಗ್ ಗ್ರೌಂಡ್ ಬಳಿ ನಡೆದಿದೆ.

ಸುಮಾರು 30–35 ವರ್ಷದ ಮಹಿಳೆಯ ಮೃತದೇಹವನ್ನು ಶನಿವಾರ ತಡರಾತ್ರಿ ಆಟೊದಲ್ಲಿ ತಂದ ದುಷ್ಕರ್ಮಿಗಳು, ಮೈದಾನ ಬಳಿ ನಿಲ್ಲಿಸಿದ್ದ ಕಸದ ಲಾರಿಯಲ್ಲಿರಿಸಿ ಪರಾರಿಯಾಗಿದ್ದಾರೆ.

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಸ್ಥಳೀಯ ವ್ಯಕ್ತಿಯೊಬ್ಬರು ಕಸ ಹಾಕಲು ಬಂದಿದ್ದ ವೇಳೆ ಮಹಿಳೆಯ ತಲೆ ಕೂದಲು ಕಾಣಿಸಿದೆ. ತಕ್ಷಣವೇ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಹಾಗೂ ಪೊಲೀಸರು ಭೇಟಿ ನೀಡಿ, ಶವವನ್ನು ಹೊರ ತೆಗೆದು ಪರಿಶೀಲನೆ ನಡೆಸಿದರು. ಮೃತದೇಹ ಪತ್ತೆಯಾದ ಸ್ಥಳ, ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ, ಸ್ಕೇಟಿಂಗ್ ಮೈದಾನ ಸೇರಿದಂತೆ ಇತರೆ ಕಡೆಗಳಲ್ಲಿನ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದ್ದಾರೆ. ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿದರು.

ಈ ಪ್ರದೇಶದಲ್ಲಿ ರಾತ್ರಿ ವೇಳೆ ಜನ ಸಂಚಾರ ಕಡಿಮೆ ಇರುವುದನ್ನು ಗಮನಿಸಿ, ಬೇರೆ ಕಡೆ ಕೊಲೆ ಮಾಡಿ, ಆಟೊದಲ್ಲಿ ಶವವನ್ನು ತಂದು ಇಲ್ಲಿ ಎಸೆದು ಹೋಗಿರಬಹುದು ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.

‘ಮಹಿಳೆಯ ಮೃತದೇಹ ಕಸದ ಲಾರಿಯಲ್ಲಿ ಪತ್ತೆಯಾಗಿದ್ದು, ವಿಳಾಸ ತಿಳಿದು ಬಂದಿಲ್ಲ. ಕೊಲೆಗೆ ಕಾರಣ, ಯಾರು ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ತಿಳಿಸಿದ್ದಾರೆ.

ಮಹಿಳೆಯ ಮೃತದೇಹ ಪತ್ತೆಯಾದ ಬಿಬಿಎಂಪಿ ಕಸದ ಲಾರಿ

ಮಂದಗತಿಯಲ್ಲಿ ಕಾಮಗಾರಿ: ಸಂಚಾರಕ್ಕೆ ಅಡ್ಡಿ

ರೆಸಿಡೆನ್ಸಿ ರಸ್ತೆ: ವ್ಯಾಪಾರ, ವಹಿವಾಟಿಗೂ ತೊಂದರೆ • ಸಾರ್ವಜನಿಕರ ಅಸಮಾಧಾನ • ಅಪಘಾತಕ್ಕೂ ದಾರಿ

• ಖಲೀಲಅಹ್ಮದ ಶೇಖ

ಬೆಂಗಳೂರು: ರೆಸಿಡೆನ್ಸಿ ರಸ್ತೆಯ ಆಶೀರ್ವಾದ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆಯ ಜಂಕ್ಷನ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಮುಗಿದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ. ಆದರೆ, ಒಳಚರಂಡಿಯ ಕೊಳವೆಗಳನ್ನು ಅಳವಡಿಸಲು ರಸ್ತೆಯ ಎರಡೂ ಬದಿಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದ್ದು, ವ್ಯಾಪಾರಿಗಳು, ಗ್ರಾಹಕರು, ಸ್ಥಳೀಯ ನಿವಾಸಿಗಳು ಹೈರಾಣಾಗಿದ್ದಾರೆ.

ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ, ಒಳಚರಂಡಿಯ ಕೊಳವೆ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ನಗರದ ಕೇಂದ್ರ ವಲಯದರೆಸಿಡೆನ್ಸಿ ರಸ್ತೆಯು ಪ್ರಮುಖ ಮಾರ್ಗವಾಗಿದೆ. ಇಲ್ಲಿಂದ ಕೆ.ಆರ್. ಪುರ, ಹೊಸಕೋಟೆ, ಇಂದಿರಾನಗರ, ಮಾರತ್‌ಹಳ್ಳಿ, ದೊಮ್ಮಲೂರು, ಹಲಸೂರು, ಐಟಿಪಿಎಲ್, ವೈಟ್‌ಫೀಲ್ಡ್, ಕಾಡುಗೋಡಿ ಸೇರಿದಂತೆ ಹಲವಾರು ಬಡಾವಣೆಗಳಿಗೆ ಬಿಎಂಟಿಸಿ ಬಸ್‌ಗಳು ಸೇರಿದಂತೆ ನೂರಾರು ವಾಹನಗಳು ಸಂಚರಿಸುತ್ತವೆ. ಕಿರಿದಾದ ರಸ್ತೆಯ ಎರಡೂ ಬದಿಯನ್ನು ಅಗೆದು ಹಾಗೆಯೇ ಬಿಟ್ಟಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ.

'ಬಿಬಿಎಂಪಿ ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಬರುವ ಗ್ರಾಹಕರು ಮತ್ತು ವ್ಯಾಪಾರಿಗಳು ಬಿದ್ದು ಕಾಲು ಮುರಿದು ಕೊಂಡಿದ್ದಾರೆ. ಈ ಎಲ್ಲ ಅವ್ಯವಸ್ಥೆಗಳಿಂದಾಗಿ ಇಲ್ಲಿಗೆ ಖರೀದಿಗೆ ಬರುವ ಗ್ರಾಹಕರ ಸಂಖ್ಯೆ ವಿರಳವಾಗಿದೆ' ಎಂದು ವ್ಯಾಪಾರಿಗಳು ಬೇಸರ ವ್ಯಕ್ತಪಡಿಸಿದರು.

'ಈ ಭಾಗದಲ್ಲಿ ಹಲವಾರು ಶಾಲಾ–ಕಾಲೇಜುಗಳಿವೆ. ವಿದ್ಯಾರ್ಥಿಗಳು ನಿತ್ಯ ಈ ಹಾದಿಯ ಮೂಲಕವೇ ಶಾಲೆ–ಕಾಲೇಜುಗಳಿಗೆ ತಲುಪಬೇಕಿದೆ. ಆದರೆ, ಈ ರಸ್ತೆಯ ಎರಡೂ ಬದಿಯಲ್ಲಿ ಬೃಹತ್ ಗಾತ್ರದ ಕೊಳವೆಗಳನ್ನು ಜೋಡಿಸಿ ಇಡಲಾಗಿದೆ. ಇವು ಯಾವಾಗ ಬೇಕಾದರೂ ಬೀಳುವ ಆತಂಕ ವಿದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಕಾಮಗಾರಿ ನಡೆಯುತ್ತಿರುವದರಿಂದ ವಾಹನಗಳು ನನ್ನ ಅಂಗಡಿಯ ಬಳಿಗೆ ಬರಲು ಸಾಧ್ಯವಾಗುತ್ತಿಲ್ಲ. ಈ ಮೊದಲು ಗ್ರಾಹಕರ ಸಂಖ್ಯೆ ಹೆಚ್ಚಾಗಿರುತ್ತಿತ್ತು. ಆದರೆ, ಇದೀಗ ಒಬ್ಬ ವ್ಯಕ್ತಿ ನಿಂತರೆ ಅದೇ ಅಪರೂಪ ಎನ್ನುವಂತಾಗಿದೆ. ಕಾಮಗಾರಿಯಿಂದಾಗಿ, ಗ್ರಾಹಕರಿಲ್ಲದೇ, ವ್ಯಾಪಾರವೂ ಕುಂಟುತ್ತಾ ಸಾಗುತ್ತಿದೆ' ಎಂದು ಪಾನ್‌ಶಾಪ್ ಅಂಗಡಿಯ ಸುಹೇಲ್ ಹೇಳಿದರು.

'ಎರಡು ವಾರಗಳ ಹಿಂದೆಯೇ ನನ್ನ ಅಂಗಡಿಯ ಮುಂದೆ ಇರುವ ಪ್ರದೇಶವನ್ನು ಅಗೆದು, ಕೆಲಸ ಪ್ರಾರಂಭಿಸಲಾಗಿದೆ. 10 ರಿಂದ 15 ದಿನಗಳವರೆಗೆ ಯಾವುದೇ ಕೆಲಸ ಮಾಡಲಿಲ್ಲ. ದೂಳುಮಯ ವಾತಾವರಣ ನಿರ್ಮಾಣವಾಗಿದ್ದು, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ' ಎಂದು ವ್ಯಾಪಾರಿ ಅನಂತ್ ಹೇಳಿದರು.

ರೆಸಿಡೆನ್ಸಿ ರಸ್ತೆಯಲ್ಲಿ ಕೊಳವೆ ಜೋಡಿಸಲು ಬಿಟ್ಟಿರುವ ಜಾಗ (ಎಡಚಿತ್ರ), ರೆಸಿಡೆನ್ಸಿ ರಸ್ತೆಯಿಂದ ಜಿ3 ಬಸ್ ತಂಗುದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕೊಳವೆಗಳನ್ನು ಜೋಡಿಸಿ ಇಟ್ಟಿರುವುದು ಚಿತ್ರ: ರಂಜು ಪಿ.

> ರೆಸಿಡೆನ್ಸಿ ಮುಖ್ಯರಸ್ತೆಯ ವೈಟ್ ಟಾಪಿಂಗ್ ಕಾಮಗಾರಿ ಮುಕ್ತಾಯಗೊಂಡಿದೆ. ಒಳಚರಂಡಿ ಕಾಮಗಾರಿ ಬಾಕಿ ಉಳಿದಿದೆ. ವಾರದೊಳಗೆ ಈ ಕಾಮಗಾರಿ ಪೂರ್ಣಗೊಳಿಸಲಾಗುವುದು
> **ಲೋಕೇಶ್**, ಬಿಬಿಎಂಪಿ ಮುಖ್ಯ ಎಂಜಿನಿಯರ್

ವ್ಯಾಪಾರಿಗಳು ಏನಂತಾರೆ?

ಜಿ3 ಬಸ್ ತಂಗುದಾಣದ ಮುಂಭಾಗದಲ್ಲಿ ಮದ್ಯದ ಮಳಿಗೆ ಇದೆ. ಈ ಬಸ್ ತಂಗುದಾಣದ ರಸ್ತೆಯನ್ನು ಅಗೆದು ಹಾಕಿದ್ದಾರೆ. ನಮ್ಮ ಮಳಿಗೆಯ ಮುಂಭಾಗದಲ್ಲಿ ಬೃಹತ್ ಗಾತ್ರದ ಕೊಳವೆಗಳನ್ನು ಜೋಡಿಸಿ ಇಡಲಾಗಿದ್ದು, ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ಕಾಮಗಾರಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.
ಅನಂತ್, ಮದ್ಯದ ಮಳಿಗೆಯ ವ್ಯಾಪಾರಿ

ರೆಸಿಡೆನ್ಸಿ ರಸ್ತೆ ಚೆನ್ನಾಗಿಯೇ ಇತ್ತು. ಸರಿ ಇಲ್ಲದ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಬದಲು ಸರಿ ಇರುವ ರಸ್ತೆಯನ್ನು ಕಿತ್ತುಹಾಕಲಾಗಿದೆ. ಮಳೆ ಬಂದರೆ ರಸ್ತೆ ಯಾವುದು ಮತ್ತು ಅಗೆದಿರುವ ಮಾರ್ಗ ಯಾವುದು ಎಂಬುದು ಗೊತ್ತಾಗುವುದಿಲ್ಲ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಸ್ಥಳೀಯ ಶಾಸಕರಾದ ಎನ್.ಎ. ಹ್ಯಾರಿಸ್ ಅವರು ಕಾಮಗಾರಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು.
ಮಹಮ್ಮದ್ ಹುಸೇನ್, ವ್ಯಾಪಾರಿ

ರೆಸಿಡೆನ್ಸಿ ರಸ್ತೆಯಲ್ಲಿರುವ ಜಿ3 ಬಸ್ ತಂಗುದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಸಂಪೂರ್ಣವಾಗಿ ಅಗೆದು ಹಾಕಲಾಗಿದೆ. ಇದರಿಂದ ಬಿಎಂಟಿಸಿ ಬಸ್‌ಗಳು ಒಂದು ಕಿ.ಮೀ ದೂರಕ್ಕೆ ಹೋಗಿ ನಿಲ್ಲುತ್ತಿವೆ. ಅಲ್ಲಿಂದ ನಮ್ಮ ಕಚೇರಿಗೆ ತೆರಳಬೇಕಾದರೆ ತಡವಾಗುತ್ತಿದೆ. ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು.
ಶಶಾಂಕ್, ಖಾಸಗಿ ಕಂಪನಿಯ ಉದ್ಯೋಗಿ

ಸಮಾರಂಭದಲ್ಲಿ ಎಲಿಜಬೆತ್ ಚೆರಿಯನ್ ಅವರು ರೋಟರಿ ಡಿಸ್ಟ್ರಿಕ್ಟ್ 3192ರ ಜಿಲ್ಲಾ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು. ಮಹಾದೇವ ಪ್ರಸಾದ್, ಮಂಗರಾಜ್, ಕೆ.ಪಿ. ನಾಗೇಶ್, ಮನೋಜ್ ದೇಸಾಯಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಎಲಿಜಬೆತ್ ಚೆರಿಯನ್ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಡಿಸ್ಟ್ರಿಕ್ಟ್ 3192 ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎಲಿಜಬೆತ್ ಚೆರಿಯನ್ ಅವರು 2025–26ನೇ ಸಾಲಿಗೆ ರೋಟರಿ ಡಿಸ್ಟ್ರಿಕ್ಟ್ 3192ರ ಜಿಲ್ಲಾ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು.

ನಿಕಟಪೂರ್ವ ಜಿಲ್ಲಾ ಗವರ್ನರ್ ಮಹಾದೇವ ಪ್ರಸಾದ್ ಅವರು ಅಧಿಕಾರ ಹಸ್ತಾಂತರಿಸಿದರು. ಎಲಿಜಬೆತ್ ಚೆರಿಯನ್ ಅವರು ರೋಟರಿ ಕ್ಲಬ್ ಆಫ್ ಬೆಂಗಳೂರಿನಲ್ಲಿ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದರು.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಎಲಿಜಬೆತ್ ಚೆರಿಯನ್, 'ಸಾಮಾಜಿಕ ಸೇವೆಗಳನ್ನು ಮುಂದುವರಿಸುವ ಜತೆಗೆ, ಆರೋಗ್ಯ ತಪಾಸಣೆ ಶಿಬಿರಗಳನ್ನು ನಡೆಸಲಾಗುವುದು. ಗ್ರಾಮೀಣ ಭಾಗದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡಲಾಗುವುದು. ಬಡ ಮಕ್ಕಳ ಹೃದಯ ಶಸ್ತ್ರಚಿಕಿತ್ಸೆಗೆ ನೆರವು ಒದಗಿಸುವಿಕೆ, ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ನೀಡುವಂತಹ ಚಟುವಟಿಕೆಗಳನ್ನು ನಡೆಸಲಾಗುವುದು' ಎಂದು ಹೇಳಿದರು. 'ಕನ್ನಡವನ್ನು ನಾವು ಬಳಸಿ, ಬೆಳೆಸಬೇಕು. ಮನೆಗಳಲ್ಲಿ ಕಡ್ಡಾಯವಾಗಿ ಕನ್ನಡದಲ್ಲಿಯೇ ಮಾತನಾಡುವಂತಾಗಬೇಕು' ಎಂದರು.

ರೋಟರಿ ಇಂಟರ್‌ನ್ಯಾಷನಲ್ ಮಾಜಿ ನಿರ್ದೇಶಕ ಮನೋಜ್ ದೇಸಾಯಿ, 'ಸಮಾಜ ಸೇವೆಯನ್ನು ನಿಯಮಿತವಾಗಿ ಮಾಡಬೇಕು. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತಿಗೆ ಅನುಗುಣವಾಗಿ ಸಾಗಬೇಕು' ಎಂದರು.

ರೋಟರಿ ಡಿಸ್ಟ್ರಿಕ್ಟ್ 3192ರ ಮಾಜಿ ಜಿಲ್ಲಾ ಗವರ್ನರ್ ಮಂಗರಾಜ್, ರೋಟರಿ ಇಂಟರ್‌ನ್ಯಾಷನಲ್ ನಿರ್ದೇಶಕ ಕೆ.ಪಿ. ನಾಗೇಶ್, ರೋಟರಿ ಕಾರ್ಯದರ್ಶಿಗಳಾದ ರೇಣುಕೇಶ್ವರ ಸ್ವಾಮಿ, ಜಗದೀಶ್ ಮುಗಳಿ ಉಪಸ್ಥಿತರಿದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ 'ಗಣ ಹೋಮ'

ವಾಜರಹಳ್ಳಿಯ ಹಾಲಿಡೇ ರಸ್ತೆ ಆಸುಪಾಸಿನ ನಿವಾಸಿಗಳ ವಿನೂತನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ವಾಜರಹಳ್ಳಿ ವ್ಯಾಪ್ತಿಯಲ್ಲಿರುವ 2.7 ಕಿ.ಮೀ ಉದ್ದವಿರುವ ಹಾಲಿಡೇ ವಿಲೇಜ್ ರಸ್ತೆಯನ್ನು ದುರಸ್ತಿಗೊಳಿಸುವಂತೆ ಆಗ್ರಹಿಸಿ ಸುತ್ತಮುತ್ತಲಿನ ನೂರಾರು ನಿವಾಸಿಗಳು ಭಾನುವಾರ ಸಮೀಪದ ದೇವಸ್ಥಾನವೊಂದರಲ್ಲಿ 'ಗಣ ಹೋಮ' ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಹಲವು ಬಾರಿ ಪ್ರತಿಭಟನೆ ನಡೆಸಲು ನಿವಾಸಿಗಳು ಮುಂದಾಗಿದ್ದರು. ಆದರೆ, ಸ್ವಾತಂತ್ರ್ಯಉದ್ಯಾನದಲ್ಲಿ ಮಾತ್ರ ಪ್ರತಿಭಟನೆಗೆ ಅನುಮತಿ ಇದ್ದಿದ್ದರಿಂದ ಪ್ರತಿಭಟನೆ ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ಹಾಲಿಡೇ ವಿಲೇಜ್ ರಸ್ತೆಯಲ್ಲಿರುವ ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿ 'ಗಣ ಹೋಮ' ಪೂಜೆಯೊಂದಿಗೆ 'ಬಿಬಿಎಂಪಿಯವರು ತ್ವರಿತಗತಿಯಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸಲಿ' ಎಂದು ಪ್ರಾರ್ಥಿಸುವ ಮೂಲಕ ನಿವಾಸಿಗಳು ಪ್ರತಿಭಟನೆಗೆ ನಿರ್ಧರಿಸಿದ್ದರು. 'ರಾಜಕೀಯ ಒತ್ತಡ'ದಿಂದಾಗಿ ಆ ಗಣ ಹೋಮ ಪೂಜೆಯನ್ನೂ ಮುತ್ತೂರಾಯ ದೇವಸ್ಥಾನಕ್ಕೆ ವರ್ಗಾಯಿಸಲಾಯಿತು' ಎಂದು ನಿವಾಸಿಗಳು ತಿಳಿಸಿದರು.

ಮುಖ್ಯಾಂಶಗಳು
- ನಡೆದಾಡಲು ಯೋಗ್ಯವಿರದ ರಸ್ತೆ
- ಬೇಸಿಗೆಯಲ್ಲಿ ದೂಳು, ಮಳೆಗಾಲದಲ್ಲಿ ಕೆಸರು
- ರಸ್ತೆ ಸಮಸ್ಯೆಯಿಂದಾಗಿ ಅಪಘಾತಗಳು ಸಂಭವಿಸಿವೆ

'15 ಸಾವಿರಕ್ಕೂ ಹೆಚ್ಚು ಮಂದಿ ಈ ರಸ್ತೆಯನ್ನು ಅವಲಂಬಿಸಿದ್ದಾರೆ. ಈ ಬಡಾವಣೆ ಬಿಬಿಎಂಪಿಗೆ ಒಳಪಟ್ಟಾಗಿನಿಂದಲೂ ರಸ್ತೆ ದುರಸ್ತಿಯಾಗಿಲ್ಲ. ಕಾವೇರಿ ನೀರಿನ ಕೊಳವೆಗಳಿಗಾಗಿ, ವಿದ್ಯುತ್ ತಂತಿಗಳನ್ನು ಅಳವಡಿಸುವುದಕ್ಕಾಗಿ ರಸ್ತೆ ಅಗೆದು ಹಾಗೆ ಬಿಟ್ಟಿದ್ದಾರೆ. ಇದರಿಂದ ವಾಹನಗಳು ಸಂಚರಿಸಿದಾಗ ದೂಳು ಏಳುತ್ತದೆ. ಮಳೆ ಬಂದಾಗ ರಸ್ತೆ ಕೆಸರುಮಯವಾಗುತ್ತದೆ. ಈ ಭಾಗದಲ್ಲಿರುವ ಪೂರ್ವ ಹೈಲ್ಯಾಂಡ್, ಮಾಲ್ಗುಡಿ ಮತ್ತು ಗೋದ್ರೇಜ್ ಎಟರ್ನಿಟಿಯಂತಹ ಅಪಾರ್ಟ್‌ಮೆಂಟ್ ನಿವಾಸಿಗಳು, ಶಾಲಾ– ಕಾಲೇಜುಗಳ ವಿದ್ಯಾರ್ಥಿಗಳು, ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಪಡುತ್ತಾರೆ' ಎಂದು ನಿವಾಸಿಗಳು ದೂರಿದರು.

'ಈ ರಸ್ತೆ ನಡೆದಾಡಲೂ ಯೋಗ್ಯವಾಗಿಲ್ಲ. ಆಟೊ ಚಾಲಕರು 3 ಕಿ.ಮೀಗೆ ₹180 ಕೇಳುತ್ತಾರೆ' ಎಂದು ಸ್ಥಳೀಯ ನಿವಾಸಿ ಸರೋಜ ದೂರಿದರು. 'ಪ್ರತಿದಿನ ಈ ರಸ್ತೆಯಲ್ಲಿ ಕಾಲೇಜಿಗೆ ಹೋಗುವ ತನ್ನ ಮಗಳು ಇತ್ತೀಚೆಗೆ ಸ್ಕೂಟರ್‌ನಿಂದ ಬಿದ್ದು ಗಾಯಗೊಂಡಿದ್ದನ್ನು ವಾಣಿ ಹೆಗಡೆ ನೆನಪಿಸಿಕೊಂಡರು. 'ಮಳೆಗಾಲದಲ್ಲಿ ಕೆಸರಾಗುವ ರಸ್ತೆಯಿಂದಾಗಿ ಶಾಲಾ ಬಸ್ ಅಪಘಾತಕ್ಕೀಡಾಗಿದೆ' ಎಂದು ವಕೀಲ ಪ್ರದೀಪ್ ಶೆಣೈ ಹೇಳಿದರು.

'ಇದನ್ನು ರಸ್ತೆ ಎನ್ನುವುದಕ್ಕೆ ಸಾಧ್ಯವಿಲ್ಲ, ಗುಡ್ಡಗಾಡು ಪ್ರದೇಶ(ಆಫ್ ರೋಡ್) ತರಹ ಇದೆ' ಎಂದು ನಿವಾಸಿ ಗೌತಮ್ ಕಾಮತ್ ಬೇಸರ ವ್ಯಕ್ತಪಡಿಸಿದರು. 'ರಸ್ತೆ ದುರಸ್ತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸುವ ಸುಳಿವು ಸಿಕ್ಕ ಕಾರಣ, ಹಿಂದಿನ ದಿನ ರಾತ್ರಿ ಕೆಲವು ಕಡೆ ಕಾಂಕ್ರೀಟ್ ಹಾಕಿ, ರಸ್ತೆ ಕಾಮಗಾರಿ ನಡೆಯುತ್ತಿದೆ ಎಂದು ತೋರಿಸಲು ಪ್ರಯತ್ನಿಸಿದ್ದಾರೆ' ಎಂದು ದೂರಿದರು. 'ಇತ್ತೀಚೆಗೆ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಆರಂಭಿಸುವುದಕ್ಕಾಗಿ ಭೂಮಿ ಪೂಜೆ ಮಾಡಲಾಗಿದೆ. ಕಾಮಗಾರಿ ಇನ್ನೂ ಶುರುವಾಗಬೇಕಿದೆ' ಎಂದು ಗೌತಮ್ ಹೇಳಿದರು.

ಹಾಳಾಗಿರುವ ವಾಜರಹಳ್ಳಿಯ ಹಾಲಿಡೇ ವಿಲೇಜ್– ಮಲ್ಲಸಂದ್ರ ರಸ್ತೆಯನ್ನು ದುರಸ್ತಿಗೊಳಿಸುವಂತೆ ಆಗ್ರಹಿಸಿ ಸ್ಥಳೀಯ ನಿವಾಸಿಗಳು, ಮುತ್ತೂರಾಯ ದೇವಸ್ಥಾನದ ಆವರಣದಲ್ಲಿ ಪ್ರತಿಭಟನೆ ನಡೆಸಿದರು

'ಮೂರು ತಿಂಗಳಲ್ಲಿ ಡಿಕೆಶಿ ಸಿ.ಎಂ ಆಗ್ತಾರೆ'

ಪ್ರಜಾವಾಣಿ ವಾರ್ತೆ

ರಾಮನಗರ: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೂರು ತಿಂಗಳಲ್ಲಿ ಮುಖ್ಯಮಂತ್ರಿಯಾಗಲಿದ್ದಾರೆ. ರಾಜಕಾರಣದಲ್ಲಿ ಬದಲಾವಣೆ ಸಹಜ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದರು.

ಸೆಪ್ಟೆಂಬರ್‌ನಲ್ಲಿ ಕ್ರಾಂತಿ ನಡೆಯಲಿದೆ ಎಂದಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಮಾತು ಕುರಿತು ಪ್ರತಿಕ್ರಿಯಿಸಿದ ಹುಸೇನ್, 'ಕಾಂಗ್ರೆಸ್‌ನಲ್ಲಿ ಶಿಸ್ತು ಮತ್ತು ಬದ್ಧತೆ ಇದೆಯೇ ಹೊರತು, ಯಾವ ಪವರ್ ಸೆಂಟರ್ ಕೂಡ ಇಲ್ಲ. ನಮಗಿರುವುದು ಒಂದೇ ಹೈಕಮಾಂಡ್' ಎಂದರು.

'ಎಲ್ಲವೂ ಹೈಕಮಾಂಡ್ ಗಮನದಲ್ಲಿದೆ. ಸೂಕ್ತ ಸಮಯಕ್ಕೆ ಅವರು ನಮ್ಮ ನಾಯಕರಿಗೆ ಅವಕಾಶ ಮಾಡಿಕೊಡುತ್ತಾರೆ. ಕೆಲವರು ಹೇಳುವಂತೆ ಕ್ರಾಂತಿಯಾಗಲಿದೆ. ಮುಂದಿನ ಎರಡ್ಮೂರು ತಿಂಗಳಲ್ಲಿ ಎಲ್ಲವೂ ತೀರ್ಮಾನವಾಗಲಿದೆ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ನಮ್ಮ ಸಂಖ್ಯೆ ಎಷ್ಟಿತ್ತು? ಈಗ ಎಷ್ಟಿದೆ? ಅದಕ್ಕೆ ಯಾರ ಹೋರಾಟ ಮತ್ತು ಶ್ರಮ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅವರು ಮಾಡಿದ ಕಾರ್ಯಕ್ರಮ ಇತಿಹಾಸ. ಮೇಕೆದಾಟು, ಕೋವಿಡ್ ಕಾಲದಲ್ಲಿ ಅವರು ನೆರವಿನ ಹಸ್ತ ಚಾಚಿದಂತೆ ಯಾರೂ ಮಾಡಿಲ್ಲ' ಎಂದು ಹೇಳಿದರು.

'ಸಿ.ಎಂ ಬದಲಾವಣೆ ಕುರಿತು ಹೈಕಮಾಂಡ್ ಅವರಿಂದ ಯಾವುದೇ ಸೂಚನೆ ಬಂದಿಲ್ಲ' ಎಂಬ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಕುರಿತ ಪ್ರಶ್ನೆಗೆ, 'ಅವತ್ತು ದೆಹಲಿಯಲ್ಲಿ ತೀರ್ಮಾನವಾದಾಗ ನಾವು ಸಹ ಜೊತೆಯಲ್ಲಿದ್ದೆವು. ಪಕ್ಷದ ಹೈಕಮಾಂಡ್ ನಿರ್ಧಾರ ಮಾಡಿದೆ. ಸೂಕ್ತ ಸಮಯಕ್ಕೆ ತಮ್ಮ ತೀರ್ಮಾನ ತಿಳಿಸಲಿದ್ದಾರೆ' ಎಂದರು.



ಶ್ವಾಸಯೋಗ ಸಂಸ್ಥೆ, ಸಂತೋಷ್ ಲಾಡ್ ಫೌಂಡೇಷನ್ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬ್ರಹ್ಮೇಶಾನಂದ ಆಚಾರ್ಯ, ಯೋಗರಿಶಿ ವಿಶ್ವಕೇತು, ಬಿಕ್ಕು ಸಂಗಸೇನ ಹಾಗೂ ಯೋಗಿನಿ ಒಲ್ಗೆನಾ ತಾರಾಸೋವಾ ಅವರಿಗೆ 'ಯೋಗ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ವಚನಾನಂದ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತರಿದ್ದರು

'ಯೋಗರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ

'ಎಲ್ಲರಿಗಿಂತ ದೊಡ್ಡ ಯೋಗಿ ಶಿವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲರಿಗಿಂತ ದೊಡ್ಡ ಯೋಗಿ ಶಿವ. ಶಿವನ ಜೊತೆ ಯಾವಾಗಲೂ ನಮ್ಮ ಯೋಗ ಸಂಬಂಧ ಇರುತ್ತದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಶ್ವಾಸ ಯೋಗ ಸಂಸ್ಥೆ ಹಾಗೂ ಸಂತೋಷ ಲಾಡ್ ಫೌಂಡೇಷನ್ ವತಿಯಿಂದ ಭಾನುವಾರ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ 2025ನೇ ಸಾಲಿನ 'ಯೋಗ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಶ್ವಾಸ ಗುರು ವಚನಾನಂದ ಸ್ವಾಮೀಜಿ ಕರ್ನಾಟಕದಲ್ಲಿ ಯೋಗದ ದೊಡ್ಡ ಕ್ರಾಂತಿ ಮಾಡಿದ್ದಾರೆ. ಕೇವಲ ಯೋಗಿಗೆ ಸೀಮಿತವಾಗಿದ್ದ ಯೋಗವನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಯೋಗ ಜಗತ್ತಿನಲ್ಲಿ ಅವರು ಪರಿಚಿತರಾದ ಕಾರಣ, ಜಗತ್ತಿನಾದ್ಯಂತ ಇರುವ ಅವರ ಅಭಿಮಾನಿಗಳು ಕಾರ್ಯಕ್ರಮಕ್ಕೆ ಬಂದಿದ್ದಾರೆ' ಎಂದರು.

'ಕಷ್ಟ ಪಡುವುದು ಯೋಗವಲ್ಲ. ಸಹಜವಾಗಿ ಮಾಡುವುದೇ ಯೋಗ. ಸ್ವಾಮಿ ವಿವೇಕಾನಂದರು 'ಸಾವಿನ ನಂತರ ಬದುಕುವವರು ಸಾಧಕರು' ಎಂದಿದ್ದಾರೆ. ಸ್ವಾಮಿಜಿಗಳು 500 ವರ್ಷ ಬದುಕಿದ್ದರು. ಅಂದರೆ ಅವರ ವಿಚಾರಗಳು ಈಗಲೂ ಇವೆ. ಕಾಲ ಮಿತಿಯನ್ನು ಮೀರಿ ಸಾಧಿಸುವುದೇ ಯೋಗ' ಎಂದರು.

ಈ ಸಂದರ್ಭದಲ್ಲಿ ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಶ್ವಾಸ ಗುರು ವಚನಾನಂದ ಸ್ವಾಮಿ, ಸಚಿವ ಸಂತೋಷ ಲಾಡ್, ಸಂಸದೆ ಪ್ರಭಾ ಮಲ್ಲಿಕಾರ್ಜುನ ಹಾಜರಿದ್ದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ 'ಚೀಫ್ ಮಿನಿಸ್ಟರ್ಸ್ ಕಪ್' ರೇಸ್‌ನಲ್ಲಿ ಗೆದ್ದ ಟೈಮ್ ಅಂಡ್ ಟೈಡ್ ಕುದುರೆಯ ಮಾಲೀಕರಾದ ವಿಕ್ರಂ ಬಚಾವತ್ ಅವರಿಗೆ ಬಿಟಿಸಿ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆರ್. ಮಂಜುನಾಥ್ ರಮೇಶ್ ಟ್ರೋಫಿ ಪ್ರದಾನ ಮಾಡಿದರು. ಸ್ಟೀವರ್ಡ್ ಸಿ. ಮಹೇಶ್ ಮೇದಪ್ಪ, ವ್ಯವಸ್ಥಾಪಕ ಸಮಿತಿ ಸದಸ್ಯ ಡಾ.ಸಿ.ಎ.ಪ್ರಶಾಂತ್ ಹಾಗೂ ಸ್ಟೀವರ್ಡ್ ಕೆ.ಎ.ಜಗದೀಶ್ ಉಪಸ್ಥಿತರಿದ್ದರು

ಕೆಪಿಸಿಸಿ: ಐಶ್ವರ್ಯಾ ಮಹದೇವ್ ನೇಮಕ

ಬೆಂಗಳೂರು: ಕೆಪಿಸಿಸಿ ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷ ರನ್ನಾಗಿ ಐಶ್ವರ್ಯಾ ಮಹದೇವ್ ಅವರನ್ನು ನೇಮಿಸಲಾಗಿದೆ.

ಐಶ್ವರ್ಯಾ ಅವರನ್ನು ತಕ್ಷಣದಿಂದ ಜಾರಿ ಬರುವಂತೆ ನೇಮಿಸಿದ ಕುರಿತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಲ್ ಅವರು ಭಾನುವಾರ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಐಶ್ವರ್ಯಾ ಅವರು ಸದ್ಯ ಕೆಪಿಸಿಸಿ ಮಾಧ್ಯಮ ವಿಭಾಗದ ಸಹ ಅಧ್ಯಕ್ಷರಾಗಿದ್ದಾರೆ.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಪೀಣ್ಯ: ರಸ್ತೆ ಗುಂಡಿಮುಚ್ಚಿ'

ಪೀಣ್ಯ ವಿದ್ಯಾಸೌಧ ಶಾಲೆಯ ಎಸ್.ಎಂ. ಲಿಂಕ್ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಈ ರಸ್ತೆ ಹದಗೆಟ್ಟಿದೆ. ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇಲ್ಲಿ ಗುಂಡಿಗಳು ಬಿದ್ದಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. 12 ವರ್ಷಗಳಿಂದ ಈ ರಸ್ತೆಗೆ ಡಾಂಬರು ಹಾಕಿಲ್ಲ. ರಸ್ತೆ ದುರಸ್ತಿಗೊಳಿಸುವಂತೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.
ಸಂತೋಷ್, ಪೀಣ್ಯ

'ಅಗೆದಿರುವ ರಸ್ತೆ ದುರಸ್ತಿಗೊಳಿಸಿ'

ತಿಪ್ಪಸಂದ್ರ, ಬಿಇಎಂಎಲ್ ಗೇಟ್, ಜಿ.ಎಂ. ಪಾಳ್ಯ ಮತ್ತು ಮಲ್ಲೇಶ್ ಪಾಳ್ಯ ಮುಖ್ಯರಸ್ತೆಯನ್ನು ಅಗೆದು ಹಾಕಲಾಗಿದೆ. ಇಲ್ಲಿ ಒಳಚರಂಡಿ ಕಾಮಗಾರಿ ನಡೆಸುವ ಸಬೂಬು ಹೇಳಿ ಎರಡು ತಿಂಗಳ ಹಿಂದೆಯೇ ಈ ರಸ್ತೆಯನ್ನು ಅಗೆದು, ಹಾಗೆಯೇ ಬಿಡಲಾಗಿದೆ. ಇಲ್ಲಿ ವಾಹನಗಳನ್ನು ಚಲಾಯಿಸುವುದೇ ಸವಾಲಾಗಿದೆ. ರಸ್ತೆ ಅಗೆದ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಒಳಚರಂಡಿ ಕಾಮಗಾರಿ ಪೂರ್ಣಗೊಳಿಸುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿದೆ.
ಕೃಷ್ಣಮೂರ್ತಿ, ಮಲ್ಲೇಶ್ ಪಾಳ್ಯ

ಒಣಗಿದ ರೆಂಬೆ ತೆರವು

ವರದಿ ಪರಿಣಾಮ

ಬಸವನಗುಡಿ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಗಾಂಧಿಬಜಾರ್‌ನ ಮುಖ್ಯರಸ್ತೆಯ ಹೋಟೆಲ್ ಆತಿಥ್ಯ ಸುತ್ತಮುತ್ತಲಿನಲ್ಲಿ ಬೃಹತ್ ಗಾತ್ರದ ಮರಗಳ ಒಣಗಿದ ರೆಂಬೆ–ಕೊಂಬೆಗಳನ್ನು ಕತ್ತರಿಸಲಾಗಿದೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಜೂನ್ 22ರಂದು 'ಒಣಗಿದ ಕೊಂಬೆಗಳನ್ನು ಕತ್ತರಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಮರಗಳ ಒಣಗಿದ ರೆಂಬೆ–ಕೊಂಬೆಗಳನ್ನು ಕತ್ತರಿಸಿದ್ದಾರೆ.

'ಪಾದಚಾರಿ ಮಾರ್ಗ ಸರಿಪಡಿಸಿ'

ಮಲ್ಲೇಶ್ವರದ ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣದ ಪ್ರವೇಶ ದ್ವಾರದ ಪಕ್ಕದಲ್ಲಿರುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಹೋಗಿದೆ. ಎರಡು ತಿಂಗಳಿಂದ ಈ ಪಾದಚಾರಿ ಮಾರ್ಗ ತೆರೆದ ಸ್ಥಿತಿಯಲ್ಲಿದೆ. ಈ ಮಾರ್ಗವಾಗಿ ನಿತ್ಯ ನೂರಾರು ಜನ ಓಡಾಡುತ್ತಾರೆ. ಕಿತ್ತು ಹೋಗಿರುವ ಕಾಂಕ್ರೀಟ್ ಸ್ಲ್ಯಾಬ್‌ನ ಜಾಗದಲ್ಲಿ ಬ್ಯಾರಿಕೇಡ್ ಇಡಲಾಗಿದೆ. ಮೆಟ್ರೊ ನಿಲ್ದಾಣಕ್ಕೆ ಬರುವ ವೃದ್ಧರು, ಮಕ್ಕಳು ಮತ್ತು ಮಹಿಳೆಯರು ಮುಖ್ಯ ರಸ್ತೆಯಲ್ಲಿ ಹಾದು ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಇದನ್ನು ದುರಸ್ತಿಗೊಳಿಸಬೇಕು.
ಕೆ.ಆರ್. ಪುತ್ರನ್, ಮಲ್ಲೇಶ್ವರ

'ರಸ್ತೆಯಲ್ಲಿ ಓಡಾಡುವ ಬೀಡಾಡಿ ದನ'

ಜೆ.ಪಿ. ನಗರ ಆರನೇ ಹಂತದ ಪುಟ್ಟೇನಹಳ್ಳಿ ಮುಖ್ಯರಸ್ತೆಯಲ್ಲಿ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಈ ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಸಮಸ್ಯೆ ಆಗುತ್ತಿದ್ದು, ಸಂಚಾರ ದಟ್ಟಣೆಗೂ ಕಾರಣವಾಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಇವುಗಳಿಂದ ಬೀದಿಬದಿಯ ವ್ಯಾಪಾರಿಗಳಿಗೆ ಕಿರಿಕಿರಿ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಬೀಡಾಡಿ ದನಗಳ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು.
ಗಣೇಶ್, ಜೆ.ಪಿ. ನಗರ

ಅರ್ಜಿ ಆಹ್ವಾನ

ಬೆಂಗಳೂರು: ಶ್ರೀ ಅಯ್ಯಪ್ಪನ್ ಕೈಗಾರಿಕಾ ತರಬೇತಿ ಸಂಸ್ಥೆಯು ಎಲೆಕ್ಟ್ರಾನಿಕ್ಸ್ ವೃತ್ತಿಯಲ್ಲಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ.

ಎಸ್ಎಸ್ಎಲ್‌ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಟೂಲ್ ಕಿಟ್, ಸಮವಸ್ತ್ರ ಹಾಗೂ ಲ್ಯಾಪ್‌ಟಾಪ್ ಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆಸಕ್ತರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಶ್ರೀ ಅಯ್ಯಪ್ಪನ್ ಶಿಕ್ಷಣ ಸಂಸ್ಥೆಗಳು, ಎಂ.ಎಂ. ಅಡ್ಡ ರಸ್ತೆ, ಏರ್‌ಟೆಲ್ ಆಫೀಸ್ ಹಿಂಭಾಗ, ಜಯಮಹಲ್ ರಸ್ತೆ, ಬೆಂಗಳೂರು–560046. ಮಾಹಿತಿಗೆ: 080–23433008, 98869 64437.

ನಿಧನ ವಾರ್ತೆ

ಮಹಾದೇವಪ್ಪ ಶಿಲ್ಪಿ



ಚಿತ್ತಾಪುರ: ಕರ್ನಾಟಕ ರಾಜ್ಯ ಶಿಲ್ಪಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಮಹಾದೇವಪ್ಪ ಶಂಭುಲಿಂಗ ಶಿಲ್ಪಿ (88) ಅವರು ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮ ದಿಗ್ಗಾಂವ ಗ್ರಾಮದಲ್ಲಿ ಮಧ್ಯಾಹ್ನ 2.30ಕ್ಕೆ ನೆರವೇರಲಿದೆ ಎಂದು ಮೃತರ ಕುಟುಂಬದವರು ತಿಳಿಸಿದ್ದಾರೆ. 2014ರಿಂದ 2017ರ ಅವಧಿಯಲ್ಲಿ ಅವರು ಅಕಾಡೆಮಿಗೆ ಅಧ್ಯಕ್ಷರಾಗಿದ್ದರು.

ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್
ನಂ.1, ಮಿಡ್‌ಫೋರ್ಡ್ ಹೌಸ್, ಮಿಡ್‌ಫೋರ್ಡ್ ಗಾರ್ಡನ್, ಆಫ್ ಎಂ.ಜಿ. ರಸ್ತೆ, ಬೆಂಗಳೂರು-560 001
ಫೋನ್: (080) 25595252, 25559819, ಫ್ಯಾಕ್ಸ್: (080) 25559998, e-mail: nandi@nicelimited.com
CIN : U85110KA2000PLC026939

ಸಾರ್ವಜನಿಕ ಪ್ರಕಟಣೆ

ಬೆಂಗಳೂರು – ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರವುದೇನೆಂದರೆ, ಕರ್ನಾಟಕ ಸರ್ಕಾರದೊಂದಿಗೆ ದಿನಾಂಕ: 04.09.2000 ರಂದು ಮಾಡಿಕೊಂಡ ಟೋಲ್ ರಿಯಾಯಿತಿ ಒಪ್ಪಂದ ಹಾಗೂ ಸರ್ಕಾರದ ಮೊದಲ ಅಧಿಸೂಚನೆ ಸಂಖ್ಯೆ: PWD 40 CRM 2008, ದಿನಾಂಕ: 18.12.2008 ರನ್ವಯ ಬಿಎಂಐಸಿ ಯೋಜನೆಯ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಯ ಟೋಲ್ ದರಗಳನ್ನು ದಿನಾಂಕ: 01.07.2025 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕರಿಸಲಾಗುತ್ತಿದೆ.

ಕ್ರಮ ಸಂಖ್ಯೆ	ಎಲ್ಲಿಂದ ಎಲ್ಲಿಗೆ	ಉದ್ದ ಕಿ. ಮೀ ಗಳಲ್ಲಿ	ಕಾರು	ಬಸ್ಸು	ಟ್ರಕ್ಕು	ಲಘು ವಾಣಿಜ್ಯ ವಾಹನ	ಎಂ.ಎ.ವಿ. (ಪ್ರತಿ ಎಕ್ಸೆಲ್‌ಗೆ)	ದ್ವಿಚಕ್ರ ವಾಹನ
			ಮೊತ್ತ ರೂಪಾಯಿಗಳಲ್ಲಿ					
1	ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆಗೆ	8.74	65	195	128	75	130	30
2	ಬನ್ನೇರುಘಟ್ಟ ರಸ್ತೆಯಿಂದ ಕನಕಪುರ ರಸ್ತೆಗೆ	6.79	48	155	98	50	100	15
3	ಕನಕಪುರ ರಸ್ತೆಯಿಂದ ಕ್ಲೋವರ್ ಲೀಫ್ ಜಂಕ್ಷನ್‌ಗೆ	4.36	35	95	60	40	55	10
4	ಕ್ಲೋವರ್ ಲೀಫ್ ಜಂಕ್ಷನ್‌ನಿಂದ ಮೈಸೂರು ರಸ್ತೆಗೆ	3.88	33	85	50	40	55	10
5	ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ	9.55	70	205	140	85	135	30
6	ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ	7.48	55	160	105	60	105	15
7	ಲಿಂಕ್ ರಸ್ತೆ	8.10	75	200	135	80	150	23

ಅಧಿಕೃತ ಸಹಿ
ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್

ರೈತರಿಗೆ ಗರಿಷ್ಠ ಬೆಲೆ ಕೊಡಿಸುವ ಹೊಣೆ ಮಂಡಳಿಗೆ

ಬಿಲಿಯನ್ ಡಾಲರ್ ಅರಿಸಿನ ರಫ್ತು ಗುರಿ: ಅಮಿತ್ ಶಾ

ಹೈದರಾಬಾದ್ (ಪಿಟಿಐ): 2030ರ ವೇಳೆಗೆ 1 ಬಿಲಿಯನ್ ಡಾಲರ್ (ಅಂದಾಜು ₹8,548 ಕೋಟಿ) ಮೌಲ್ಯದ ಅರಿಸಿನ ರಫ್ತು ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಅರಿಸಿನ ಮಂಡಳಿಯ ರಾಷ್ಟ್ರೀಯ ಕೇಂದ್ರ ಕಚೇರಿಯನ್ನು ಇಲ್ಲಿನ ನಿಜಾಮಾಬಾದ್‌ನಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. ಅರಿಸಿನ ಮಂಡಳಿಯು ಈ ಪದಾರ್ಥದ ಪ್ಯಾಕಿಂಗ್, ಬ್ರ್ಯಾಂಡ್ ತಂದುಕೊಡುವ ಕೆಲಸ, ಮಾರಾಟ ಮಾಡುವ ಮತ್ತು ರಫ್ತು ಮಾಡುವ ಕಡೆ ಗಮನ ನೀಡಲಿದೆ ಎಂದು ಹೇಳಿದ್ದಾರೆ.

ಅಲ್ಲದೆ, ಅರಿಸಿನ ಬೆಳೆಯುವ ರೈತರಿಗೆ ಆಕರ್ಷಕ ಬೆಲೆ ಲಭ್ಯವಾಗುವಂತೆ ಮಾಡುವ ಬಗ್ಗೆ, ಅರಿಸಿನದ ಬಗ್ಗೆ ಸಂಶೋಧನೆ ನಡೆಸುವ ಬಗ್ಗೆಯೂ ಗಮನ ಹರಿಸಲಿದೆ ಎಂದು ಶಾ ಅವರು ಹೇಳಿದ್ದಾರೆ.

'1 ಬಿಲಿಯನ್ ಡಾಲರ್ ಮೌಲ್ಯದ ಅರಿಸಿನವನ್ನು 2030ರ ವೇಳೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಗಳಿಗೆ ರಫ್ತು ಮಾಡುವ ಗುರಿಯನ್ನು ಕೇಂದ್ರ ಹೊಂದಿದೆ ಎಂಬುದನ್ನು ಕೇಳಿ ನಿಮಗೆ ಆಶ್ಚರ್ಯ ಆಗಬಹುದು. ಆದರೆ ಈ ಗುರಿಯನ್ನು ತಲುಪಲು ಬೇಕಿರುವ ಪೂರ್ಣ ಸಿದ್ಧತೆಗಳನ್ನು ಕೇಂದ್ರವು ಮಾಡಿಕೊಂಡಿದೆ. ರಚನೆ ಆಗಲಿರುವ ಅರಿಸಿನ ಮಂಡಳಿಯು, ರೈತರಿಗೆ ಗರಿಷ್ಠ ಬೆಲೆ ಸಿಗುವಂತೆ ಖಾತರಿಪಡಿಸಲು ಕೆಲಸ ಮಾಡಲಿದೆ' ಎಂದು ಅವರು ಹೇಳಿದ್ದಾರೆ.

ತೆಲಂಗಾಣದಲ್ಲಿ ಅರಿಸಿನ ಮಂಡಳಿ ಸ್ಥಾಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಭರವಸೆ ನೀಡಿದ್ದರು. ನಂತರ ಅದಕ್ಕೆ ಸಂಬಂಧಿಸಿದ ಆದೇಶ ಹೊರಡಿಸಲಾಯಿತು ಎಂದು ನೆನಪಿಸಿದ್ದಾರೆ.

ಅರಿಸಿನ ಮಂಡಳಿ ಸ್ಥಾಪನೆ ಆಗಬೇಕು ಎಂಬುದು ನಿಜಾಮಾಬಾದ್‌ನ ಅರಿಸಿನ ಬೆಳೆಗಾರರ ಪ್ರಮುಖ ಬೇಡಿಕೆಗಳಲ್ಲಿ ಒಂದು. ಇದು ಚುನಾವಣೆಯ ಸಂದರ್ಭದಲ್ಲಿ ಪ್ರಮುಖ ವಿಷಯವಾಗಿ ಪ್ರಸ್ತಾಪ ಆಗಿತ್ತು.

ಕೆಲಸ ಹೋದಾಗ ಸಾಲ ನಿಭಾಯಿಸುವ ಬಗೆ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ವರದಿಯೊಂದರ ಪ್ರಕಾರ ಕೃತಕ ಬುದ್ಧಿಮತ್ತೆ (ಎ.ಐ), ಆರ್ಥಿಕ ಅನಿಶ್ಚಿತತೆಯ ಭೀತಿ, ವೆಚ್ಚ ಕಡಿತ ಸೇರಿದಂತೆ ಹಲವು ಕಾರಣಗಳಿಂದಾಗಿ 2025ರಲ್ಲಿ ಈವರೆಗೆ ಅಂದಾಜು 1 ಲಕ್ಷ ಭಾರತೀಯರು ಉದ್ಯೋಗ ಕಳೆದುಕೊಂಡಿದ್ದಾರೆ. ವಿವಿಧ ವಲಯಗಳ ತಜ್ಞರ ಅಂದಾಜಿನ ಪ್ರಕಾರ ಎ.ಐ ಬೆಳವಣಿಗೆಯಿಂದಾಗಿ ಮುಂಬರುವ ದಿನಗಳಲ್ಲಿ ಸುಮಾರು 1.2 ಕೋಟಿಯಿಂದ 1.8 ಕೋಟಿ ಜನ ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಕೆಲಸ ಕಳೆದುಕೊಳ್ಳುವುದು ಮಾನಸಿಕ ನೆಮ್ಮದಿ ಕೆಡಿಸುವುದಲ್ಲದೆ, ಕುಟುಂಬದ ಹಣಕಾಸಿನ ಪರಿಸ್ಥಿತಿಯನ್ನೂ ಹಾಳು ಮಾಡುತ್ತದೆ. ಉದ್ಯೋಗ ನಷ್ಟದಂತಹ ಸಂದರ್ಭದಲ್ಲಿ ಸಾಲದ ಮಾಸಿಕ ಕಂತಿನ (ಇಎಂಐ) ಭಾರ ಹೊರುವುದು ಹೇಗೆ ಎನ್ನುವುದನ್ನು ತಿಳಿಯೋಣ.

ಸಾಲ ಮಾಡುವಾಗ ಇವನ್ನು ಮರೆಯಬೇಡಿ: ಗೃಹಸಾಲದಂತಹ ದೀರ್ಘಾವಧಿ ಸಾಲಗಳನ್ನು ಪಡೆಯುವಾಗ ನಿಮ್ಮ ಆದಾಯದ ಶೇ 30ರಿಂದ ಶೇ 35ರಷ್ಟು ಮೊತ್ತ ಮಾತ್ರ ಸಾಲದ ಕಂತಿಗೆ ಹೋಗುವಂತೆ ನೋಡಿಕೊಳ್ಳಿ. ನಿಮ್ಮ ಆದಾಯ ₹1 ಲಕ್ಷವಿದ್ದರೆ ನಿಮ್ಮ ಸಾಲದ ಮಾಸಿಕ ಕಂತು (ಇಎಂಐ) ₹30 ಸಾವಿರದಿಂದ ₹35 ಸಾವಿರ ಮೀರದಿರಲಿ. ಈ ಮಿತಿಯನ್ನು ಮೀರಿ ಸಾಲ ಮಾಡಿದಾಗ ಉಳಿತಾಯ ಮತ್ತು ಹೂಡಿಕೆ ಮಾಡಲು ಹಣವಿರುವುದಿಲ್ಲ. ಉದ್ಯೋಗ ಕಳೆದುಕೊಂಡ ಸಂದರ್ಭಗಳಲ್ಲಿ ಸಾಲದ ಹೊರೆ ಹೊರುವುದು ಕಷ್ಟವಾಗುತ್ತದೆ. ನಿಮ್ಮ ತಿಂಗಳ ಖರ್ಚಿನ 12 ಪಟ್ಟು ಮೊತ್ತವನ್ನು ಲಿಕ್ವಿಡ್ ಫಂಡ್ ಅಥವಾ ನಿಶ್ಚಿತ ಠೇವಣಿಯಲ್ಲಿ ಇರಿಸಿಕೊಳ್ಳಿ. ಇದು ಉದ್ಯೋಗ ನಷ್ಟದಂತಹ ಕಷ್ಟಕಾಲಕ್ಕೆ ತುರ್ತು ನಿಧಿಯಾಗಿ ಕೆಲಸ ಮಾಡುತ್ತದೆ.

ಸಾಲದ ಇಎಂಐ ಒಳಗೊಂಡು ನಿಮ್ಮ ಮಾಸಿಕ ವೆಚ್ಚ ₹75 ಸಾವಿರ ಆದಲ್ಲಿ ನಿಮ್ಮ ಬಳಿ ₹9 ಲಕ್ಷ ತುರ್ತು ನಿಧಿಯಿರಲಿ. ಇದು ಇದ್ದಾಗ ಮತ್ತೊಂದು ಕೆಲಸ ಹುಡುಕುವ ಪ್ರಯತ್ನವನ್ನು ಹೆಚ್ಚು ತಲೆಬಿಸಿಯಿಲ್ಲದೆ ಮಾಡುವ ಜೊತೆಗೆ 12 ತಿಂಗಳ ಖರ್ಚನ್ನು ನಿಭಾಯಿಸಿಕೊಳ್ಳಬಹುದು. ಇಷ್ಟೇ ಅಲ್ಲ, ಮನೆಯ ಹಣಕಾಸಿನ ಜವಾಬ್ದಾರಿಯಿರುವ ಯಜಮಾನಿ/ಯಜಮಾನ ಕಡ್ಡಾಯವಾಗಿ ಅವಧಿ ವಿಮೆ ತೆಗೆದುಕೊಳ್ಳಬೇಕು. ಈ ವಿಮೆ ಸಂಕಷ್ಟ ಕಾಲದಲ್ಲಿ ಕುಟುಂಬಕ್ಕೆ ಹಣಕಾಸಿನ ನೆರವು ಒದಗಿಸುತ್ತದೆ. ವ್ಯಕ್ತಿಯ ಆಕಸ್ಮಿಕ ಸಾವಿನ ಸಂದರ್ಭದಲ್ಲಿ ಈ ವಿಮೆ ಪರಿಹಾರ ನೀಡುತ್ತದೆ. ವ್ಯಕ್ತಿಯೊಬ್ಬ ₹50 ಲಕ್ಷ, ₹1 ಕೋಟಿ, ₹2 ಕೋಟಿಗೆ ಅವಧಿ ವಿಮೆ ತೆಗೆದುಕೊಂಡಿದ್ದು ಆಕಸ್ಮಿಕವಾಗಿ ಮೃತಪಟ್ಟರೆ ಅವರ ಕುಟುಂಬಕ್ಕೆ ವಿಮಾ ರಕ್ಷೆಯ ಪೂರ್ಣ ಮೊತ್ತ ಸಂದಾಯವಾಗುತ್ತದೆ. ಸಾಲವಿದ್ದವರಷ್ಟೇ ಅಲ್ಲ, ಸಾಲವಿಲ್ಲದವರೂ ಅವಧಿ ವಿಮೆ ತೆಗೆದುಕೊಳ್ಳಬೇಕು.

ಈಗಿನ ಆರ್ಥಿಕ ಸ್ಥಿತಿಯ ಅಂದಾಜು: ಉದ್ಯೋಗವಿಲ್ಲದ ಸಂದರ್ಭದಲ್ಲಿ ಇಎಂಐ ನಿಭಾಯಿಸುವುದು ಕಷ್ಟ. ಆದರೆ ಮೇಲೆ ತಿಳಿಸಿದ ಹಾಗೆ ಹಣಕಾಸು ನಿರ್ವಹಣೆಯ ಶಿಸ್ತು ರೂಢಿಸಿಕೊಂಡಿದ್ದರೆ ಅದನ್ನು ನಿಭಾಯಿಸುವುದು ಅಸಾಧ್ಯದ ಕೆಲಸವೇನಲ್ಲ. ಉದ್ಯೋಗ ನಷ್ಟ ಆದ ತಕ್ಷಣ ನಿಮ್ಮ ವೇತನದ ಖಾತೆಯಲ್ಲಿನ ತುರ್ತು ನಿಧಿಯಲ್ಲಿ ಎಷ್ಟು ಹಣವಿದೆ ನೋಡಿ. ಆ ಮೊತ್ತದಿಂದ ಎಷ್ಟು ತಿಂಗಳ ಇಎಂಐ ನಿಭಾಯಿಸಬಹುದು ಅಂದಾಜು ಮಾಡಿ. ನಿಮ್ಮ ತಿಂಗಳ ಖರ್ಚು ವೆಚ್ಚಗಳ ಅಂದಾಜನ್ನು ತೆಗೆದುಕೊಳ್ಳಿ. ಆಹಾರ, ಆರೋಗ್ಯ ನಿರ್ವಹಣೆ, ಅಗತ್ಯ ವಸ್ತುಗಳ ಖರೀದಿಗೆ ವಿನಿಯೋಗವಾಗುವ ಮೊತ್ತವೆಷ್ಟು ಮತ್ತು ಹೊರಗೆ ಊಟ ಮಾಡುವುದು, ಒಟಿಟಿ ಚಂದಾದಾರಿಕೆ, ಸಿನಿಮಾ, ಪ್ರವಾಸದಂತಹ ಅತ್ಯಗತ್ಯವಲ್ಲದ ಉದ್ದೇಶಗಳಿಗೆ ಖರ್ಚಾಗುವ ಹಣವೆಷ್ಟು ಲೆಕ್ಕಚಾರ ಮಾಡಿ. ಅಗತ್ಯವಲ್ಲದ ಖರ್ಚುಗಳನ್ನು ಪೂರ್ತಿ ನಿಯಂತ್ರಿಸಿ, ಇಲ್ಲವಾದಲ್ಲಿ ಅದಕ್ಕೆ ಮಿತಿ ಹೇರಿ. ಹೀಗೆ ಮಾಡಿದಾಗ ನಿಮ್ಮ ಬಳಿ ಹಣದ ಲಭ್ಯತೆ ಕೊಂಚ ಹೆಚ್ಚುತ್ತದೆ. ಮತ್ತಷ್ಟು ತಿಂಗಳ ಇಎಂಐ ಕಟ್ಟಲು ಸಾಧ್ಯವಾಗುತ್ತದೆ.

ಬ್ಯಾಂಕ್ ಅನ್ನು ಸಂಪರ್ಕಿಸಿ: ಉದ್ಯೋಗ ನಷ್ಟವಾದಂತಹ ಸಂದರ್ಭದಲ್ಲಿ ಸಾಲ ಪಡೆದಿರುವ ಬ್ಯಾಂಕ್ ಅನ್ನು ಕೂಡಲೇ ಸಂಪರ್ಕಿಸಿ ನಿಮ್ಮ ಪರಿಸ್ಥಿತಿಯನ್ನು ವಿವರಿಸಿ. ಸಾಲದ ಇಎಂಐ ಮರುಪಾವತಿಗೆ ತಾತ್ಕಾಲಿಕ ವಿನಾಯಿತಿ (ಹೋಮ್ ಲೋನ್ ಮೊರಟೋರಿಯಂ) ಕೋರಿ. ಇದನ್ನು ಪಡೆದಾಗ ಒಂದಿಷ್ಟು ಕಾಲ ಸಾಲದ ಕಂತುಗಳನ್ನು ಕಟ್ಟಬೇಕಾಗಿ ಬರುವುದಿಲ್ಲ, ಆದರೆ ನಂತರದ ದಿನಗಳಲ್ಲಿ ಬಡ್ಡಿ ಒಳಗೊಂಡು ಸಾಲ ತೀರಿಸಬೇಕಾಗುತ್ತದೆ. ಇದನ್ನು ಕೊಡಲು ಬ್ಯಾಂಕ್ ಒಪ್ಪದಿದ್ದರೆ ಸಾಲದ ಮರು ಹೊಂದಾಣಿಕೆಗೆ (ಲೋನ್ ರೀಸ್ಟ್ರಕ್ಚರಿಂಗ್) ಮನವಿ ಮಾಡಿ. ಸಾಲದ ಮರು ಹೊಂದಾಣಿಕೆಯಲ್ಲಿ ಸಾಲದ ಅವಧಿಯನ್ನು ಹೆಚ್ಚಿಸಿ ಇಎಂಐ ಮೊತ್ತ ತಗ್ಗಿಸುವ ಅವಕಾಶವಿರುತ್ತದೆ. ಕೆಲವು ಕಾಲ ಸಾಲದ ಬಡ್ಡಿಯ ಮೊತ್ತವನ್ನು ಮಾತ್ರ ಪಾವತಿಸಬಹುದೇ ಎಂದು ಬ್ಯಾಂಕ್ ಅಧಿಕಾರಗಳಲ್ಲಿ ಕೇಳಿನೋಡಿ. ಸಾಮಾನ್ಯವಾಗಿ, ಉತ್ತಮ ರೀತಿಯಲ್ಲಿ ಮರುಪಾವತಿ ಮಾಡುವ ಗ್ರಾಹಕರಿಗೆ ಬ್ಯಾಂಕ್‌ಗಳು ನೆರವಾಗುತ್ತವೆ.

ಪರ್ಯಾಯ ಆದಾಯ ಹುಡುಕಿ: ಉದ್ಯೋಗ ನಷ್ಟವಾದಾಗ ಮತ್ತೊಂದು ಪೂರ್ಣಾವಧಿ ಉದ್ಯೋಗ ಸಿಗುವವರೆಗೆ ಅರೆಕಾಲಿಕ ಉದ್ಯೋಗ, ಫ್ರೀಲ್ಯಾನ್ಸ್, ಕನ್ಸಲ್ಟಿಂಗ್‌ನಂತಹ ಆಯ್ಕೆಗಳನ್ನು ಪರಿಗಣಿಸಲು ಮುಂದಾಗಿ.

ಬ್ಯಾಂಕ್ ಜೊತೆ ಮುಚ್ಚುಮರೆ ಬೇಡ: ಸಾಲ ಕೊಟ್ಟಿರುವ ಬ್ಯಾಂಕ್ ಜೊತೆ ಸಮಸ್ಯೆ ಹೇಳಿಕೊಳ್ಳದೆ, ಚರ್ಚೆ ಮಾಡದೆ ಅವರಿಂದ ತಪ್ಪಿಸಿಕೊಳ್ಳಲು ಹೋಗಬೇಡಿ. ಸಾಲದ ಕಂತನ್ನು ಕೆಲ ಕಾಲ ಕಟ್ಟದಿದ್ದಾಗ ಅದು ವಸೂಲಾಗದ ಸಾಲ (ಎನ್‌ಪಿಎ) ವ್ಯಾಪ್ತಿಗೆ ಬರುತ್ತದೆ. ಈ ರೀತಿ ಎನ್‌ಪಿಎ ಮಾಡಿಕೊಂಡರೆ ಕ್ರೆಡಿಟ್ ಸ್ಕೋರ್‌ಗೆ ಹೊಡೆತ ಬೀಳುವ ಜೊತೆಗೆ ಭವಿಷ್ಯದಲ್ಲಿ ಸಾಲ ಪಡೆದುಕೊಳ್ಳುವುದು ಸಾಧ್ಯವಾಗುವುದಿಲ್ಲ.

ಇಪಿಎಫ್, ಪಿಪಿಎಫ್ ಹಣ ತೆಗೆಯಿರಿ: ಸಾಲದ ಕಂತು ಪಾವತಿಸುವ ಸಲುವಾಗಿ ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಹಣ ನಗದೀಕರಣ ಮಾಡಿಕೊಳ್ಳುವುದು ಸರಿಯಾದ ಕ್ರಮವಲ್ಲ. ಆದರೆ ತೀರಾ ಅನಿವಾರ್ಯ ಎಂದಾಗ ಸಾಲದ ಮಾಸಿಕ ಕಂತುಗಳನ್ನು ಕಟ್ಟಲು ಹಣ ಪಡೆದುಕೊಂಡರೆ ತಪ್ಪಿಲ್ಲ. ಇಪಿಎಫ್‌ನಲ್ಲಿ ಸಾಲ ಮರುಪಾವತಿಯ ಕಾರಣ ನೀಡಿ ಒಂದಷ್ಟು ಹಣವನ್ನು ಪಡೆದುಕೊಳ್ಳಲು ಸಾಧ್ಯವಿದೆ. ಇನ್ನು ಪಿಪಿಎಫ್‌ನಲ್ಲಿ ಹೂಡಿಕೆ ಮಾಡಿದ್ದರೆ 5 ವರ್ಷಗಳ ನಂತರ ಶೇ 50ರಷ್ಟು ಹೂಡಿಕೆ ಮೊತ್ತವನ್ನು ಹಿಂಪಡೆದುಕೊಳ್ಳಬಹುದು. ಇನ್ನು ಮ್ಯೂಚುವಲ್ ಫಂಡ್, ಷೇರು ಹೂಡಿಕೆ ಮಾಡಿದ್ದು ಅದರಲ್ಲಿ ಒಂದಷ್ಟು ಲಾಭವಿದ್ದರೆ ಅದನ್ನು ನಗದೀಕರಣ ಮಾಡಿಕೊಂಡು ಸಾಲದ ಇಎಂಐ ಪಾವತಿಗೆ ಬಳಸಿಕೊಳ್ಳುವ ಬಗ್ಗೆ ಚಿಂತಿಸಿ.

EDUCATION CORNER

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ (PTT)
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ವಿ–ಗಾರ್ಡ್: ವಾಟರ್ ಹೀಟರ್‌ಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಉಪಕರಣಗಳ ತಯಾರಿಕಾ ಸಂಸ್ಥೆ ವಿ-ಗಾರ್ಡ್ ಇಂಡಸ್ಟ್ರೀಸ್ ಲಿಮಿಟೆಡ್, 'ಲಕ್ಸ್ ಕ್ಯೂಬ್' ಸರಣಿಯ ವಾಟರ್ ಹೀಟರ್‌ಗಳನ್ನು ಬಿಡುಗಡೆ ಮಾಡಿದೆ.

ಹೊಸ ಸರಣಿಯು ಲಕ್ಸ್ ಕ್ಯೂಬ್, ಲಕ್ಸ್ ಕ್ಯೂಬ್ ಡಿಜಿ ಮತ್ತು ಲಕ್ಸ್ ಕ್ಯೂಬ್ ಸ್ಮಾರ್ಟ್ ಎನ್ನುವ ಮೂರು ಮಾದರಿಗಳನ್ನು ಹೊಂದಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಐಒಟಿ ಸ್ಮಾರ್ಟ್ ಕನೆಕ್ಟಿವಿಟಿಯೊಂದಿಗೆ, ಬಳಕೆದಾರರು ಐಒಎಸ್ ಮತ್ತು ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಲಭ್ಯವಿರುವ ವಿ-ಗಾರ್ಡ್ ಸ್ಮಾರ್ಟ್ ಆ್ಯಪ್ ಮೂಲಕ ಈ ಸಾಧನವನ್ನು ದೂರದಿಂದಲೇ ನಿಯಂತ್ರಿಸಬಹುದು. ಇದು ಅಮೆಜಾನ್‌ನ ಅಲೆಕ್ಸಾ ಮತ್ತು ಗೂಗಲ್ ಹೋಮ್‌ನೊಂದಿಗೆ ಸರಾಗವಾಗಿ ಕೆಲಸ ಮಾಡುತ್ತದೆ. ತಾಪಮಾನ ತಿಳಿಸಲು ಲೈಟಿಂಗ್ ವ್ಯವಸ್ಥೆ ಹೊಂದಿದ್ದು, ಸುರಕ್ಷತೆಗಾಗಿ ಚೈಲ್ಡ್ ಲಾಕ್ ಸೌಲಭ್ಯ ಇದೆ. ಇದು ತುಕ್ಕು ನಿರೋಧಕವಾಗಿದ್ದು, ಕೈಗೆಟುಕುವ ಬೆಲೆಗೆ ಲಭ್ಯವಿದೆ ಎಂದು ತಿಳಿಸಿದೆ.

ನೀರು ಕಾಯಿಸುವ ಸಾಧನಕ್ಕೆ 4 ವರ್ಷ ವಾರಂಟಿ ಮತ್ತು ಒಳಗಿನ ಟ್ಯಾಂಕ್‌ಗೆ 10 ವರ್ಷಗಳ ವಾರಂಟಿ ಇದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹620
	12 ಕ್ಕೆ	₹80
ಮೈಸೂರು:	100 ಕ್ಕೆ	₹625

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹285-541
ದ್ವಿತಳಿ (ಬಿ.ವಿ)	₹245-670

ಅನಂತ್ ಅಂಬಾನಿಗೆ ₹20 ಕೋಟಿ ವೇತನ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಅನಂತ್ ಅಂಬಾನಿ ಅವರು ವಾರ್ಷಿಕ ₹10 ಕೋಟಿಯಿಂದ ₹20 ಕೋಟಿವರೆಗೆ ವೇತನ ಪಡೆಯಲಿದ್ದಾರೆ.

ಉದ್ಯಮಿ ಮಕೇಶ್ ಅಂಬಾನಿ ಅವರ ಮಕ್ಕಳಾದ ಆಕಾಶ್, ಇಷಾ ಮತ್ತು ಅನಂತ್ ಕಾರ್ಯನಿರ್ವಾಹಕೇತರ ನಿರ್ದೇಶಕರಾಗಿ 2023ರಲ್ಲಿ ಕಂಪನಿಗೆ ನೇಮಕಗೊಂಡಿದ್ದರು. ಅನಂತ್, ಈ ವರ್ಷದ ಏಪ್ರಿಲ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯ-ನಿರ್ವಾಹಕ ನಿರ್ದೇಶಕರಾಗಿ ನೇಮಕ ಆಗಿದ್ದಾರೆ.

ಅನಂತ್ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರಿಂದ ವೇತನ ಮತ್ತು ಇತರೆ ಸೌಲಭ್ಯಗಳನ್ನು ಪಡೆಯಲಿದ್ದಾರೆ. ಇದು ₹10 ಕೋಟಿಯಿಂದ ₹20 ಕೋಟಿವರೆಗೆ ಇರಲಿದೆ. ಇದಕ್ಕೆ ಕಂಪನಿಯ ಷೇರುದಾರರ ಅನುಮೋದನೆ ಬೇಕಿದೆ ಎಂದು ಕಂಪನಿಯು ಷೇರುಪೇಟೆಗೆ ಭಾನುವಾರ ತಿಳಿಸಿದೆ.

ಆಕಾಶ್ ಅವರು ಜಿಯೊ ಇನ್ಫೊಕಾಮ್‌ನ ಅಧ್ಯಕ್ಷರಾಗಿದ್ದಾರೆ. ಇಷಾ ಅವರು ಕಂಪನಿಯ ರಿಟೇಲ್, ಇ–ಕಾಮರ್ಸ್ ಮತ್ತು ಐಷಾರಾಮಿ ಉತ್ಪನ್ನಗಳ ವಹಿವಾಟನ್ನು ನೋಡಿಕೊಳ್ಳುತ್ತಿದ್ದಾರೆ.

ಖರ್ಜೂರ

ಪಿಟಿಐ ಚಿತ್ರ

ರಾಜಸ್ಥಾನದ ಬಿಕನೇರ್‌ನಲ್ಲಿ ಭಾನುವಾರ ಮಾರಾಟಕ್ಕೆ ಇರಿಸಿದ್ದ ಖರ್ಜೂರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ: ಸರ್ಕಾರಿ ಅಧೀನದಲ್ಲಿನ ಆರೋಗ್ಯ ಇಲಾಖೆಗೆ ಗುತ್ತಿಗೆದಾರ ಏಜೆನ್ಸಿಯ ಮುಖಾಂತರ ಸಂಪೂರ್ಣ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಈ ಕೆಳಕಂಡ ಹುದ್ದೆಗಳಿಗೆ M.Com/ MFA/ MBA,B.Com/ BBM(Finance) & AnyDigree ಹೊಂದಿರುವ ಹಾಗೂ 2ರಿಂದ 10 ವರ್ಷಗಳ ಅನುಭವವುಳ್ಳ ಎಸ್‌ಸಿ/ಎಸ್‌ಟಿ ಹಾಗೂ ಸಾಮಾನ್ಯ(GM) ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. (Finance Manager, Claims Manager, Analytical Assistant, EmploymentAssistant, Junior Assistant, IT Executive, Data Entry Operator, CallCenter Executives, Assistants-MRC, Weavers, BoilerAttendant Grade-1, System Analyst), ಸಂಪರ್ಕಿಸಿ: ವ್ಯವಸ್ಥಾಪಕರು, ಮೊಬೈಲ್: 7090798566, 9980061341 ಫೋನ್ ನಂ.: 08023183399, 23185599 ಇ-ಮೇಲ್: cv.ksf9@gmail.com

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

ಇತರೆ

Medical

ಉಚಿತ ಶಿಬಿರ 7 ದಿನಗಳು ಮಾತ್ರ. ದಿನಾಂಕ 28-06-2025 ರಿಂದ 04-07-2025 ವರೆಗೆ. ಸಮಯ ಮಧ್ಯಾಹ್ನ 2:00 ರಿಂದ ಸಂಜೆ 4 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ACU ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಸನ್ಮಾನ್ ಹೋಟೆಲ್ ಹತ್ತಿರ ಶೇಷಾದ್ರಿಪುರಂ, ಬೆಂಗಳೂರು. ಮೊಬೈಲ್: 7349494852

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿಮಾನ ದುರಂತ: ಕೊನೇ ವ್ಯಕ್ತಿಯ ಅಂತ್ಯಕ್ರಿಯೆ

ಭುಜ್ (ಪಿಟಿಐ): ಅಹಮದಾಬಾದ್‌ನ ವಿಮಾನ ದುರಂತದಲ್ಲಿ ಮೃತಪಟ್ಟ ಅನಿಲ್ ಖಿಮಾನಿ (35) ಅವರ ಅಂತ್ಯಕ್ರಿಯೆಯನ್ನು ಗುಜರಾತಿನ ಕಚ್ ಜಿಲ್ಲೆಯಲ್ಲಿ ನೆರವೇರಿಸಲಾಯಿತು. ಇದರೊಂದಿಗೆ ವಿಮಾನ ಅಪಘಾತದಲ್ಲಿ ಮೃತಪಟ್ಟ ಎಲ್ಲರ ಅಂತ್ಯಕ್ರಿಯೆ ನಡೆದಂತಾಗಿದೆ.

ವಿಮಾನ ಅಪಘಾತವಾದ ಎರಡು ವಾರಗಳ ಬಳಿಕ ಅನಿಲ್ ಅವರ ದೇಹವನ್ನು ಡಿಎನ್‌ಎ ಪರೀಕ್ಷೆಗಳ ಮೂಲಕ ಗುರುತಿಸಿ, ಅವರ ಕುಟುಂಬಕ್ಕೆ ಶುಕ್ರವಾರ ಸಂಜೆ ಹಸ್ತಾಂತರಿಸಲಾಗಿತ್ತು.

ಮೊದಲಿಗೆ ತಂದೆ, ಆ ಬಳಿಕ ತಾಯಿಯ ಡಿಎನ್‌ಎ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ ಬಳಿಕ ಅವರ ಪುತ್ರನ ದೇಹವನ್ನು ದೃಢಪಡಿಸಲಾಯಿತು.

ಜೂನ್ 12ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ತೆರಳಲು ಏರ್ ಇಂಡಿಯಾ ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಮೇಘಾನಿನಗರದ ವೈದ್ಯಕೀಯ ಕಾಲೇಜಿನ ಸಂಕೀರ್ಣದಲ್ಲಿದ್ದ ಕಟ್ಟಡಕ್ಕೆ ಅಪ್ಪಳಿಸಿತ್ತು. ವಿಮಾನ ದಲ್ಲಿದ್ದ 241 ಪ್ರಯಾಣಿಕರು, ಸಿಬ್ಬಂದಿ ಹಾಗೂ ಘಟನಾ ಸ್ಥಳದಲ್ಲಿದ್ದ 19 ಮಂದಿ ಮೃತಪಟ್ಟಿದ್ದರು. ಪ್ರಯಾಣಿಕರೊಬ್ಬರು ಅಪಾಯದಿಂದ ಪಾರಾಗಿದ್ದರು.

ಸಿ.ಎಂ ಹೆಸರಲ್ಲಿ ವಂಚನೆಗೆ ಯತ್ನ: ಸೆರೆ

ಗ್ಯಾಂಗ್ಟಕ್ (ಪಿಟಿಐ): ಒಡಿಶಾ ಮುಖ್ಯಮಂತ್ರಿ ಹೆಸರಿನಲ್ಲಿ ಸಿಕ್ಕಿಂನ 'ಸ್ಟೇಟ್ ಕೋ–ಆಪರೇಟಿವ್ ಸಪ್ಲೈ ಆ್ಯಂಡ್ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್' (ಎಸ್‌ಐಎಂಎಫ್‌ಇಡಿ) ಮುಖ್ಯಸ್ಥರಿಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳ ನಿವಾಸಿ ಅಭಿಜಿತ್ ಮೋಂಡಲ್‌ನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಸ್ರೇಲ್–ಹಮಾಸ್ ಕದನ ವಿರಾಮ: ಟ್ರಂಪ್ ಆಶಾವಾದ

ಟೆಲ್ ಅವೀವ್ (ಎಪಿ): ಗಾಜಾ ಪಟ್ಟಿಯಲ್ಲಿ 20 ತಿಂಗಳಿಂದ ಮುಂದುವರಿದಿರುವ ಸಂಘರ್ಷ ಕೊನೆಗೊಂಡು, ಇಸ್ರೇಲ್–ಹಮಾಸ್ ನಡುವೆ ಹೊಸ ಕದನ ವಿರಾಮ ಒಪ್ಪಂದ ಏರ್ಪಡುವ ಆಶಾವಾದವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಕ್ತಪಡಿಸಿದ್ದಾರೆ.

'ಗಾಜಾದಲ್ಲಿ ಒಪ್ಪಂದ ಮಾಡಿಕೊಳ್ಳಿ; ಒತ್ತೆಯಾಳುಗಳನ್ನು ಮರಳಿ ಪಡೆಯಿರಿ' ಎಂದು ಟ್ರಂಪ್ ಭಾನುವಾರ ತಮ್ಮ ಸಾಮಾಜಿಕ ಜಾಲತಾಣ 'ಟ್ರುತ್ ಸೋಷಿಯಲ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇನ್ನೊಂದು ವಾರದಲ್ಲಿ ಗಾಜಾದಲ್ಲಿ ಕದನ ವಿರಾಮ ಒಪ್ಪಂದ ಆಗಲಿದೆ. ಗಾಜಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಮೆರಿಕ ಕೆಲಸ ಮಾಡುತ್ತಿದೆ' ಎಂದು ಟ್ರಂಪ್ ಹೇಳಿದ್ದರು. ಟ್ರಂಪ್ ಹೇಳಿಕೆ ಹೊರಬಿದ್ದ ಬೆನ್ನಲ್ಲೇ, ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ದಾಳಿ ಮುಂದುವರಿದಿತ್ತು.

'ಇಸ್ರೇಲ್ ಸಚಿವ ರಾನ್ ಡೆರ್ಮರ್ ಮುಂದಿನ ವಾರ ವಾಷಿಂಗ್ಟನ್‌ಗೆ ತೆರಳಲಿದ್ದು, ಇಸ್ರೇಲ್- ಹಮಾಸ್ ಕದನ ವಿರಾಮ ಹಾಗೂ ಇರಾನ್ ಜತೆಗಿನ ಯುದ್ಧ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ವಿಚಾರಣೆಯ ಬಗ್ಗೆಯೂ 'ಟ್ರುತ್ ಸೋಷಿಯಲ್' ಪೋಸ್ಟ್‌ನಲ್ಲಿ ಟ್ರಂಪ್ ಪ್ರಸ್ತಾಪಿಸಿದ್ದಾರೆ. 'ಇದು ರಾಜಕೀಯ ಭೇಟೆ. ನಾನೂ ಇಂಥದ್ದೇ ಪರಿಸ್ಥಿತಿಯನ್ನು ಎದುರಿಸಿದ್ದೇನೆ' ಎಂದಿದ್ದಾರೆ.

ಸಾಮೂಹಿಕ ಸ್ಥಳಾಂತರ: ಹಲವು ಸುತ್ತಿನ ದಾಳಿ ನಡೆಯುತ್ತಿದ್ದು, ಉತ್ತರ ಗಾಜಾ ಪಟ್ಟಿಯಿಂದ ಪ್ಯಾಲಿಸ್ಟೀನಿಯರ ಸಾಮೂಹಿಕ ಸ್ಥಳಾಂತರಕ್ಕೆ ಇಸ್ರೇಲ್ ಸೇನೆ ಆದೇಶಿಸಿದೆ.

ಸಂಕ್ಷಿಪ್ತ ಸುದ್ದಿ

2 ಬಸ್ ಡಿಕ್ಕಿ: 37 ಮಂದಿ ಸಾವು

ದಾರ್ ಎಸ್ ಸಲಾಮ್ (ತಾಂಜಾನಿಯಾ) (ಎಪಿ): ಉತ್ತರ ತಾಂಜಾನಿಯಾದಲ್ಲಿ ಎರಡು ಬಸ್‌ಗಳು ಡಿಕ್ಕಿಯಾಗಿ ಬೆಂಕಿ ಹೊತ್ತಿಕೊಂಡು ಕನಿಷ್ಠ 37 ಮಂದಿ ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಶನಿವಾರ ಸಂಜೆ ಕಿಲಿಮಂಜಾರೊ ಪ್ರದೇಶದ ಮೋಶಿ–ಟಂಗಾ ಹೆದ್ದಾರಿಯ ಸಬಸಾಬ ಪ್ರದೇಶದಲ್ಲಿ ಈ ಅವಘಡ ಸಂಭವಿಸಿದೆ. ಘಟನೆಯಲ್ಲಿ ಮೃತಪಟ್ಟವರ ಗುರುತು ಇನ್ನೂ ಪತ್ತೆಯಾಗಿಲ್ಲ.

ಅಫ್ಗನ್: ತಾತ್ಕಾಲಿಕವಾಗಿ ಗಡಿ ಮುಚ್ಚಿದ ಪಾಕ್

ಪೆಶಾವರ (ಪಿಟಿಐ): ಭದ್ರತೆಗೆ ಬೆದರಿಕೆಯ ಕಾರಣದಿಂದ ಅಫ್ಘಾನಿಸ್ತಾನದೊಂದಿಗಿನ ಪ್ರಮುಖ ಗಡಿಯನ್ನು ಮುಂದಿನ ಸೂಚನೆವರೆಗೆ ಮುಚ್ಚಲಾಗಿದೆ ಎಂದು ಪಾಕಿಸ್ತಾನ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಖೈಬರ್ ಪಂಖ್ತುಖ್ವಾ ಪ್ರಾಂತ್ಯದ ಉತ್ತರ ವಜೀರಿಸ್ತಾನ ಜಿಲ್ಲೆಯ ಗುಲಾಮ್ ಖಾನ್ ಗಡಿಯಲ್ಲಿ ಶನಿವಾರ ಆತ್ಮಾಹುತಿ ಬಾಂಬ್ ದಾಳಿ ನಡೆದಿತ್ತು. ಇದರ ಬೆನ್ನಲ್ಲೇ, ಅಫ್ಘಾನಿಸ್ತಾನಕ್ಕೆ ಹೊಂದಿಕೊಂಡಿರುವ ಗಡಿಯನ್ನು ಮುಚ್ಚಲಾಗಿದೆ ಎಂದು ಭದ್ರತಾ ಪಡೆಗಳ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 13 ಜನ ಭದ್ರತಾ ಸಿಬ್ಬಂದಿ ಮೃತಪಟ್ಟು, ಇತರ ಮೂವರು ಗಾಯಗೊಂಡಿದ್ದರು.

ರಷ್ಯಾದಿಂದ ಭಾರಿ ವಾಯು ದಾಳಿ

ಕೀವ್ (ಎಪಿ): ರಷ್ಯಾ ಸೇನೆಯು ಶನಿವಾರ ರಾತ್ರಿಯಿಡೀ ಭಾರಿ ಪ್ರಮಾಣದ ವಾಯು ದಾಳಿ ನಡೆಸಿದೆ ಎಂದು ಉಕ್ರೇನ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಉಕ್ರೇನ್‌ನ ವಿವಿಧ ಪ್ರದೇಶಗಳನ್ನು ಗುರಿಯಾಗಿಸಿ 477 ಡ್ರೋನ್‌ಗಳು ಮತ್ತು 60 ಕ್ಷಿಪಣಿಗಳನ್ನು ಹಾರಿಸಲಾಗಿದೆ. ಅವುಗಳಲ್ಲಿ 249 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ಉಕ್ರೇನ್‌ನ ವಾಯುಪಡೆ ಹೇಳಿದೆ.

'ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧದಲ್ಲಿ ರಷ್ಯಾ ನಡೆಸಿದ ಅತಿದೊಡ್ಡ ವಾಯುದಾಳಿ ಇದಾಗಿದೆ' ಎಂದು ಉಕ್ರೇನ್ ವಾಯುಪಡೆಯ ಸಂವಹನ ವಿಭಾಗದ ಮುಖ್ಯಸ್ಥ ಯೂರಿ ಇನಾತ್ ತಿಳಿಸಿದ್ದಾರೆ.

'ಎವಿನ್ ಕಾರಾಗೃಹ 71 ಜನ ಸಾವು'

ದುಬೈ (ಎಪಿ): 'ಟೆಹರಾನ್‌ನಲ್ಲಿರುವ ಎವಿನ್ ಕಾರಾಗೃಹದ ಮೇಲೆ ಜೂನ್ 23ರಂದು ಇಸ್ರೇಲ್ ನಡೆಸಿದ್ದ ದಾಳಿಯಲ್ಲಿ ಸುಮಾರು 71 ಮಂದಿ ಮೃತಪಟ್ಟಿದ್ದರು' ಎಂದು ಇರಾನ್‌ನ ನ್ಯಾಯಾಂಗ ಇಲಾಖೆ ಭಾನುವಾರ ಮಾಹಿತಿ ನೀಡಿದೆ. 'ಕಾರಾಗೃಹ ಸಿಬ್ಬಂದಿ, ಸೈನಿಕರು, ಕೈದಿಗಳು, ಕಾರಾ ಗೃಹಕ್ಕೆ ತಮ್ಮವರ ಭೇಟಿಗಾಗಿ ಬಂದಿದ್ದ ಕುಟುಂಬ ಸದಸ್ಯರು ದಾಳಿಯಲ್ಲಿ ಮೃತಪಟ್ಟಿದ್ದಾರೆ' ಎಂದು ನ್ಯಾಯಾಂಗ ಇಲಾಖೆಯ ವಕ್ತಾರ ಅಸ್ಗರ್ ಜಹಾಂಗೀರ್ ಹೇಳಿದರು.

ಶಾಸಕರ ಜೊತೆ ಸುರ್ಜೇವಾಲಾ ಚರ್ಚೆ ಇಂದಿನಿಂದ

ಒಂದನೇ ಪುಟದಿಂದ...

ಬಿ.ಆರ್ . ಪಾಟೀಲ ಧ್ವನಿ ಎತ್ತಿದ ಬೆನ್ನಲ್ಲೇ ಸರ್ಕಾರದ ವಿರುದ್ಧ ರಾಜು ಕಾಗೆ ಸಿಡಿದೆದ್ದರು. ಅಲ್ಲದೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಬೆದರಿಕೆಯನ್ನೂ ಒಡ್ಡಿದ್ದರು. ಈ ಇಬ್ಬರ ಬಹಿರಂಗ ಹೇಳಿಕೆಗಳನ್ನು ಅಸ್ತ್ರವಾಗಿ ಬಳಸಿಕೊಂಡ ಬಿಜೆಪಿ ಮತ್ತು ಜೆಡಿಎಸ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ರಾಜೀನಾಮೆಗೆ ಆಗ್ರಹಿಸಿದ್ದವು.

ಪಕ್ಷದ ವರಿಷ್ಠರ ಸೂಚನೆಯಂತೆ ಬಿ.ಆರ್. ಪಾಟೀಲ ಮತ್ತು ರಾಜು ಕಾಗೆ ಜೊತೆ ಮುಖ್ಯಮಂತ್ರಿ ಚರ್ಚೆ ನಡೆಸಿದ್ದಾರೆ. ಅವರ ಸಮಸ್ಯೆಗಳನ್ನು ಬಗೆಹರಿಸುವ ಭರವಸೆಯನ್ನೂ ನೀಡಿದ್ದಾರೆ. ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಯಾರೊಬ್ಬರೂ ಸರ್ಕಾರದ ವಿರುದ್ಧ ಹೇಳಿಕೆ ನೀಡದಂತೆ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಸಿದ್ದರಾಮಯ್ಯ ಅವರಿಗೆ ಪಕ್ಷದ ವರಿಷ್ಠರು ಸೂಚಿಸಿದ್ದರು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಜಿ.ಸಿ.ಸಿದ್ದಯ್ಯ
ನಿಧನ: 13.6.2000

ಟಿ. ಲಕ್ಷ್ಮೀನರಸಮ್ಮ
ನಿಧನ: 30.6.2013

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ,
ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಆಶಿಸುವ
ನಿಮ್ಮ ಕುಟುಂಬವರ್ಗ, ನೆಲಮಂಗಲ

88ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಬಾನು ಮುಷ್ತಾಕ್

ಒಂದನೇ ಪುಟದಿಂದ...

'ಸಮ್ಮೇಳನದ ಅಧ್ಯಕ್ಷತೆಗೆ ಬಾನು ಮುಷ್ತಾಕ್ ಅವರ ಹೆಸರನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. 56 ಸದಸ್ಯ ಬಲದ ಸಮಿತಿಯಲ್ಲಿ ಹಾಜರಿದ್ದ 44 ಮಂದಿ ಬಾನು ಮುಷ್ತಾಕ್ ಹೆಸರಿಗೆ ಸರ್ವಾನುಮತದ ಸಮ್ಮತಿ ಸೂಚಿಸಿದರು. ಇವರನ್ನು ಹೊರತುಪಡಿಸಿದರೆ, ಕಸಾಪದ ಧಾರವಾಡ ಘಟಕದ ಅಧ್ಯಕ್ಷರು ಮಾಲತಿ ಪಟ್ಟಣಶೆಟ್ಟಿ ಅವರ ಹೆಸರನ್ನೂ, ಬೆಂಗಳೂರು ನಗರ ಘಟಕದ ಅಧ್ಯಕ್ಷರು ವೀಣಾ ಶಾಂತೇಶ್ವರ ಅವರ ಹೆಸರನ್ನೂ ಪ್ರಸ್ತಾಪಿಸಿದರು. ಆದರೆ ಅಂತಿಮವಾಗಿ ಬಾನು ಮುಷ್ತಾಕ್ ಹೆಸರನ್ನೇ ಆಯ್ಕೆ ಮಾಡಲಾಯಿತು' ಎಂದರು.

'ಬಾನು ಮುಷ್ತಾಕ್ ಅವರು ನಮ್ಮ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾರೆ. ಕನ್ನಡದ ಕೆಲಸ ನನ್ನ ಮೊದಲ ಕರ್ತವ್ಯ ಎಂದು ನನಗೆ ಸಂದೇಶ ಕಳುಹಿಸಿದ್ದಾರೆ' ಎಂದು ಜೋಶಿ ಸ್ಪಷ್ಟಪಡಿಸಿದರು.

ಈವರೆಗೆ ಸಮ್ಮೇಳನ ನಡೆಯುವ ಒಂದೆರಡು ತಿಂಗಳ ಮೊದಲಷ್ಟೇ ಸರ್ವಾಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಆರು ತಿಂಗಳಿಗೆ ಮೊದಲೇ ಆಯ್ಕೆ ಮಾಡಲಾಗಿದೆ. ಅಧ್ಯಕ್ಷರ ಆಯ್ಕೆಗೂ ಮೊದಲೇ ಸಮ್ಮೇಳನದ ಸ್ವಾಗತ ಸಮಿತಿ, ಉಪ ಸಮಿತಿಗಳು ರಚನೆಯಾಗಿರುತ್ತಿದ್ದವು. ಜತೆಗೇ, ಸ್ಥಳ, ದಿನ ನಿಗದಿಯಾಗುತ್ತಿತ್ತು. ಆದರೆ, ಈ ಬಾರಿ ಇವು ಯಾವುವೂ ಆಗಿಲ್ಲ. ಪ್ರಮುಖವಾಗಿ, ಪರಿಷತ್ತಿನಿಂದ ಅಧಿಕೃತವಾಗಿ ಘೋಷಣೆಯಾಗುವವರೆಗೆ ಸಮ್ಮೇಳನದ ಅಧ್ಯಕ್ಷರ ಹೆಸರು ಗೋಪ್ಯವಾ ಗಿರುತ್ತಿತ್ತು. ಈ ಸಲ ಅದಕ್ಕೂ ಚ್ಯುತಿಯಾಗಿದ್ದು, ಬಾನು ಮುಷ್ತಾಕ್ ಅವರೇ ಸರ್ವಾಧ್ಯಕ್ಷರು ಎಂಬುದು ವಾರದ ಮೊದಲೇ ಬಹಿರಂಗವಾಗಿತ್ತು.

ಸಮ್ಮೇಳನದ ಸ್ಥಳ, ದಿನಾಂಕ ನಿರ್ಧರಿಸಲು ಜುಲೈ 1ರಂದು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಭೆ ನಡೆಸಲಾಗುವುದು. ಬಳಿಕ ನಿರ್ಧಾರ ಪ್ರಕಟಿಸಲಿದ್ದೇವೆ

ಮಹೇಶ ಜೋಶಿ, ಅಧ್ಯಕ್ಷ, ಕಸಾಪ

'ಭಿನ್ನ ದನಿಗಳನ್ನು ಕೇಳಿಸಿಕೊಳ್ಳಬೇಕಿದೆ, ಸಮಯ ಕೊಡಿ'

ಒಂದನೇ ಪುಟದಿಂದ...

'ನನಗೆ ಕೆಲವು ಸ್ಪಷ್ಟನೆಯೂ ಬೇಕಾಗಿದೆ. ನನ್ನ ವೈಯಕ್ತಿಕ ನಿಲುವುಗಳನ್ನೂ ಆಧರಿಸಿ ತೀರ್ಮಾನ ಮಾಡಬೇಕಾಗಿದೆ. ಪರಿಷತ್ತಿನ ಕಾರ್ಯವೈಖರಿ ಬಗ್ಗೆ ಕೆಲವು ಭಿನ್ನ ಧ್ವನಿಗಳೂ ಇದ್ದು, ಅವುಗಳನ್ನೂ ಕೇಳಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಸಮಯ ತೆಗೆದುಕೊಂಡು ನಿರ್ಧರಿಸುತ್ತೇನೆ' ಎಂದು ಹೇಳಿದರು.

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬೇಕಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಹೆಚ್ಚು ಮಾತನಾಡದೇ ಸುದ್ದಿಗೋಷ್ಠಿಯಿಂದ ನಿರ್ಗಮಿಸಿದರು.

'ಕಾರ್ಯಕಾರಿ ಸಮಿತಿಯು ಕನ್ನಡ ಸಾಹಿತ್ಯ ಪರಿಷತ್‌ನ ಅತ್ಯುನ್ನತ ನಿರ್ಣಯ ನಿರ್ಧಾರಕ ಸಮಿತಿ. ಇಲ್ಲಿ ಚರ್ಚಿಸಿಯೇ ಹೆಸರು ಘೋಷಣೆ ಮಾಡಿದ್ದೇವೆ. ಹೆಸರು ಬಹಿರಂಗವಾಗಿ ಚರ್ಚೆಯಾಗಿರುವುದು ಗೊತ್ತಿಲ್ಲ. ಹೆಸರುಗಳು ಪ್ರಸ್ತಾಪವಾಗಿರಬಹುದು, ಚರ್ಚೆಯಾಗಿರಬಹುದು, ಮಾಧ್ಯ-ಮಗಳಲ್ಲಿ ಪ್ರಕಟವೂ ಆಗಿರಬಹುದು. ಆದರೆ, ನಮ್ಮ ಕಾರ್ಯಕಾರಿ ಸಮಿತಿಯೇ ಹೆಸರನ್ನು ಅಂತಿಮಗೊಳಿಸಿದೆ' ಎಂದು ವಿವಾದಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿದರು. ಜತೆಗೆ, ಈ ಎಲ್ಲ ಗೊಂದಲಗಳಿಗೆ ಪರಿಷತ್‌ನ ನಿಬಂಧನೆಗಳೇ ಕಾರಣ' ಎಂದು ಬೊಟ್ಟು ಮಾಡಿದ ಅವರು, ಅದನ್ನು ತಿದ್ದುಪಡಿ ಮಾಡುವುದಾಗಿ ಪುನರುಚ್ಚರಿಸಿದರು.

ದೀಪಾ ಭಾಸ್ತಿಗೆ ವಿಶೇಷ ಗೌರವ: 'ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದ ಮಾಡಿ, ಅವರ ಸಾಹಿತ್ಯವನ್ನು ಜಗತ್ತಿಗೆ ತಿಳಿಸಿದ ಅನುವಾದಕಿ ದೀಪಾ ಭಾಸ್ತಿ ಅವರನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಶೇಷವಾಗಿ ಗೌರವಿಸಲು ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಜೋಶಿ ತಿಳಿಸಿದರು.

ಮಹಿಳೆಗೆ ಐದನೇ ಬಾರಿಗೆ ಅವಕಾಶ

ಈ ವರೆಗೆ ನಡೆದಿರುವ 87 ಸಮ್ಮೇಳನಗಳಲ್ಲಿ ನಾಲ್ಕು ಬಾರಿ ಮಾತ್ರ ಮಹಿಳೆಯರಿಗೆ ಅವಕಾಶ ಸಿಕ್ಕಿದ್ದು ವಿವರ ಇಂತಿದೆ:

- 1974ರಲ್ಲಿ ಮಂಡ್ಯದಲ್ಲಿ ನಡೆದಿದ್ದ 48ನೇ ಸಾಹಿತ್ಯ ಸಮ್ಮೇಳನದಲ್ಲಿ ಜಯದೇವಿ ತಾಯಿ ಲಿಗಾಡೆ
- 2000 ಇಸವಿಯಲ್ಲಿ ಬಾಗಲಕೋಟೆಯಲ್ಲಿ ನಡೆದಿದ್ದ 68ನೇ ಸಮ್ಮೇಳನದಲ್ಲಿ ಶಾಂತಾದೇವಿ ಮಾಳವಾಡ
- 2003ರಲ್ಲಿ ಮೂಡುಬಿದಿರೆಯಲ್ಲಿ ನಡೆದಿದ್ದ 71ನೇ ಸಮ್ಮೇಳನದಲ್ಲಿ ಕಮಲಾ ಹಂಪನಾ
- 2010ರಲ್ಲಿ ಗದಗದಲ್ಲಿ ನಡೆದಿದ್ದ 76ನೇ ಸಮ್ಮೇಳನದಲ್ಲಿ ಗೀತಾ ನಾಗಭೂಷಣ

ಸಂಡೂರು ಸಭೆಗಾಗಿ ಡಿ.ಸಿ ಜತೆ ಚರ್ಚೆ

'ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಪುನಃ ಸಂಡೂರಿನಲ್ಲೇ ಮಾಡಬೇಕು. ಇದಕ್ಕೆ ಬಳ್ಳಾರಿ ಜಿಲ್ಲಾ ಘಟಕ ಪೂರಕ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಸಾಪ ಅಧ್ಯಕ್ಷ ಜೋಶಿ ಒತ್ತಾಯಿಸಿದರು ಎಂದು ಹೇಳಲಾಗಿದೆ. ಈ ಕುರಿತ ಪ್ರಶ್ನೆಗೂ ಜೋಶಿ ಮಾಧ್ಯಮದವರಿಗೆ ಉತ್ತರಿಸಲಿಲ್ಲ.

ಇದೇ ವಿಚಾರವಾಗಿ ಚರ್ಚಿಸಲು ಜೋಶಿ ಭಾನುವಾರ ಬೆಳಗ್ಗೆ ಬಳ್ಳಾರಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಭೇಟಿಯಾದರು. ಈ ವೇಳೆ ಸಂಡೂರಿನಲ್ಲೇ ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆಸಲು ಅನುಮತಿ ನೀಡಬೇಕು ಎಂದು ಕೋರಿದರು ಎಂದು ಗೊತ್ತಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ, ಸಹಕಾರ ಇಲಾಖೆ ಆದೇಶದ ಮೇರೆ ಸಭೆ ರದ್ದಾಗಿದೆ. ಸಮಸ್ಯೆಯನ್ನು ಅಲ್ಲಿಯೇ ಸರಿ ಮಾಡಿಕೊಳ್ಳಿ, ಆದರೆ ಸಾಹಿತ್ಯ ಸಮ್ಮೇಳನ ಆಯೋಜನೆಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದ್ದಾರೆ ಎನ್ನಲಾಗಿದೆ.

ಹಣಕಾಸು ಸಂಬಂಧಿತ ಕೋರ್ಸ್‌ಗಳನ್ನು ಮಾಡುತ್ತಿರುವ ಪ್ರತಿಭಾನ್ವಿತರಿಗೆ 'ರಾಮನ್ ಕಾಂತ್ ಮುಂಜಾಲ್ ಫೌಂಡೇಷನ್' ವಿದ್ಯಾರ್ಥಿವೇತನ ನೀಡಲಿದೆ. ವಾರ್ಷಿಕವಾಗಿ ಗರಿಷ್ಠ ₹ 5.5 ಲಕ್ಷದವರೆಗೆ ಧನಸಹಾಯ ಸಿಗಲಿದೆ. ಅರ್ಜಿ ಸಲ್ಲಿಕೆಗೆ ಕಡೇ ದಿನ: 31-07-2025
ಮಾಹಿತಿಗೆ: Short Url: www.b4s.in/praja/RMKSP5

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಬಹು ಆಯ್ಕೆ ಪ್ರಶ್ನೆಗಳು

1) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?

ಎ) ರಣಜಿತ್ ಸಿಂಗನು ಬಿ) ಮೂಲರಾಜ
ಸಿ) ಅನ್ವರುದ್ದೀನ ಡಿ) ಮೇಲಿನ ಯಾರೂ ಅಲ್ಲ

ಉತ್ತರ:–ಎ

2) ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

ಎ) 1800 ಬಿ) 1809
ಸಿ) 1706 ಡಿ) 1850

ಉತ್ತರ:–ಬಿ

3) ಪೇಶ್ವೆ ....ನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ

ಎ) ಎರಡನೇ ಬಾಜಿರಾಯ ಬಿ) ಮೂರನೇ ಬಾಜಿರಾಯ
ಸಿ) ಶಂಭಾಜಿ ಡಿ) ಯಾರೂ ಅಲ್ಲ

ಉತ್ತರ:– ಎ

4) ಸಹಾಯಕ ಸೈನ್ಯ ಪದ್ದತಿ ಕುರಿತ ಯಾವ ಹೇಳಿಕೆ ತಪ್ಪಾಗಿದೆ?

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ

ಉತ್ತರ ಸಂಕೇತ

ಎ) 1, 2. 3 ಮಾತ್ರ ಬಿ) 2, 3, 4 ಮಾತ್ರ
ಸಿ) 1 ಮತ್ತು 2 ಮಾತ್ರ ಡಿ) ಯಾವುದೂ ತಪ್ಪಾಗಿಲ್ಲ

ಉತ್ತರ:– ಡಿ

5) ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಯಾವುದು?

ಎ) ಹೈದರಾಬಾದ್ ಸಂಸ್ಥಾನ. ಬಿ) ಮೈಸೂರು
ಸಿ) ಝಾನ್ಸಿ ಡಿ) ಔಧ್

ಉತ್ತರ:– ಎ

6) ಕೆಳಗಿನ ಯಾರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಭಾರತದಲ್ಲಿ ಆರಂಭಿಸಿದನು?

ಎ) ವೆಲ್ಲೆಸ್ಲಿ ಬಿ) ಲಾರ್ಡ್ ಮಿಂಟೊ
ಸಿ) ಡಾಲ್‌ಹೌಸಿ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– ಸಿ

7) ಮರಾಠರಲ್ಲಿ ಅಪ್ಪಾಸಾಹೇಬ ಮತ್ತು .... ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.

ಎ) ಮಲ್ಹಾರರಾವ್ ಬಿ) ಮೂಲರಾಜ
ಸಿ) ಚಟ್ಟಾರ್ ಸಿಂಗ್ ಅಟ್ಟಾರಿವಾಲ
ಡಿ) ಮೇಲಿನ ಯಾರೂ ಅಲ್ಲ

ಉತ್ತರ:– ಎ

8) ಪೇಶ್ವೆಯು ಯಾವ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.

ಎ) ಬೆಸ್ಸಿನ್ ಒಪ್ಪಂದ ಬಿ) ಲಾಹೋರ್ ಒಪ್ಪಂದ
ಸಿ) ಚಂಢಿಗರ್ ಒಪ್ಪಂದ ಡಿ) ಮುಂಬೈ ಒಪ್ಪಂದ

ಉತ್ತರ:– ಎ

9) ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನಾದರೂ ಅವನನ್ನು ಯಾರು ಕೊಲೆ ಮಾಡಿದನು.?

ಎ) ರಘುನಾಥರಾವ್ ಬಿ) ಮಲ್ಹಾರ್ ರಾವ್
ಸಿ) 2ನೇ ಮಾಧವ್ ರಾವ್ ಡಿ) ಪ್ರತಾಪ್ ಸಿಂಹ

ಉತ್ತರ:– ಎ

10) ರಣಜಿತ್ ಸಿಂಗನು ಎಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು?

ಎ) ಲಾಹೋರ್ ಬಿ) ಚಂಡಿಗಢ
ಸಿ) ಕರಾಚಿ ಡಿ) ದೆಹಲಿ

ಉತ್ತರ:– ಎ

ಹಿಂದಿನ ಪ್ರಶ್ನೆ ಪತ್ರಿಕೆಯಿಂದ

1) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?
(ಮಾರ್ಚ್ 2025ರ ವಾರ್ಷಿಕ ಪರೀಕ್ಷೆ–1)

ಉತ್ತರ: ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಹೀಗಿವೆ:–

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

2) ಮೊದಲನೇ ಆಂಗ್ಲೋ ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

ಎ) ಬಸ್ಸೈನ್ ಒಪ್ಪಂದ ಬಿ) ಸಾಲ್ಬಾಯಿ ಒಪ್ಪಂದ
ಸಿ) ಅಲಹಾಬಾದ್ ಒಪ್ಪಂದ ಡಿ) ಲಾಹೋರ್ ಒಪ್ಪಂದ

ಉತ್ತರ:– ಬಿ **(2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)**

3) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?
(2020 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:– ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

4) ವೆಲೆಸ್ಲಿಯು ಸಹಾಯಕ ಸೈನ್ಯಪದ್ದತಿಯನ್ನು ಯಾಕೆ ಜಾರಿಗೆ ತಂದನು?
(2023 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:– ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಹಾಯಕ ಸೈನ್ಯಪದ್ದತಿಯನ್ನು ಜಾರಿಗೆ ತಂದನು.

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

DETERMINANTS

(..................Contd)

$$\Rightarrow \begin{bmatrix} x \\ y \\ z \end{bmatrix} = \begin{bmatrix} 1500 \\ 2000 \\ 1000 \end{bmatrix} \Rightarrow \begin{bmatrix} x \\ y \\ z \end{bmatrix} = \begin{bmatrix} 2000 \\ 1000 \\ 3000 \end{bmatrix}$$

$\Rightarrow x = 1500, y = 2000, z = 1000$

Hence, per day income of person who believe in honesty = Rs. 1,500

Per day income of person who believe in hard work = Rs. 2,000

Per day income of person who believe in unfair means = Rs. 1,000

II part:

(i) A person, who believe in hardwork has more per day income.

(ii) A person, who believe in hard work and honesty, are better for country.

3. Two schools A and B decided to award prizes to their students for their values:

Honesty (x), punctuality (y) & obedience (z). School A decided to award a total of Rs. 11,000 for these three values to 5, 4 and 3 students, respectively, while School B decided to award Rs. 10,700 for these three values to 4, 3 and 5 students, respectively. If all the 3 prizes together amount to Rs. 2,700 then,

(i) Represent the above situation by a matrix equation and form linear equations by using matrix multiplication.

(ii) Is it possible to solve the system of equations so obtained using matrices?

(iii) Which value can be preferred to be rewarded most and why?

Soln:- The given situation can be represented as follows -

$$\begin{bmatrix} 5 & 4 & 3 \\ 4 & 3 & 5 \\ 1 & 1 & 1 \end{bmatrix} \begin{bmatrix} x \\ y \\ z \end{bmatrix} = \begin{bmatrix} 11000 \\ 10700 \\ 2700 \end{bmatrix}$$

(or) $5x + 4y + 3z = 11000$
$4x + 3y + 5z = 10700$
$x + y + z = 2700$

(ii) Let $A = \begin{bmatrix} 5 & 4 & 3 \\ 4 & 3 & 5 \\ 1 & 1 & 1 \end{bmatrix}$

$\therefore |A| = 5(-2) - 4(-1) + 3(1)$

$= -10 + 4 + 3 = -3 \neq 0$; Hence A^{-1} exists

So, equations have a unique solution.

(iii) Any of the three values with proper reasoning can be preferred as correct.

[Eg: the value "punctuality" can be preferred for rewards, because a punctual student can study better.]

4. An amount of Rs. 600 crores is spent by the government in three schemes.

Scheme A - is for saving girl child from the cruel parents who don't want girl child and get aborted before her birth.

Scheme B - is for saving of newly wed girls from death due to dowry.

Scheme C - is planning for good health for senior citizen.

Now twice the amount spent on scheme B together with amount spent on scheme A is Rs 700 crores. And three times the amount spent on scheme A together with amount spent on scheme B and scheme C is Rs. 1200 crores. Find the amount spent on each scheme using matrices? What is the importance of saving girl child from the cruel parents who don't want girl child and get aborted before her birth?

Soln:- Let Rs.x crores, Rs.y crores, Rs.z crores be the amount spent on each scheme respectively.

$\therefore x + y + z = 600$ .... (1)
$x + 2y = 700$ ...... (2) (the given condition)
$3x + y + z = 1200$ ... (3)

The above equation can be written in matrix form as

$$\begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix} \begin{bmatrix} x \\ y \\ z \end{bmatrix} = \begin{bmatrix} 600 \\ 700 \\ 1200 \end{bmatrix}$$

$$\Rightarrow \begin{bmatrix} x \\ y \\ z \end{bmatrix} = \begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix}^{-1} = \begin{bmatrix} 600 \\ 700 \\ 1200 \end{bmatrix}$$

Let $A = \begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix}$

$$\therefore |A| = \begin{vmatrix} 1 & 1 & 1 \\ 1 & 2 & 0 \\ 3 & 1 & 1 \end{vmatrix} = \begin{vmatrix} 1 & 1 & 1 \\ 1 & 2 & 0 \\ 2 & 0 & 0 \end{vmatrix}$$

$= 2(-2) = -4 \neq 0$

$\therefore A^{-1}$ exists.

$$Adj.A = \begin{bmatrix} 2 & -1 & -5 \\ 0 & -2 & 2 \\ -2 & 1 & 1 \end{bmatrix}^{-1} = \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix}$$

$$\therefore A^{1} = \frac{adj.A}{|A|} = -\frac{1}{4} \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix}$$

$$\therefore \begin{bmatrix} x \\ y \\ z \end{bmatrix} = -\frac{1}{4} \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix} \begin{bmatrix} 600 \\ 700 \\ 1200 \end{bmatrix}$$

$$= -\frac{1}{4} \begin{bmatrix} 1200 - 2400 \\ -600 - 1400 + 1200 \\ -3000 + 1400 + 1200 \end{bmatrix} = \begin{bmatrix} 300 \\ 200 \\ 100 \end{bmatrix}$$

$\therefore x = 300, y = 200, z = 100$

Thus amount spent on each scheme are Rs. 300 crores, Rs.200 crores, Rs.1100 crores.

II part: The male population is more than female population in our country, but it is essential for a human being to save the life of all. This will help us to think against cruelty. ***(Contd....)***

ಜ್ಞಾನ ಪರಂಪರೆ ಅನುಷ್ಠಾನದ ಸವಾಲು

ವಿದ್ಯಾರ್ಥಿಗಳು ನಿಗದಿತ ಪಠ್ಯಕ್ರಮದಿಂದ ಆಚೆಗೂ ಪಡೆಯಬೇಕಾದ ಜ್ಞಾನಕ್ಕೆ ಪೂರಕವಾಗುವ 'ಭಾರತೀಯ ಜ್ಞಾನ ವ್ಯವಸ್ಥೆ'ಯ (ಐಕೆಎಸ್) ಅಳವಡಿಕೆಗೆ ಶಿಕ್ಷಣ ನೀತಿ ಶಿಫಾರಸು ಮಾಡಿದೆ. ಹಾಗಿದ್ದರೆ, ಯಾವುದೆಲ್ಲ ಜ್ಞಾನ ಪರಂಪರೆ?

• ಟಿ.ಎನ್.ವಾಸುದೇವಮೂರ್ತಿ

ನಮ್ಮ ವಿದ್ಯಾರ್ಥಿಗಳಿಗೆ ಭಾರತೀಯ ಜ್ಞಾನ ಪರಂಪರೆಯನ್ನು ಪರಿಚಯಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಪ್ರಮುಖ ಆಶಯಗಳಲ್ಲಿ ಒಂದು. 2020ಕ್ಕಿಂತ ಹಿಂದಿನ ಶಿಕ್ಷಣ ನೀತಿಗಳಲ್ಲೂ ಇಂತಹ ಪ್ರಸ್ತಾಪ ಇತ್ತು. ವಿಜ್ಞಾನ, ಕಲೆ, ವಾಣಿಜ್ಯ ಸೇರಿದಂತೆ ಎಲ್ಲ ಕೋರ್ಸುಗಳಲ್ಲೂ ನಿಗದಿತ ಪಠ್ಯಕ್ರಮದಿಂದ ಆಚೆಗೂ ತಿಳಿಯಬೇಕಾದ ಹಲವು ವಿಷಯಗಳು ಇರುತ್ತವೆ. ನಮ್ಮ ಶಿಕ್ಷಣ ನೀತಿ ಶಿಫಾರಸು ಮಾಡಿರುವ ಭಾರತೀಯ ಜ್ಞಾನ ವ್ಯವಸ್ಥೆಯು (ಐಕೆಎಸ್) ಅಂತಹ ಹಲವು ಜ್ಞಾನ ಪ್ರಸ್ಥಾನಗಳ ಪ್ರಸರಣಕ್ಕೆ ನೆರವಾಗಬಲ್ಲದು. ಆದರೆ ಅಂತಹ ಕ್ರಮಕ್ಕೆ ಮುಂದಾಗುವ ಮುನ್ನ, ಭಾರತೀಯ ಜ್ಞಾನ ಪರಂಪರೆ ಎಂದರೇನು ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ಭಾರತೀಯ ಸಂಸ್ಕೃತಿ- ಪರಂಪರೆ, ಕಲೆ-ಸಾಹಿತ್ಯವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿಯು ತನ್ನ ವರದಿಯಲ್ಲಿ ಶಿಫಾರಸು ಮಾಡಿರುವುದೇನೋ ಸರಿ. ಆದರೆ ಅಂತಹದ್ದೊಂದು ನೀತಿಯನ್ನು ರೂಪಿಸುವುದು ಒಂದು ಸವಾಲಾದರೆ, ಅದನ್ನು ಅನುಷ್ಠಾನಕ್ಕೆ ತರುವುದು ಇನ್ನೂ ಮಿಗಿಲಾದ ಸವಾಲೇ ಆಗಿರುತ್ತದೆ. ನಮ್ಮೀ ಬಹುತ್ವದ ಭಾರತದಲ್ಲಿ ಇಂತಹ ಹೊಸ ಕ್ರಮಗಳನ್ನು ಪರಿಚಯಿಸುವ ಪ್ರಕ್ರಿಯೆಯು ಹಲವು ತೊಡಕುಗಳನ್ನು ಎದುರಿಸುತ್ತದೆ, ಹಲವು ಅಪಾಯಗಳನ್ನು ಸೃಷ್ಟಿಸುತ್ತದೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

ಮೊದಲಿಗೆ, ಭಾರತೀಯ ಸಂದರ್ಭದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಬಹುಮಟ್ಟಿಗೆ ಜಾತಿಕೇಂದ್ರಿತ, ಧರ್ಮಕೇಂದ್ರಿತ ಹಾಗೂ ಸಿದ್ಧಾಂತಕೇಂದ್ರಿತ ಸಮುದಾಯಗಳು ನಿಯಂತ್ರಿಸುತ್ತಿವೆ. ಇಂತಹ ಸಂಸ್ಥೆಗಳು ಭಾರತೀಯ ಮತ್ತು ಅದರ ಮೂಲಕ ವಿಶ್ವಾತ್ಮಕ ಮೌಲ್ಯಗಳನ್ನು ಪ್ರಸರಿಸುವ ಬದಲು, ಐಕೆಎಸ್‌ನಂತಹ ಉಪಕ್ರಮವನ್ನು ಜಾತಿ, ನಂಬಿಕೆ, ಧರ್ಮ ಅಥವಾ ಸಿದ್ಧಾಂತದ ಪ್ರಚಾರಕ್ಕಾಗಿ ದುರ್ಬಳಕೆ ಮಾಡಿಕೊಳ್ಳುವ ಅಪಾಯವಿದೆ. ಇಂತಹ ವ್ಯವಸ್ಥೆಯಲ್ಲಿ ಐಕೆಎಸ್‌ನ ಅನುಷ್ಠಾನವು ವಿದ್ಯಾರ್ಥಿಗಳ ಚಿಂತನೆಯ ವ್ಯಾಪ್ತಿಯನ್ನು ವಿಸ್ತರಿಸದೇ ಕುಬ್ಜಗೊಳಿಸುವ ಸಾಧ್ಯತೆ ಇರುತ್ತದೆ.

ಎರಡನೆಯದಾಗಿ, ಯಾವುದೇ ಜಾತಿ, ಧರ್ಮ ಅಥವಾ ಸಿದ್ಧಾಂತದ ಕುದುರೆಯನ್ನು ಏರದ ಸಾಮಾನ್ಯ ಶೈಕ್ಷಣಿಕ ಸಂಸ್ಥೆಗಳು, ಪ್ರಚಲಿತದಲ್ಲಿರುವ ಸಿದ್ಧ ನಮೂನೆಗಳನ್ನೇ ಭಾರತೀಯ ಜ್ಞಾನ ಪರಂಪರೆ ಎಂದು ತಿಳಿದು ಅವನ್ನೇ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬಹುದು. ಇದು ಅಪಾಯಕಾರಿ ನಡೆ. ಏಕೆಂದರೆ, ದೇಶದ ಹಲವು ಜ್ಞಾನ ಪ್ರಸ್ಥಾನಗಳು ಶತಶತಮಾನಗಳಿಂದಲೂ ಪರಸ್ಪರ ವಾಗ್ವಾದದಲ್ಲಿ, ತಾರ್ಕಿಕ ಹಾಗೂ ಬೌದ್ಧಿಕ ಮೇಲಾಟದಲ್ಲಿ ತೊಡಗಿಕೊಂಡಿವೆ. ಒಂದು ಪ್ರಸ್ಥಾನದವರು ತಮ್ಮ ಪ್ರತಿಪಾದನೆಯೇ ಅಂತಿಮ ಸತ್ಯ ಎಂದು ಪ್ರತಿಪಾದಿಸಬಹುದು. ಆದರೆ ಅಂತಹ ಸಿದ್ಧಾಂತ ನಿರಾಧಾರವಾದುದಾಗಿರಬಹುದು. ಉದಾಹರಣೆಗೆ, ವಾಸ್ತವ ಜಗತ್ತಿನ ಕುರಿತು ಶಂಕರ ಮತ್ತು ಮಧ್ವರ ನಡುವೆ ಸೈದ್ಧಾಂತಿಕ ಭೇದವಿದೆ ಎನ್ನಲಾಗುತ್ತದೆ. ನಿಜವೇನೆಂದರೆ ಅವರಿಬ್ಬರ ನಡುವೆ 400 ವರ್ಷಗಳ ಅಂತರವಿದೆ. ಆದಿಶಂಕರರು ಬರೆದಿರುವ ಕೃತಿಗಳನ್ನು ಮಧ್ವಾಚಾರ್ಯ ಓದಿದ್ದರೆನ್ನಲು ಯಾವುದೇ ಪುರಾವೆ ದೊರೆತಿಲ್ಲ. 8ನೇ ಶತಮಾನದ ಶಂಕರರ ವಿಚಾರಗಳು ತಮ್ಮ ಕಾಲದಲ್ಲಿ (12ನೇ ಶತಮಾನದಲ್ಲಿ) ಪಡೆದುಕೊಂಡ ಬದಲಾದ ವ್ಯಾಖ್ಯಾನಗಳನ್ನಷ್ಟೇ ಮಧ್ವಾಚಾರ್ಯರು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿ ಖಂಡಿಸಿರುವುದು.

ಮೂರನೆಯದಾಗಿ, ನಮ್ಮ ವಿಶ್ವವಿದ್ಯಾಲಯಗಳ ತತ್ವಶಾಸ್ತ್ರ ವಿಭಾಗಗಳು ಅಂಗೀಕರಿಸಿಕೊಂಡಿರುವ ದ್ವೈತ, ಅದ್ವೈತ, ಸಾಂಖ್ಯ, ಯೋಗ, ವೇದಾಂತ, ಮೀಮಾಂಸೆಯಂತಹ ವಿಷಯಗಳೇ ನಿಜವಾದ ಭಾರತೀಯ ಜ್ಞಾನ ಪರಂಪರೆ ಎಂಬ ತಿಳಿವಳಿಕೆ ಸಹ ಪೂರ್ವಗ್ರಹಪೀಡಿತವಾದುದು. ವಚನಕಾರರು, ತತ್ವಪದಕಾರರು, ತಾಂತ್ರಿಕರು, ನಾಥಯೋಗಿಗಳು, ನೀಲಗಾರರು... ಹೀಗೆ ನಮ್ಮ ಜ್ಞಾನಪರಂಪರೆಗೆ ಸ್ಥಳೀಯ ವೈಶಿಷ್ಟ್ಯ ಇದೆ. ಭಾರತದ ಉದ್ದಗಲಕ್ಕೂ ಕಾಣಸಿಗುವ ಇಂತಹ ದೇಸೀ ವಿವೇಕ ಸಹ ನಮ್ಮ ಜ್ಞಾನಪರಂಪರೆಯನ್ನು ಸಮೃದ್ಧಗೊಳಿಸಿದೆ, ವೈವಿಧ್ಯಪೂರ್ಣವಾಗಿಸಿದೆ. ಈ ಬಹುತ್ವವನ್ನು ಒಳಗೊಳ್ಳದ ಐಕೆಎಸ್ ಪಠ್ಯಕ್ರಮವು ಭವಿಷ್ಯದಲ್ಲಿ ಅಪ್ರಸ್ತುತವಾಗುತ್ತದೆ.

ನಾಲ್ಕನೆಯದಾಗಿ, ಭಾರತವು ಆಧ್ಯಾತ್ಮಿಕತೆಯ ತವರು ಎಂಬ ಚರ್ವಿತ ಚರ್ವಣ ನಂಬಿಕೆಯೊಂದಿದೆ. ಆದರೆ ಭಾರತೀಯ ಜ್ಞಾನ ಪರಂಪರೆ ಎಂದ ಮಾತ್ರಕ್ಕೆ ಅದು ಅಧ್ಯಾತ್ಮ ಜ್ಞಾನವೇ ಎಂದು ಭಾವಿಸಬೇಕಿಲ್ಲ. ನಮ್ಮಲ್ಲಿ ಜನಪದ ವೈದ್ಯವಿದೆ, ಸಾಂಪ್ರದಾಯಿಕ ಕೃಷಿ ಪದ್ಧತಿ ಇದೆ, ಜನಪದ ಸಂಗೀತ, ಕಲೆ, ಜೀವನ ಪದ್ಧತಿಗಳಿವೆ. ಅಧ್ಯಾತ್ಮ ಎಂದೊಡನೆ, ಜನಸಮೂಹದಿಂದ ದೂರವಿದ್ದು ಯಾವುದೋ ಅಮೂರ್ತ ಜ್ಞಾನವನ್ನು ಸಂಪಾದಿಸುವುದೇ ಆಗಬೇಕೆಂದಿಲ್ಲ. ವ್ಯಕ್ತಿಯು ಪ್ರತಿಭೆ, ಪರಿಶ್ರಮದಿಂದ ತನ್ನ ಸುತ್ತಲಿನ ಬದುಕಿಗೆ, ಸಮಾಜಕ್ಕೆ ಕೊಡುಗೆ ನೀಡುವ ಮೂಲಕವೂ ಕೃತಕೃತ್ಯನಾಗುತ್ತಾನೆ. ಇಂತಹ ಭಾವವು ಒಂದು ವಿಮೋಚನೆಯ ಅನುಭವ ನೀಡುವುದರಿಂದ ಜನಪದರ ಕಾಯಕವೂ ಅಧ್ಯಾತ್ಮವೇ ಆಗಿದೆ.

ಐದನೆಯ ಮತ್ತು ಅತ್ಯಂತ ಪ್ರಾಯೋಗಿಕ ತೊಡಕೆಂದರೆ, ಜ್ಞಾನ ಪರಂಪರೆಯ ಕಲಿಕೆಯನ್ನು ಪಠ್ಯಕ್ರಮದೊಂದಿಗೆ ಅಳವಡಿಸುವುದು. ಶಾಲಾ–ಕಾಲೇಜು ಮಕ್ಕಳ ಮೇಲೆ ಈಗಾಗಲೇ ಅಗತ್ಯಕ್ಕಿಂತಲೂ ಅಧಿಕ ಪ್ರಮಾಣದ ಬೌದ್ಧಿಕ ಹೊರೆ ಇದೆ. ಸಾಲದೆಂದು ಇದರ ಮೇಲೆ ಐಕೆಎಸ್ ಎಂಬ ಹೆಚ್ಚುವರಿ ಉಪಕ್ರಮದಿಂದ ಮಕ್ಕಳು ಇನ್ನಷ್ಟು ಬಳಲುವುದಿಲ್ಲವೇ ಎಂಬ ಪ್ರಶ್ನೆಯನ್ನು ಶಿಕ್ಷಣ ವ್ಯವಸ್ಥೆಯ ಪಾಲುದಾರರು ಕೇಳುತ್ತಿದ್ದಾರೆ. ಸುಗಂಧದ ಪರಿಮಳವು ಹೂವಿಗೆ ಭಾರವಾಗದ ರೀತಿಯಲ್ಲಿ ಅದರೊಳಗೆ ನೆಲಸಿರುತ್ತದೆ. ಹಾಗೆಯೇ ಭಾರತೀಯ ಜ್ಞಾನ ಪರಂಪರೆಯನ್ನು ಪ್ರಧಾನ ಪಠ್ಯದೊಳಗೆ ಅಳವಡಿಸುವ ಸಾಧ್ಯತೆಗಳನ್ನು ಹುಡುಕಿಕೊಳ್ಳುವುದೇ ಇದಕ್ಕೆ ಏಕಮಾತ್ರ ಪರಿಹಾರವಾಗಿದೆ. ಉದಾಹರಣೆಗೆ, ಭೌತಶಾಸ್ತ್ರದ ಪಾಠ ಮಾಡುವಾಗ ಜೊತೆ ಜೊತೆಗೆ ಕಪಿಲರ ಸಾಂಖ್ಯ ದರ್ಶನವನ್ನು ಪರಿಚಯಿಸಬಹುದು, ಖಗೋಳ ವಿಜ್ಞಾನದ ಪಾಠದಲ್ಲಿ ಭಾಸ್ಕರ, ಆರ್ಯಭಟಾದಿಗಳ ವಿಚಾರಗಳನ್ನು ಪ್ರಸ್ತಾಪಿಸಬಹುದು. ಹರಿದಾಸರು, ಶಿವಶರಣರ ರಚನೆಗಳನ್ನು ಬೋಧಿಸುವಾಗ ಬುದ್ಧನ ಉಪದೇಶಗಳನ್ನು, ಯೇಸುವಿನ ವಾಣಿಯನ್ನು ಅಥವಾ ಉಪನಿಷತ್ತಿನ ಒಳನೋಟಗಳನ್ನು ಅದರೊಳಗೆ ತರಬಹುದು. ವಾಸ್ತವದಲ್ಲಿ, ವಿದ್ಯಾರ್ಥಿಗಳ ಗ್ರಹಿಕೆಯ ವ್ಯಾಪ್ತಿಯನ್ನು ವಿಸ್ತರಿಸುವ ಈ ಬಗೆಯ ಅಂತಃಶಿಸ್ತೀಯ ಬೋಧನೆಯೇ ಐಕೆಎಸ್ ಅನುಷ್ಠಾನದ ಮೂಲ ಆಶಯವಾಗಿದೆ.

ನಮ್ಮ ಐಐಟಿಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇಂದು ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹೊಸ ಹೊಸ ಆವಿಷ್ಕಾರಗಳಾಗುತ್ತಿವೆ. ಈ ಹೊಸ ಜ್ಞಾನಸೃಷ್ಟಿಯ ಪ್ರಕ್ರಿಯೆಗೆ ನಮ್ಮ ಪ್ರಾಚೀನ ಪರಂಪರೆಯ ಸ್ವರೂಪ ಹಾಗೂ ಮಿತಿಗಳ ಕುರಿತು ಸ್ಪಷ್ಟ ತಿಳಿವಳಿಕೆಯ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಇಂದು ಭಾರತದ ಹಾಗೂ ಹೊರದೇಶಗಳ ವಿಶ್ವವಿದ್ಯಾಲಯಗಳು ಮೆಟಾಫಿಸಿಕ್ಸ್ (ಆದಿಭೌತಶಾಸ್ತ್ರ) ವಿಭಾಗವನ್ನು ತೆರೆಯಲಾರಂಭಿಸಿವೆ. ಭವಿಷ್ಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳಲ್ಲಿ ಭಾರತೀಯ ಜ್ಞಾನ ಪರಂಪರೆಗೆ ಹೆಚ್ಚಿನ ಪ್ರಾಮುಖ್ಯ ಸಿಗಲಿದೆ. ಈ ಪರಂಪರೆಯನ್ನು ಒಂದು ಸಿದ್ಧ ಪಠ್ಯಕ್ರಮದಂತೆ ನೋಡದೆ, ನಿರಂತರವಾಗಿ ನಡೆಯಲಿರುವ ಜ್ಞಾನಮಾರ್ಗದ ಒಂದು ಪ್ರಕ್ರಿಯೆಯಂತೆ ನೋಡಿದಾಗ, ಪ್ರಧಾನ ಪಠ್ಯಕ್ರಮಕ್ಕೆ ಪೂರಕವಾದ ಅಂತಃಶಿಸ್ತೀಯ ಅಧ್ಯಯನವೆಂದು ಪರಿಭಾವಿಸಿದಾಗ, ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಇದರ ಅನುಷ್ಠಾನ ಸುಗಮವಾಗುತ್ತದೆ.

ಲೇಖಕ: ಸಹ ಪ್ರಾಧ್ಯಾಪಕ
ಆದಿಚುಂಚನಗಿರಿ ವಿಶ್ವವಿದ್ಯಾಲಯ

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC

APPLY NOW!

CREATE THE FUTURE
ADMISSIONS OPEN FOR AY 2025-26

RANKED
• 69 among top engineering institutes in India
• 44 among top private institutes for placement in India
Source: Times All India Engineering Institutes Ranking Survey 2025

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE (Data Science)
• Computer Engg.* (With specialisation in AI & ML/Internet of Things)
• CST* (With specialisation in AI & ML/Internet of Things) • IT • ECE
M.Tech. (For Regular and Professionals)
• CSE • AI
Ph.D. CSE (AI & ML, Networking & Cloud Computing, Analytics, Cyber Security, Data Science & Internet of Things) • ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design
B.Sc.
• Sound Engineering
• Visual Effects & Animation

SCHOOL OF LIBERAL STUDIES
B.A. (Major + Minor)
B.Sc. | Psychology
M.Sc. | Psychology
• Clinical • Counselling • Human Resource Development & Management
Ph.D.
• Psychology

SCHOOL OF ECONOMICS & COMMERCE
B.Com.
• International Accounting & Finance (ACCA, UK)
• Professional - CA Integrated • Data Science
• Certified Management Accountant (US CMA)
Ph.D.
• Economics • Commerce

SCHOOL OF LEGAL STUDIES
B.A., LL.B. (Hons)
B.B.A., LL.B. (Hons)
LL.B.
LL.M. | Constitutional Law • Commercial Law
• Criminal Law

SCHOOL OF SCIENCE & COMPUTER STUDIES
BCA
• Cloud Computing • Data Science
• Game Development • AI & ML NEW
B.Sc. • IT
M.Sc. • IT in Data Science
MCA
Ph.D. | Computer Application

SCHOOL OF MANAGEMENT
BBA
• Digital Marketing • Business Analytics
• Fintech NEW • Data Science NEW
• Logistics & Supply Chain Management NEW
• Tourism & Hospitality Management NEW
MBA with Dual Specialisation in
• Marketing • HR • Finance • Business Analytics
• Digital Marketing • Supply Chain Management
MBA with Specialisation in Business Analytics & Business Intelligence
MBA | Technology Management NEW
Executive MBA | Product Leadership
Ph.D. | Management

Up to 100% Scholarship available for eligible candidates*
PROVIDING OPPORTUNITIES TO GET SCHOLARSHIPS WORTH ₹12 CRORES*
• Semester-wise payment option
• Interest-free education loan (EMI option*)
• Hostel facility for boys & girls
We honour all National-level and state level entrance tests.
Direct admission for CUET students
LIMITED SEATS AT CONCESSIONAL FEE
*T&C apply

CET Codes:
B.Tech. - E257
B.Arch. - E245

COMEDK Code:
B.Tech. - E187

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಯಾವ ಕೆಲಸವನ್ನೇ ಆಗಲಿ ಉತ್ಸಾಹದಿಂದ ಮಾಡಬಲ್ಲವನು ತನ್ನ ಗುರಿ ಮುಟ್ಟದೆ ಇರಲಾರ.

–ಮಹರ್ಷಿ ವಾಲ್ಮೀಕಿ

ಸಂಪಾದಕೀಯ

ಹುಲಿಗಳ ಸಾವು ಅಕ್ಷಮ್ಯ ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ

ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಐದು ಹುಲಿಗಳು ವಿಷಪ್ರಾಶನಕ್ಕೆ ಬಲಿ ಆಗಿರುವುದರಲ್ಲಿ ಅರಣ್ಯ ಇಲಾಖೆಯ ನಿರ್ಲಕ್ಷ್ಯದೊಂದಿಗೆ ಮನುಷ್ಯ ಹಾಗೂ ವನ್ಯಜೀವಿ ಸಂಘರ್ಷದ ಪಾತ್ರವೂ ಇದೆ. ಹುಲಿಗಳ ಸಂರಕ್ಷಣೆಯಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ಕಳೆದೊಂದು ದಶಕದ ಅವಧಿಯಲ್ಲಿ ದೇಶದಲ್ಲಿನ ಹುಲಿಗಳ ಸಂಖ್ಯೆ ದುಪ್ಪಟ್ಟಾಗಿದ್ದು, 3,650ಕ್ಕೂ ಹೆಚ್ಚು ಹುಲಿಗಳು ಭಾರತದಲ್ಲಿವೆ. ವಿಶ್ವದ ಒಟ್ಟು ಹುಲಿಗಳಲ್ಲಿ ಶೇ 75ರಷ್ಟು ಭಾರತದಲ್ಲಿಯೇ ಇವೆ. ಹುಲಿ ಸಂರಕ್ಷಣೆಯ ಸಾಧನೆ ಮೂಲಕ ವಿಶ್ವದ ಗಮನಸೆಳೆದಿರುವ ದೇಶದಲ್ಲಿ ಮನುಷ್ಯನ ಹಸ್ತಕ್ಷೇಪದಿಂದಾಗಿ ಹುಲಿಗಳ ದಾರುಣ ಸಾವುಗಳೂ ಸಂಭವಿಸುತ್ತಿವೆ. ಈ ಸಾಲಿಗೆ ಹೊಸ ಸೇರ್ಪಡೆ, ಚಾಮರಾಜನಗರ ಜಿಲ್ಲೆಯ ಹೂಗ್ಯಂ ವನ್ಯಜೀವಿ ವಲಯದ ಮೀಣ್ಯಂನ ಕಾಡಿನಲ್ಲಿ ಸಂಭವಿಸಿರುವ ಐದು ಹುಲಿಗಳ ಸಾವು. ತಾಯಿ ಹುಲಿ ಹಾಗೂ ನಾಲ್ಕು ಮರಿ ಹುಲಿಗಳು ವಿಷ ಬೆರೆಸಿದ್ದ ಜಾನುವಾರುವಿನ ಕಳೇಬರ ತಿಂದು ದುರ್ಮರಣಕ್ಕೆ ಒಳಗಾಗಿವೆ. ಹುಲಿಗಳಿಗೆ ವಿಷಪ್ರಾಶನ ಮಾಡಿ ಕೊಂದಿರುವ ಆರೋಪದ ಮೇಲೆ ಹನೂರು ತಾಲ್ಲೂಕಿನ ಕೊಪ್ಪ ಗ್ರಾಮದ ಮೂವರು ಹಾಗೂ ಕೃತ್ಯಕ್ಕೆ ನೆರವು ನೀಡಿರುವ ಆರೋಪದಲ್ಲಿ ಮೂವರನ್ನು ಬಂಧಿಸಲಾಗಿದೆ. ಅರಣ್ಯದೊಳಗೆ ಮೇಯುತ್ತಿದ್ದ ಹಸುವನ್ನು ಹುಲಿ ಕೊಂದು ಹಾಕಿರುವ ಘಟನೆಗೆ ಪ್ರತೀಕಾರದ ರೂಪದಲ್ಲಿ ದುಷ್ಕೃತ್ಯ ನಡೆದಿದ್ದು; ಹುಲಿ ತಿಂದು ಉಳಿಸಿದ್ದ ಕಳೇಬರಕ್ಕೆ ವಿಷ ಹಾಕಲಾಗಿದೆ. ಆ ವಿಷಪೂರಿತ ಕಳೇಬರವನ್ನು ತಿಂದು ಐದು ಹುಲಿಗಳೂ ಪ್ರಾಣಬಿಟ್ಟಿವೆ ಎಂದು ಹೇಳಲಾಗಿದೆ. ಹುಲಿಗಳ ಸಾವಿನ ಹಿಂದೆ ತಮಿಳುನಾಡಿನ ಜಾನುವಾರುಗಳ ಮಾಲೀಕರ 'ಸಗಣಿ ಮಾಫಿಯಾ'ದ ಪರೋಕ್ಷ ಪಾತ್ರ ಇರುವುದರ ಬಗ್ಗೆ ಶಂಕೆ ವ್ಯಕ್ತವಾಗಿದೆ. ಮಹದೇಶ್ವರ ಬೆಟ್ಟದ ತಪ್ಪಲಿನಲ್ಲಿ ವಾಸವಿರುವ ಬಹುತೇಕರು ಪಶುಪಾಲನೆ ವೃತ್ತಿ ಅವಲಂಬಿಸಿದ್ದರೂ ಅವರಲ್ಲಿ ಸ್ವಂತ ಜಾನುವಾರು ಹೊಂದಿರುವವರು ವಿರಳ. ಬಹುತೇಕರು ತಮಿಳುನಾಡಿನ ಜಾನುವಾರುಗಳನ್ನು ಮೇಯಿಸುವ ಕೆಲಸ ನಿರ್ವಹಿಸುತ್ತಿದ್ದಾರೆ. ಸಾವಿರಾರು ಜಾನುವಾರುಗಳನ್ನು ನಿಯಮಬಾಹಿರವಾಗಿ ಕಾಡಿನೊಳಗೆ ನುಗ್ಗಿಸಿ ಮೇಯಿಸುವ ಸಂದರ್ಭದಲ್ಲಿ, ದನಕರುಗಳ ಮೇಲೆ ದಾಳಿ ಮಾಡುವ ಹುಲಿಗಳ ಮೇಲೆ ಸೇಡು ತೀರಿಸಿಕೊಳ್ಳುವ ಕೃತ್ಯಗಳು ನಡೆಯುತ್ತಿವೆ ಎನ್ನಲಾಗಿದೆ. ಈ ಮಾನವ– ಪ್ರಾಣಿ ಸಂಘರ್ಷವೇ ಪ್ರಸಕ್ತ ಐದು ಹುಲಿಗಳ ಸಾವಿನ ಹಿನ್ನೆಲೆಯಲ್ಲಿಯೂ ಗುರುತಿಸಲಾಗುತ್ತಿದೆ.

ಐದು ಹುಲಿಗಳ ಸಾವಿನ ಪ್ರಕರಣವು ತಾರ್ಕಿಕ ಅಂತ್ಯ ಮುಟ್ಟಬೇಕು. ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ರಾಜಿ ಮಾಡಿಕೊಳ್ಳಬಾರದು

ಹುಲಿಗಳ ಸಾವಿನ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಪಾತ್ರವೂ ಇದೆ. ಅರಣ್ಯದ ಸಂರಕ್ಷಣೆಯಲ್ಲಿ ಹೊರಗುತ್ತಿಗೆ ವಾಚರ್‌ಗಳ ಪಾತ್ರ ಮಹತ್ವದ್ದು. ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಕಾರ್ಯನಿರ್ವಹಿಸುವ 65ಕ್ಕೂ ಹೆಚ್ಚು ಹೊರಗುತ್ತಿಗೆ ವಾಚರ್‌ಗಳಿಗೆ ಐದು ತಿಂಗಳಿಂದ ವೇತನ ದೊರೆತಿಲ್ಲ. ವೇತನ ಬಿಡುಗಡೆಗೆ ಸಂಬಂಧಿಸಿದಂತೆ ವಾಚರ್‌ಗಳು ಕೊಳ್ಳೇಗಾಲದ ಡಿಸಿಎಫ್ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡಿರುವ ದುಷ್ಕರ್ಮಿಗಳು, ಕಾಡಿನೊಳಗೆ ಯಾರೂ ಇಲ್ಲದಿರುವ ಸಮಯ ನೋಡಿ ಹುಲಿಗಳ ಆಹಾರಕ್ಕೆ ಕೀಟನಾಶಕ ಸೇರಿಸಿದ್ದಾರೆ. ಸಕಾಲಕ್ಕೆ ಸಂಬಳ ದೊರಕದೇ ಹೋದರೆ ವಾಚರ್‌ಗಳು ತಮ್ಮ ಕೆಲಸದಲ್ಲಿ ಉತ್ಸಾಹ ಉಳಿಸಿಕೊಳ್ಳುವುದಾದರೂ ಹೇಗೆ? ಮಲೆ ಮಹದೇಶ್ವರ ವನ್ಯಜೀವಿ ವಿಭಾಗವನ್ನು 'ಹುಲಿ ಸಂರಕ್ಷಿತ ವಲಯ' ಎಂದು ಘೋಷಿಸದಿರುವುದು ಕೂಡ ಹುಲಿಗಳ ಸುರಕ್ಷತೆಗೆ ತೊಡಕಾಗಿ ಪರಿಣಮಿಸಿದೆ. 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ' ಹಸಿರು ನಿಶಾನೆ ತೋರಿಸಿ ವರ್ಷಗಳೇ ಕಳೆದಿದ್ದರೂ ಮಲೆ ಮಹದೇಶ್ವರ ವನ್ಯಜೀವಿ ವಿಭಾಗವನ್ನು ಹುಲಿ ಸಂರಕ್ಷಿತ ವಲಯ ಎಂದು ಘೋಷಿಸಲು ಸರ್ಕಾರಗಳು ಮುಂದಾಗಿಲ್ಲ. ಕಾಡು ಹಾಗೂ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಲಾಬಿಗಳಿಗೆ ಮಣಿಯುವ ಸರ್ಕಾರಗಳು, ವಿಳಂಬ ತಂತ್ರ ಅನುಸರಿಸುವುದು ಸಾಮಾನ್ಯ ಎನ್ನುವಂತಾಗಿದೆ. ವನ್ಯಜೀವಿಗಳ ಅಸಹಜ ಸಾವು ಸಂಭವಿಸಿದ ಸಂದರ್ಭದಲ್ಲಿ ತನಿಖೆ ವಸ್ತುನಿಷ್ಠವಾಗಿ ನಡೆಯುವುದೂ ಅಪರೂಪ. ಪ್ರಸಕ್ತ ವರ್ಷದಲ್ಲೇ, ಶಿವಮೊಗ್ಗ ಜಿಲ್ಲೆಯ ಅಂಬಲಿಗೊಳ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಹುಲಿಯ ಕಳೇಬರ ಪತ್ತೆಯಾಗಿತ್ತು. ಆ ಸಾವಿಗೆ ಕಾರಣ ನಿಗೂಢವಾಗಿಯೇ ಉಳಿದಿದೆ. ಭದ್ರಾ ವನ್ಯಜೀವಿ ಅಭಯಾರಣ್ಯದಲ್ಲಿ ಆನೆಯೊಂದು ಸಾವಿಗೀಡಾದಾಗ, ಅದನ್ನು ಹೆಣ್ಣು ಆನೆ ಎಂದು ಅರಣ್ಯ ಇಲಾಖೆ ಪ್ರಕಟಿಸಿತ್ತು. ಆದರೆ, ಸಾವಿಗೀಡಾದುದು ಗಂಡು ಆನೆ ಎನ್ನುವುದನ್ನು ಡಿಎನ್‌ಎ ಪರೀಕ್ಷೆ ಸ್ಪಷ್ಟಪಡಿಸಿತ್ತು ಹಾಗೂ ಆನೆಯ ದಂತಗಳು ನಾಪತ್ತೆಯಾಗಿದ್ದವು. ವನ್ಯಜೀವಿಗಳ ಅಸಹಜ ಸಾವುಗಳು ತಾರ್ಕಿಕ ಅಂತ್ಯ ಮುಟ್ಟುವುದು ಅಪರೂಪ. ಸಣ್ಣಪುಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಮೂಲಕ ಹಿರಿಯ ಅಧಿಕಾರಿಗಳು ಪ್ರಕರಣಗಳನ್ನು ಹಳ್ಳ ಹಿಡಿಸುತ್ತಾರೆ. ಮಲೆ ಮಹದೇಶ್ವರ ವನ್ಯಜೀವಿ ವಲಯದಲ್ಲಿನ ಐದು ಹುಲಿಗಳ ಸಾವಿನ ಪ್ರಕರಣವಾದರೂ ತಾರ್ಕಿಕ ಅಂತ್ಯ ಮುಟ್ಟಬೇಕು. ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ರಾಜಿ ಮಾಡಿಕೊಳ್ಳಬಾರದು. ಕಾಡು, ಕಾಡಿನ ಜೀವವೈವಿಧ್ಯದ ಮಹತ್ವದ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕೆಲಸವೂ ವ್ಯಾಪಕವಾಗಿ ನಡೆಯಬೇಕು.

ವಿವಿಧತೆಯಲ್ಲಿ ಏಕತೆ ಸಾಧನೆ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಭಾರತದ ರಾಷ್ಟ್ರೀಯ ಭಾಷೆ ಯಾವುದು ಎಂಬ ಪ್ರಶ್ನೆಯು ಡಿಎಂಕೆ ಪಕ್ಷದ ಸಂಸದೆ ಕನಿಮೊಳಿ ಅವರಿಗೆ ಸ್ಪೇನ್ ದೇಶದಲ್ಲಿ ಎದುರಾದಾಗ, ಅವರು ಬಹಳ ಅದ್ಭುತವಾದ ಉತ್ತರ ನೀಡಿದರು. 'ವಿವಿಧತೆಯಲ್ಲಿ ಏಕತೆ'ಯು ಭಾರತದ ರಾಷ್ಟ್ರೀಯ ಭಾಷೆ ಎಂದು ಬಹಳ ಸಹಜವಾಗಿ ಅವರು ಹೇಳಿದರು. ಕ್ಲಿಷ್ಟಕರವಾದ ಪ್ರಶ್ನೆಯೊಂದಕ್ಕೆ ಎಂತಹ ಗಮನಾರ್ಹವಾದ ಉತ್ತರ ಇದು, ಅದೂ ವಿದೇಶಿ ನೆಲದಲ್ಲಿ!

ಗಡಿಯಾಚೆಗಿನ ಭಯೋತ್ಪಾದನೆಗೆ ಪಾಕಿಸ್ತಾನವು ನಿರಂತರವಾಗಿ ಉತ್ತೇಜನ ನೀಡುತ್ತಿರುವುದು, ಅದರ ಪರಿಣಾಮವಾಗಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು 26 ಜನರ ಹತ್ಯೆ ನಡೆದಿದ್ದುದು, ನಂತರ ಭಾರತವು ಪಾಕಿಸ್ತಾನದಲ್ಲಿನ ಭಯೋತ್ಪಾದಕರ ಶಿಬಿರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದರ ವಿಚಾರವಾಗಿ ದೇಶದ ನಿಲುವನ್ನು ವಿವರಿಸಲು ಸ್ಪೇನ್ ಮತ್ತು ಇತರ ಕೆಲವು ದೇಶಗಳಿಗೆ ತೆರಳಿದ್ದ ಸಂಸದರ ನಿಯೋಗದ ನೇತೃತ್ವವನ್ನು ಕನಿಮೊಳಿ ವಹಿಸಿದ್ದರು.

ಭಾರತವು ಸರ್ವಪಕ್ಷಗಳ ಸದಸ್ಯರ ಏಳು ನಿಯೋಗಗಳನ್ನು 30ಕ್ಕೂ ಹೆಚ್ಚು ದೇಶಗಳಿಗೆ ಕಳುಹಿಸಿತ್ತು. ನಿಯೋಗಗಳ ರಚನೆಯು ಭಾರತದ ರಾಜಕೀಯ ಮತ್ತು ಸಾಮಾಜಿಕ ಬಹುತ್ವವನ್ನು ನಿಜವಾಗಿಯೂ ಪ್ರತಿನಿಧಿಸುವಂತೆ ಇತ್ತು. ಕನಿಮೊಳಿ ನೇತೃತ್ವದ ನಿಯೋಗದಲ್ಲಿ ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಪ್ರೇಮ್ ಚಂದ್ ಗುಪ್ತ, ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಸಿ) ಮಿಯಾಂ ಅಲ್ತಾಫ್ ಅಹ್ಮದ್, ಸಮಾಜವಾದಿ ಪಕ್ಷದ (ಎಸ್‌ಪಿ) ರಾಜೀವ್ ರಾಯ್, ಬಿಜೆಪಿಯ ಕ್ಯಾಪ್ಟನ್ ಬ್ರಿಜೇಶ್ ಚೌಟ ಮತ್ತು ರಾಯಭಾರಿ ಜಾವೇದ್ ಅಶ್ರಫ್ ಅವರು ಸದಸ್ಯರಾಗಿದ್ದರು. ಈ ನಿಯೋಗಕ್ಕೆ ರಷ್ಯಾ, ಸ್ಲೊವೇನಿಯಾ, ಲಾಟ್ವಿಯಾ ಮತ್ತು ಸ್ಪೇನ್ ದೇಶವನ್ನು ಭೇಟಿ ಮಾಡುವ ಹೊಣೆ ವಹಿಸಲಾಗಿತ್ತು.

ಭಾರತವು ಏಕಭಾಷೆಯ ದೇಶ ಆಗಿದ್ದಿದ್ದರೆ, ಇಲ್ಲಿ ಇರುವುದು ಒಂದು ಪ್ರಮುಖ ಭಾಷೆ ಮಾತ್ರ ಆಗಿದ್ದಿದ್ದರೆ, ಇಲ್ಲಿನ ಜನ ಮಾತೃಭಾಷೆ ಎಂದು ವರ್ಗೀಕರಿಸಲಾಗಿರುವ 122 ಭಿನ್ನ ಭಾಷೆಗಳನ್ನು ಮತ್ತು 270 ಉಪಭಾಷೆಗಳನ್ನು ಮಾತನಾಡುವವರಾಗಿಲ್ಲದೇ ಇದ್ದಿದ್ದರೆ, ಕನಿಮೊಳಿ ಅವರಿಗೆ ಎದುರಾದ ಪ್ರಶ್ನೆಯು ಬಹಳ ಸರಳವಾಗಿ ಕಾಣುತ್ತಿತ್ತು.

ಭಾಷೆಗೆ ಸಂಬಂಧಿಸಿದ ರಾಜಕಾರಣದಲ್ಲಿ ಸಿಲುಕಿಲ್ಲದ ಕಾಂಗ್ರೆಸ್ ಅಥವಾ ಬೇರೆ ಯಾವುದಾದರೂ ಪಕ್ಷದ ರಾಜಕಾರಣಿಗೆ ಈ ಪ್ರಶ್ನೆ ಎದುರಾಗಿದ್ದರೆ, ಆಗಲೂ ಅದು ಸರಳವಾಗಿ ಕಾಣುತ್ತಿತ್ತು. ಆದರೆ, ವಸ್ತುಸ್ಥಿತಿ ಹಾಗಿರಲಿಲ್ಲ. ಕನಿಮೊಳಿ ಅವರು ಪ್ರತಿನಿಧಿಸುವುದು ಡಿಎಂಕೆ ಪಕ್ಷವನ್ನು. ಈ ಪಕ್ಷವು ಜವಾಹರಲಾಲ್ ನೆಹರೂ ಮತ್ತು ಡಿಎಂಕೆ ಸಂಸ್ಥಾಪಕ ಅಣ್ಣಾದೊರೈ ಅವರ ಕಾಲದಿಂದಲೂ ತಾನು 'ಹಿಂದಿ ಹೇರಿಕೆ' ಎಂದು ಕರೆಯುವುದರ ವಿರುದ್ಧ ನಿರಂತರ ಅಭಿಯಾನ ನಡೆಸಿಕೊಂಡು ಬಂದಿದೆ ಎಂಬುದು ಗಮನಾರ್ಹ.

ಕನಿಮೊಳಿ ಅವರು ತಾವು ಡಿಎಂಕೆ ಪಕ್ಷಕ್ಕೆ ಸೇರಿದ್ದರೂ ಅವರ ಪಕ್ಷ ಮತ್ತು ಅದರ ಮಿತ್ರಪಕ್ಷಗಳು ಬಿಜೆಪಿ ಹಾಗೂ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜೊತೆ ಭಾಷೆಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ಸ್ಪೇನ್‌ನಲ್ಲಿ ಈ ಪ್ರಶ್ನೆಗೆ ಉತ್ತರ ನೀಡುವ ಸಂದರ್ಭದಲ್ಲಿ ಅವರು ರಾಷ್ಟ್ರದ ಹಿತಾಸಕ್ತಿಯನ್ನು ಎಲ್ಲದಕ್ಕಿಂತ ಹೆಚ್ಚು ಮುಖ್ಯ ಆಗಿಸಿಕೊಂಡರು. ಪ್ರಾಸಂಗಿಕವಾಗಿ ಹೇಳುವುದಾದರೆ, ಇವೆಲ್ಲ ಸ್ಪೇನ್ ದೇಶದಲ್ಲಿ ನಡೆಯುತ್ತಿದ್ದ ಹೊತ್ತಿನಲ್ಲಿ ಕನಿಮೊಳಿ ಅವರ ಪಕ್ಷದ ಮಿತ್ರ, ನಟ ಕಮಲ್ ಹಾಸನ್ ಅವರು ಕನ್ನಡವು ತಮಿಳಿನಿಂದ ಜನಿಸಿದ್ದು ಎಂದು ಹೇಳುವ ಮೂಲಕ ಭಾಷಾಜ್ವಾಲೆಯನ್ನು ಹೊತ್ತಿಸುತ್ತಿದ್ದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅವರ ಕೆಲವು ನಿಕಟವರ್ತಿಗಳು ಆರ್ಭಟದ ಮಾತುಗಳನ್ನು ಆಡುತ್ತಿದ್ದರೂ ಕಾಂಗ್ರೆಸ್ ಪಕ್ಷದ ಕೆಲವು ಸಂಸದರು ಸೇರಿದಂತೆ ಹಲವಾರು ಮಂದಿ ಇತರ ಸಂಸತ್ ಸದಸ್ಯರು ದೇಶದ ಪರವಾಗಿ ನಿಂತರು, ಒಗ್ಗಟ್ಟು ಪ್ರದರ್ಶಿಸಿದರು.

ಕಾಂಗ್ರೆಸ್ ಸಂಸದರ ಪೈಕಿ ಶಶಿ ತರೂರ್ ಅವರು ಬಹಳ ಮುಖ್ಯವಾಗಿದ್ದರು, ಅವರು ಬಹಳ ಗಟ್ಟಿಯಾಗಿ ವಿಚಾರ ಮಂಡನೆ ಮಾಡಿದರು. ಸರ್ವಪಕ್ಷಗಳ ಸದಸ್ಯರನ್ನು ಒಳಗೊಂಡ ನಿಯೋಗವನ್ನು ವಿಶ್ವದ ಎಲ್ಲೆಡೆ ಕಳುಹಿಸಿದ್ದಕ್ಕಾಗಿ ತರೂರ್ ಅವರು ಮೋದಿ ನೇತೃತ್ವದ ಸರ್ಕಾರವನ್ನು ಶ್ಲಾಘಿಸಿದರು. ದೇಶವು ಬಿಕ್ಕಟ್ಟಿನಲ್ಲಿ ಇದ್ದಾಗ ನೆರವಿನ ಹಸ್ತ ಚಾಚುವುದು ಎಲ್ಲ ಪ್ರಜೆಗಳ ಕರ್ತವ್ಯ ಎಂದು ತರೂರ್ ಹೇಳಿದರು.

> ಪಾಕಿಸ್ತಾನವು ಭಯೋತ್ಪಾದನೆಗೆ ನಿರಂತರವಾಗಿ ಉತ್ತೇಜನ ನೀಡುತ್ತಿರುವ ಪರಿಣಾಮವಾಗಿ ಭಾರತವು ತೆರುತ್ತಿರುವ ಬೆಲೆಯ ಬಗ್ಗೆ ಒವೈಸಿ ಅವರು ಮನಬಿಚ್ಚಿ ಮಾತನಾಡಿದರು. ಅವರ ಮಾತುಗಳು, ಈ ಸಮಸ್ಯೆಯನ್ನು ಜಗತ್ತು ಅರ್ಥ ಮಾಡಿಕೊಳ್ಳುವಲ್ಲಿ ಬಹಳ ದೊಡ್ಡ ಕೊಡುಗೆ ನೀಡಿವೆ. ಸೌದಿ ಅರೇಬಿಯಾ, ಕುವೈತ್, ಬಹರೇನ್, ಅಲ್ಜೀರಿಯಾಕ್ಕೆ ತೆರಳಿದ ನಿಯೋಗದಲ್ಲಿ ಒವೈಸಿ ಇದ್ದರು. ನಿಯೋಗದ ನೇತೃತ್ವವನ್ನು ಬಿಜೆಪಿಯ ಬೈಜಯಂತ್ ಪಾಂಡಾ ವಹಿಸಿದ್ದರು

'ರಾಜಕೀಯವನ್ನು ಪಕ್ಕಕ್ಕೆ ಇರಿಸಬೇಕು. ಇದರಲ್ಲಿ ನನಗೆ ರಾಜಕೀಯ ಕಾಣುವುದಿಲ್ಲ. ನಾವೆಲ್ಲ ಭಾರತೀಯರು. ದೇಶವು ಬಿಕ್ಕಟ್ಟಿನಲ್ಲಿ ಇದ್ದಾಗ, ಕೇಂದ್ರ ಸರ್ಕಾರವು ಪ್ರಜೆಯ ನೆರವನ್ನು ಕೇಳಿದಾಗ, ನೀವು ಬೇರೆ ಯಾವ ಉತ್ತರ ಹೇಳುತ್ತಿದ್ದಿರಿ' ಎಂದು ತರೂರ್ ಪ್ರಶ್ನಿಸಿದರು.

ದೇಶದ ಪರವಾಗಿ ನಿಲ್ಲುವ ವಿಚಾರದಲ್ಲಿ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರೂ ಬಹಳ ದೊಡ್ಡ ಕೆಲಸ ಮಾಡಿದ್ದಾರೆ. ಖುರ್ಷಿದ್ ಅವರು ಈ ಹಿಂದೆ ವಿದೇಶಾಂಗ ವ್ಯವಹಾರಗಳ ಸಚಿವ ಆಗಿದ್ದವರು. 'ಸಿಂಧೂರ ಕಾರ್ಯಾಚರಣೆ'ಯನ್ನು ಖುರ್ಷಿದ್ ಅವರು ಶ್ಲಾಘಿಸಿದರು, 'ನಮ್ಮ ಅಧಿಕಾರಿಗಳಿಗೆ ಒಂದು ಸೆಲ್ಯೂಟ್, ಅವರ ಬಗ್ಗೆ ಹೆಮ್ಮೆ ಇದೆ... ಸಶಸ್ತ್ರ ಪಡೆಗಳು ಗಮನಾರ್ಹವಾದ ನಿರ್ಧಾರಗಳನ್ನು ತೆಗೆದುಕೊಂಡಿವೆ' ಎಂದು ಹೇಳಿದರು. ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲಿ ಭಯೋತ್ಪಾದಕ ಶಿಬಿರಗಳನ್ನು ಮಾತ್ರವೇ ಗುರಿಪಡಿಸಿಕೊಳ್ಳಲಾಗಿತ್ತೇ ವಿನಾ ಪಾಕಿಸ್ತಾನವನ್ನಲ್ಲ ಎಂದು ಅವರು ಒತ್ತಿ ಹೇಳಿದರು.

ಸಿಂಧೂರ ಕಾರ್ಯಾಚರಣೆ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಿದ್ದ ಭಾರತದ ರಾಜಕಾರಣಿಗಳ ಒಂದು ವರ್ಗದ (ತಮ್ಮದೇ ಪಕ್ಷದವರೂ ಸೇರಿದಂತೆ) ವಿರುದ್ಧ ಖುರ್ಷಿದ್ ಅವರು ಹರಿಹಾಯ್ದರು. 'ಭಯೋತ್ಪಾದನೆ ವಿರುದ್ಧದ ಒಂದು ಅಭಿಯಾನದಲ್ಲಿ ಭಾಗಿಯಾಗಿದ್ದಾಗ, ಭಾರತದ ಸಂದೇಶವನ್ನು ವಿಶ್ವಕ್ಕೆ ರವಾನಿಸುವಾಗ, ತಾಯ್ನಾಡಿನಲ್ಲಿ ಜನ ರಾಜಕೀಯ ಒಲವುಗಳ ಬಗ್ಗೆ ಲೆಕ್ಕಾಚಾರ ಹಾಕುತ್ತಿರುವುದನ್ನು ನೋಡಲು ಸಂಕಟವಾಗುತ್ತದೆ. ದೇಶಭಕ್ತ ಆಗಿರುವುದು ಅಷ್ಟೊಂದು ಕಷ್ಟವೇ' ಎಂದು ಖುರ್ಷಿದ್ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನ ಖಾತೆಯಲ್ಲಿ ಬರೆದಿದ್ದರು.

ಇಂಡೊನೇಷ್ಯಾದಲ್ಲಿ ನಡೆದ ಸಭೆಯೊಂದರಲ್ಲಿ ಖುರ್ಷಿದ್ ಅವರು, 'ಈ ನಿಯೋಗದಲ್ಲಿ ನಿಮಗೆ ಕಾಣುವುದು ಭಾರತದ ನಿಜವಾದ ಚಿತ್ರಣ. ಇದನ್ನು ನಾವು ಬಹಳ ಮೌಲ್ಯಯುತ ಎಂದು ಭಾವಿಸಿದ್ದೇವೆ, ಇದನ್ನು ನಾವು ಪೋಷಿಸುತ್ತೇವೆ. ನಮ್ಮ ದೇಶ ನಮ್ಮ ತಾಯಿ ಎಂಬುದು ನಮ್ಮ ನಂಬಿಕೆ' ಎಂದು ಹೇಳಿದರು.

ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದಾದ ನಂತರದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಮೂಡಿರುವ ಸಮೃದ್ಧಿಯನ್ನು ಹಾಳುಮಾಡುವುದು ಪಾಕಿಸ್ತಾನದ ಬಯಕೆ ಎಂದು ಖುರ್ಷಿದ್ ಹೇಳಿದರು. 370ನೇ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದರ ಬಗ್ಗೆ ಅವರ ಪಕ್ಷವು ತಾಳಿರುವ ನಿಲುವಿಗೆ ಈ ಮಾತು ಭಿನ್ನವಾಗಿದೆ.

ನಿಯೋಗ ಕಳುಹಿಸುವ ಕ್ರಮವನ್ನು ಇನ್ನೊಬ್ಬ ಕಾಂಗ್ರೆಸ್ ಮುಖಂಡ ಆನಂದ ಶರ್ಮಾ ಅವರೂ ಶ್ಲಾಘಿಸಿದರು. ಭಯೋತ್ಪಾದನೆಗೆ ಉತ್ತೇಜನ ನೀಡುವಲ್ಲಿ ಪಾಕಿಸ್ತಾನದ ಮಿಲಿಟರಿ ವಹಿಸುತ್ತಿರುವ ಪಾತ್ರದ ಬಗ್ಗೆ ಜಾಗತಿಕ ಮಟ್ಟದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮೋದಿ ನೇತೃತ್ವದ ಸರ್ಕಾರವು ನಿಯೋಗ ಕಳುಹಿಸಲು ತೀರ್ಮಾನಿಸಿದ್ದನ್ನು ಶರ್ಮಾ ಅವರು ಬಹಳ ಮುಖ್ಯವಾದ ಕ್ರಮ ಎಂದು ಬಣ್ಣಿಸಿದರು. ಕಾಂಗ್ರೆಸ್ ಮುಖಂಡ ಮನೀಶ್ ತಿವಾರಿ ಅವರು ನಿಯೋಗವನ್ನು ಸೇರಿಕೊಂಡರು, ರಾಷ್ಟ್ರದ ಕರೆಯು ಬೇರೆ ಎಲ್ಲವುಗಳಿಗಿಂತ ದೊಡ್ಡದು ಎಂದು ಹೇಳಿದರು.

ಇವೆಲ್ಲವುಗಳ ನಡುವೆ ಉದಯಿಸಿದ ಇನ್ನೊಬ್ಬ 'ರಾಷ್ಟ್ರೀಯವಾದಿ' ತಾರೆ ಎಂದರೆ ಅಖಿಲ ಭಾರತ ಮಜ್ಲಿಸ್ ಎ ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದ ನಾಯಕ ಅಸದುದ್ದೀನ್ ಒವೈಸಿ. ಪಾಕಿಸ್ತಾನವು ಭಯೋತ್ಪಾದನೆಗೆ ನಿರಂತರವಾಗಿ ಉತ್ತೇಜನ ನೀಡುತ್ತಿರುವ ಪರಿಣಾಮವಾಗಿ ಭಾರತವು ತೆರುತ್ತಿರುವ ಬೆಲೆಯ ಬಗ್ಗೆ ಒವೈಸಿ ಅವರು ಮನಬಿಚ್ಚಿ ಮಾತನಾಡಿದರು. ಅವರ ಮಾತುಗಳು, ಈ ಸಮಸ್ಯೆಯನ್ನು ಜಗತ್ತು ಅರ್ಥ ಮಾಡಿಕೊಳ್ಳುವಲ್ಲಿ ಬಹಳ ದೊಡ್ಡ ಕೊಡುಗೆ ನೀಡಿವೆ. ಸೌದಿ ಅರೇಬಿಯಾ, ಕುವೈತ್, ಬಹರೇನ್, ಅಲ್ಜೀರಿಯಾಕ್ಕೆ ತೆರಳಿದ ನಿಯೋಗದಲ್ಲಿ ಒವೈಸಿ ಇದ್ದರು. ಈ ನಿಯೋಗದ ನೇತೃತ್ವವನ್ನು ಬಿಜೆಪಿಯ ಮುಖಂಡ ಬೈಜಯಂತ್ ಪಾಂಡಾ ವಹಿಸಿದ್ದರು.

ಈ ನಿಯೋಗದಲ್ಲಿ ಗುಲಾಂ ನಬಿ ಆಜಾದ್ ಅವರೂ ಇದ್ದರು. ಪಾಕಿಸ್ತಾನದ ಭಯೋತ್ಪಾದಕ ಚಟುವಟಿಕೆಗಳು ಭಾರತದ ಬಹುತ್ವವಾದಿ, ಉದಾರವಾದಿ ಮತ್ತು ಪ್ರಜಾತಂತ್ರವಾದಿ ಸಮಾಜವನ್ನು ಆಪತ್ತಿಗೆ ನೂಕುವ ಯತ್ನ ನಡೆಸುತ್ತಿವೆ ಎಂದು ಈ ನಿಯೋಗವು ಬಲವಾಗಿ ಪ್ರತಿಪಾದಿಸಿತು.

ಜಗತ್ತಿನ ಎಲ್ಲೆಡೆಗಳಿಗೆ ಇಂತಹ ನಿಯೋಗಗಳನ್ನು ಕಳುಹಿಸುವ ಯೋಜನೆ ಸಿದ್ಧಪಡಿಸಿದ್ದಕ್ಕಾಗಿ ಮತ್ತು ಈ ದಿಸೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಕ್ಕಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಮೆಚ್ಚುಗೆ ಸಲ್ಲಬೇಕು.

ಕನಿಮೊಳಿ ಅವರು ನೀಡಿದ 'ವಿವಿಧತೆಯಲ್ಲಿ ಏಕತೆ' ಎನ್ನುವ ಪ್ರತಿಕ್ರಿಯೆಯು ಭಾಷಾ ಬಹುತ್ವಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಭಾರತದ ಸಾಮಾಜಿಕ, ಜನಾಂಗೀಯ, ಆರ್ಥಿಕ, ಧಾರ್ಮಿಕ ಮತ್ತು ಭಾಷಿಕ ಬಹುತ್ವಕ್ಕೆ ಸಾಟಿಯೇ ಇಲ್ಲ. ಭಾರತವು ಜಗತ್ತಿನಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಮಾತ್ರವೇ ಅಲ್ಲ. ಇದು ಅತ್ಯಂತ ಹೆಚ್ಚು ವೈವಿಧ್ಯಮಯವಾಗಿರುವ ಹಾಗೂ ಅತ್ಯಂತ ಹೆಚ್ಚು ಪ್ರಜಾತಾಂತ್ರಿಕವಾಗಿರುವ ದೇಶವೂ ಹೌದು. ಧಾರ್ಮಿಕ, ಭಾಷಿಕ ಮತ್ತು ಇತರ ಅಲ್ಪಸಂಖ್ಯಾತರಿಗೆ ಅನ್ವಯವಾಗುವ ವಿಶಿಷ್ಟವಾದ ಹಕ್ಕುಗಳನ್ನು ಹೊಂದಿರುವ ಸಂವಿಧಾನ ಇರುವ, ನಮ್ಮಷ್ಟು ಪ್ರಜಾತಾಂತ್ರಿಕವಾಗಿರುವ ಇನ್ನೊಂದು ದೇಶ ಇಲ್ಲ.

'ದೇಶ ಮೊದಲು' ಎಂಬುದನ್ನು ಯಾವಾಗ ಹೇಳಬೇಕು ಎನ್ನುವ ಬಗ್ಗೆ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದಲ್ಲಿನ ಇತರ ಕೆಲವರು ಕನಿಮೊಳಿ, ಕಾಂಗ್ರೆಸ್ಸಿಗೆ ಸೇರಿದ ಕೆಲವು ಸಂಸದರು ಮತ್ತು ಇತರ ಪಕ್ಷಗಳ ಸಂಸದರಿಂದ ಕಲಿಯಬೇಕಿದೆ.

ವಾಚಕರ ವಾಣಿ

ರೈಲು ಸೇವೆ ವಿಸ್ತರಿಸಿ

ವಿಜಯಪುರದಿಂದ ಮಂಗಳೂರಿಗೆ ಚಲಿಸುವ ವಿಶೇಷ ರೈಲು ಇನ್ನು ಮುಂದೆ ಸಾಮಾನ್ಯ ರೈಲು ಆಗಿ ಪರಿವರ್ತಿತವಾಗಲಿದೆ. ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬಹಳಷ್ಟು ರೈಲುಗಳಿವೆ. ಆದರೆ, ಕರಾವಳಿಗೆ ನೇರ ರೈಲು ಸೌಲಭ್ಯ ಇಲ್ಲ. ಮಂಗಳೂರಿನಿಂದ ಮಧ್ಯಾಹ್ನ 2.30ಗಂಟೆಗೆ ಹೊರಡುವ ರೈಲು ವಿಜಯಪುರಕ್ಕೆ ಮರುದಿನ ಬೆಳಿಗ್ಗೆ 9ಗಂಟೆಗೆ ತಲುಪುತ್ತದೆ. ಮತ್ತೆ ಅದು ಮಂಗಳೂರಿಗೆ ಹೊರಡುವುದು ಮಧ್ಯಾಹ್ನ 3 ಗಂಟೆಗೆ. ಬೆಳಿಗ್ಗೆ 9ಕ್ಕೆ ವಿಜಯಪುರಕ್ಕೆ ಬರುವ ರೈಲನ್ನು ಕಲಬುರಗಿವರೆಗೆ ವಿಸ್ತರಿಸಿದರೆ ಅದು ಮಧ್ಯಾಹ್ನ 2ರ ವೇಳೆಗೆ ತಲುಪುತ್ತದೆ. ಅಲ್ಲದೆ, ಅಲ್ಲಿಂದ ಸಂಜೆ ಹೊತ್ತಿಗೆ ಅದು ಹೊರಟರೂ ಮಧ್ಯಾಹ್ನ 2ರ ವೇಳೆಗೆ ಮಂಗಳೂರು ತಲುಪುತ್ತದೆ.

ಕಲಬುರಗಿಯಿಂದ ಸೊಲ್ಲಾಪುರದತ್ತ (ಹುಟಗಿ) ತಿರುಗಿಸಿದರೆ ರೈಲಿಗೆ ಒಂದೆರಡು ಗಂಟೆ ಉಳಿಯಲಿದೆ. ಹೈದರಾಬಾದಿನಿಂದ ಹುಬ್ಬಳ್ಳಿಗೆ ಹೋಗುವ ರೈಲು ತುಂಬಾ ಜನಜಂಗುಳಿಯಿಂದ ಕೂಡಿರುತ್ತದೆ. ಸೊಲ್ಲಾಪುರದಿಂದ ಹುಬ್ಬಳ್ಳಿಗೆ ಹಲವು ರೈಲುಗಳಿದ್ದು, ಇದರಿಂದ ಗೋಲ್‌ಗುಂಬಜ್ ರೈಲಿನ ಒತ್ತಡವನ್ನಾದರೂ ಕಡಿಮೆ ಮಾಡಬಹುದು. ಮಂಗಳೂರು–ವಿಜಯಪುರ ರೈಲನ್ನು ಕಲಬುರಗಿಗೆ, ಸಾಧ್ಯವಾದರೆ ಬೀದರ್‌ವರೆಗೆ ವಿಸ್ತರಿಸಿ ಸಾಮಾನ್ಯ ಮತ್ತು ಹೆಚ್ಚುವರಿಯಾಗಿ ಸ್ಲೀಪರ್ ಬೋಗಿ ಜೋಡಿಸಬೇಕಿದೆ.

ತಿರುಪತಿ ನಾಯಕ್, ಕಲಬುರಗಿ

ಖಾಸಗಿ ಬಸ್ ಮೇಲೆ ಕ್ರಮ ಏಕಿಲ್ಲ?

ಆಟೊ ಚಾಲಕರು ನಿಗದಿತ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುವುದು ಹಾಗೂ ನಿರ್ದಿಷ್ಟ ಸ್ಥಳಗಳಿಗೆ ಹೋಗಲು ನಿರಾಕರಿಸುವುದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೂಚಿಸಿರುವುದು ಶ್ಲಾಘನೀಯ. ಈ ಕ್ರಮವು ಖಾಸಗಿ ಬಸ್‌ಗಳಿಗೆ ಅನ್ವಯಿಸುವುದಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಾರಾಂತ್ಯ, ಹಬ್ಬ ಹಾಗೂ ರಜೆ ದಿನಗಳಲ್ಲಿ ಖಾಸಗಿ ಬಸ್ ಮಾಲೀಕರು ಬೇಕಾಬಿಟ್ಟಿಯಾಗಿ ಟಿಕೆಟ್ ದರ ಏರಿಸುವ ಪರಿಪಾಟ ಇದೆ. ಆ ಮೂಲಕ ಪ್ರಯಾಣಿಕರನ್ನು ಆರ್ಥಿಕವಾಗಿ ಶೋಷಿಸುತ್ತಿದ್ದಾರೆ. ಖಾಸಗಿ ಬಸ್ ಮಾಲೀಕರ ಮೇಲೆಯೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ನಮ್ಮ ಸಂವಿಧಾನ ಕಲ್ಪವೃಕ್ಷ

ಬಿಜೆಪಿಯಿಂದ ನಡೆದ 'ತುರ್ತು ಪರಿಸ್ಥಿತಿ'ಯ 50ನೇ ವರ್ಷದ ಕಾರ್ಯಕ್ರಮದಲ್ಲಿ 'ಕಾಂಗ್ರೆಸ್ ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನವನ್ನು ಹತ್ಯೆ ಮಾಡಲು ಹೊರಟಿತ್ತು' ಎಂದು ಖಂಡಿಸಲಾಗಿದೆ. ಆದರೆ, 1977ರಲ್ಲಿ ಸಂವಿಧಾನ ವೃಕ್ಷ ಮತ್ತೆ ಚಿಗುರೊಡೆಯಿತು ಎಂದೇ ಹೇಳಬಹುದು. ಪ್ರಸ್ತುತ ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಂವಿಧಾನದ ಮೂಲ ಆಶಯವಾದ 'ಸಮಾಜವಾದ' ಮತ್ತು 'ಜಾತ್ಯತೀತ' ಪದ ತೆಗೆದುಹಾಕಬೇಕೆಂದು ಹೇಳುತ್ತಾರೆ. ಹಾಗಾದರೆ, ಸಂವಿಧಾನದ ಹತ್ಯೆಗೆ ಹೊರಟಿರುವುದು ಯಾರು? ಕಾಂಗ್ರೆಸ್ಸೋ? ಬಿಜೆಪಿಯೋ? ಅಥವಾ ಎರಡೂ ಸೇರಿಯೋ? ಆದರೆ, ಯಾರಿಂದಲೂ ಅದು ಸಾಧ್ಯವಿಲ್ಲ. ಏಕೆಂದರೆ ಸಂವಿಧಾನವು ಸರ್ವಜನಾಂಗದ ಶಾಂತಿಯ ತೋಟದ ಕಲ್ಪವೃಕ್ಷ!

ಪ್ರೊ.ಶಿವರಾಮಯ್ಯ, ಬೆಂಗಳೂರು

ಅಸ್ಪೃಶ್ಯತೆಯ ಕರಿನೆರಳು

ರವೀಂದ್ರ ಭಟ್ಟ ಅವರ ರಟ್ಟಾದ 'ಒಳ'ಗುಟ್ಟು ಲೇಖನವು (ಪ್ರ.ವಾ., ಜೂನ್ 28) ಓದುಗರನ್ನು ಚಿಂತನೆಗೆ ಹಚ್ಚಿತು. ಅಸ್ಪೃಶ್ಯತೆ ನಿರ್ಮೂಲನೆಗೆ ಅಂಬೇಡ್ಕರ್ ತಮ್ಮ ಜೀವಮಾನವೆಲ್ಲಾ ಹೋರಾಡಿದರು. ಈಗ ಒಳಮೀಸಲಾತಿ ಸಮೀಕ್ಷೆ ಸಂದರ್ಭದಲ್ಲಿ ಅಸ್ಪೃಶ್ಯತೆಯ ಕರಿನೆರಳಿನಲ್ಲಿ ದಲಿತರು ನರಳುತ್ತಿರುವುದು ದುರಂತ.

ಅಸ್ಪೃಶ್ಯತೆ ತೊಲಗಬೇಕೆಂದರೆ 'ನಾವೇ ಮೇಲು ಜಾತಿಯವರು' ಎಂಬ ಭ್ರಮೆಯಲ್ಲಿ ಮುಳುಗಿರುವ ಜಾತಿವಾದಿಗಳನ್ನು ಆ ಭ್ರಮೆಯಿಂದ ಹೊರತರುವ ಕೆಲಸ ಆಗಬೇಕಿದೆ. ಈ ಕೆಲಸ ಅಷ್ಟು ಸುಲಭವೂ ಅಲ್ಲ. ಮೇಲು ವರ್ಗದವರು ಎಂದು ಭ್ರಮಿಸಿಕೊಂಡವರನ್ನು ಎಚ್ಚರಿಸಲು ಅಂಬೇಡ್ಕರ್ ಅವರಂತಹ ನೂರು ಮಹನೀಯರು ಬರಬೇಕೇನೋ ಎನ್ನುವ ಮಾತು ನೂರರಷ್ಟು ಸತ್ಯ.

ಗಣಪತಿ ಗೋ ಚಲವಾದಿ, ವಿಜಯಪುರ

ಶಾಲೆ ಕೊಠಡಿ ನಿರ್ಮಾಣಕ್ಕೆ ಹಣವಿಲ್ಲ

'ಸೋರುವ ಕೊಠಡಿಯಲ್ಲೇ ಕಲಿಕೆ!' ವರದಿಯು (ಪ್ರ.ವಾ., ಜೂನ್ 29) ಸಕಾಲಿಕವಾಗಿದೆ. ಜಾತ್ರೆ, ರಥೋತ್ಸವ, ಹೊಸ ದೇವಸ್ಥಾನ, ಸನ್ಮಾನ ಕಾರ್ಯಕ್ರಮ-ಗಳಿಗೆ ಸರ್ಕಾರವು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತದೆ. ಆದರೆ, ಮಕ್ಕಳ ಭವಿಷ್ಯ ಕಟ್ಟಿಕೊಡುವ ದಿಸೆಯಲ್ಲಿ ಶಾಲೆಗಳಿಗೆ ಮೂಲ ಸೌಲಭ್ಯ ಕಲ್ಪಿಸಿಕೊಡಲು ಮನಸ್ಸು ಬರುವುದೇ ಇಲ್ಲ. ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದುವ ಮಕ್ಕಳ ಸ್ಥಿತಿ ತೀರಾ ಶೋಚನೀಯ. ಶಿಕ್ಷಕರು ಮಕ್ಕಳಿಗೆ ಬೋಧಿಸುವುದನ್ನು ಬಿಟ್ಟು ಬೇರೆ ಎಲ್ಲಾ ಕೆಲಸವನ್ನೂ ಮಾಡಬೇಕಾಗಿದೆ. ಕಳಪೆ ಫಲಿತಾಂಶಕ್ಕೆ ಜವಾಬ್ದಾರಿಯನ್ನೂ ಹೊರ-ಬೇಕಾಗಿರುವುದು ವಿಪರ್ಯಾಸ.

ಶಾಂತವೀರ ಎಸ್., ಚಿತ್ರದುರ್ಗ

ಹೃದಯಾಘಾತ: ಸಂಶೋಧನೆಯಾಗಲಿ

ಭಾರತೀಯ ಹೃದಯ ವಿಜ್ಞಾನ ಸೊಸೈಟಿಯ ಮೈಸೂರು ಶಾಖೆಯು 40 ವರ್ಷಕ್ಕಿಂತ ಕಡಿಮೆ ವಯೋಮಾನದವರು ಹೃದಯಾಘಾತಕ್ಕೆ ಒಳಗಾಗುತ್ತಿರುವ ಬಗ್ಗೆ ಕಾರಣಗಳನ್ನು ಪತ್ತೆಹಚ್ಚಿ ವಿಶ್ಲೇಷಣೆ ಮಾಡಲು ವಿಶೇಷ ಯೋಜನೆ ರೂಪಿಸಿರುವುದು ಉತ್ತಮ ನಿರ್ಧಾರ. ಆರೋಗ್ಯವಂತ ಮತ್ತು ಯಾವುದೇ ದುಶ್ಚಟ ಇಲ್ಲದವರು ಹೃದಯಾಘಾತಕ್ಕೆ ಬಲಿ ಆಗುತ್ತಿರುವುದು ದುರದೃಷ್ಟಕರ. ಆರೋಗ್ಯ ವಿಜ್ಞಾನಕ್ಕೂ ಸವಾಲಾಗಿದೆ. ತಜ್ಞರು ಈ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡಬೇಕಿದೆ.

ವಿ. ತಿಪ್ಪೇಸ್ವಾಮಿ, ಹಿರಿಯೂರು

ಜಾಲಡಬ್ಬಿ

ಜನರ ಜೀವ ಅಗ್ಗವೇ?

ಒಡಿಶಾದ ಪುರಿ ಜಗನ್ನಾಥ ರಥಯಾತ್ರೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೂವರು ಮೃತಪಟ್ಟಿದ್ದಾರೆ. ಒಂದು ಕಾಲ್ತುಳಿತ ಘಟನೆ ಮಾಸುವ ಮುನ್ನವೇ ಮತ್ತೊಂದು ನಡೆದಿದ್ದು, ಜನರ ಜೀವವು ಅಷ್ಟೊಂದು ಅಗ್ಗವಾಗಿದೆಯೇ? ಜನಜಂಗುಳಿ ನಿಯಂತ್ರಣಕ್ಕೆ ಎಂದಾದರೂ ಒತ್ತು ನೀಡಲಾಗುತ್ತಿದೆಯೇ? ಜನರ ಸುರಕ್ಷತೆಗಿಂತ ಧಾರ್ಮಿಕ ನಂಬಿಕೆಗೆ ಆದ್ಯತೆ ನೀಡಬೇಕೆ? ಇಲ್ಲಿ ಯಾರನ್ನು ದೂಷಿಸುವುದು? ಭಕ್ತರನ್ನೋ ಅಥವಾ ಆಡಳಿತವನ್ನೋ?

ರಾಜ್‌ದೀಪ್ ಸರ್‌ದೇಸಾಯಿ, ಪತ್ರಕರ್ತ, 'ಎಕ್ಸ್'ನಿಂದ

ಕಿಡಿನುಡಿ

ನಾನು, ಮಾಧುಸ್ವಾಮಿ, ಇನ್ನೊಬ್ಬ ಸ್ವಾಮಿ, ಯಾರೂ ಪಕ್ಷಕ್ಕೆ ಅನಿವಾರ್ಯವಲ್ಲ. ಸಿದ್ದರಾಮಯ್ಯನವರು ಸ್ನೇಹಿತರಾದ ಕಾರಣ ಅವರನ್ನು ಮಾಧುಸ್ವಾಮಿ ಭೇಟಿಯಾಗಿದ್ದಾರೆ. ಈ ವಿಷಯವನ್ನು ದೊಡ್ಡದು ಮಾಡುವ ಅಗತ್ಯ ಇಲ್ಲ.

ವಿ. ಸೋಮಣ್ಣ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 30-6-2000

• **ಐ.ಟಿ. ಪಾರ್ಕ್: 2ನೇ ಹಂತಕ್ಕೆ ಶೀಘ್ರ ಒಪ್ಪಂದ**

ಬೆಂಗಳೂರು, ಜೂನ್ 29– ನಗರಕ್ಕೆ ಸಮೀಪದ ವೈಟ್‌ಫೀಲ್ಡ್‌ನಲ್ಲಿ ಸುಮಾರು ರೂ. 650 ಕೋಟಿ ವೆಚ್ಚದಲ್ಲಿ ಎರಡನೇ ಹಂತದ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಪಾರ್ಕ್ (ಐ.ಟಿ. ಪಾರ್ಕ್) ನಿರ್ಮಾಣದಲ್ಲಿ ಪಾಲ್ಗೊಳ್ಳಲು ಸಿಂಗಪುರದ ಜುರಾಂಗ್ ಟೌನ್ ಕಾರ್ಪೊರೇಷನ್ ಮುಂದೆ ಬಂದಿದ್ದು, ಮುಂದಿನ ತಿಂಗಳು ರಾಜ್ಯ ಸರ್ಕಾರದ ಜೊತೆ ಅದು ಒಪ್ಪಂದಕ್ಕೆ ಸಹಿ ಹಾಕಲಿದೆ.

ಮೂರು ದಿನಗಳ ಸಿಂಗಪುರದ ಭೇಟಿ ನಂತರ ನಗರಕ್ಕೆ ಇಂದು ಆಗಮಿಸಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಈ ವಿಷಯ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 30-6-1950

• **ಸೆಂಟ್ರಲ್ ಕಾಲೇಜಿನಲ್ಲಿ ಸ್ಥಳ ಅಭಾವ**

ಬೆಂಗಳೂರು, ಜೂನ್ 29– ಸೆಂಟ್ರಲ್ ಕಾಲೇಜಿನಲ್ಲಿ ಸೀಟುಗಳು ದೊರಕದೆ ನಿರಾಶೆಗೊಂಡಿರುವ ಸುಮಾರು 100 ವಿದ್ಯಾರ್ಥಿಗಳು ತಮಗೂ ಮತ್ತು ಅದೇ ರೀತಿ ನಿರಾಶೆಗೊಂಡಿರುವ 500 ವಿದ್ಯಾರ್ಥಿಗಳಿಗೂ ಸೀಟುಗಳನ್ನು ದೊರಕಿಸಿಕೊಳ್ಳುವ ಸಂದರ್ಭದಲ್ಲಿ ಶಿಕ್ಷಣ ಸಚಿವ ಟಿ.ಸಿದ್ದಲಿಂಗಯ್ಯ ಅವರನ್ನು ಕಾಣಲು ಇಂದು ಮಧ್ಯಾಹ್ನ ಅಠಾರಾ ಕಚೇರಿಗೆ ಬಂದರು.

ಅನಾರೋಗ್ಯ ನಿಮಿತ್ತ ಶಿಕ್ಷಣ ಸಚಿವರು ಕಚೇರಿಗೆ ಬಂದಿರಲಿಲ್ಲ.

ಚುರುಮುರಿ

ಕಲಿಯಲಾಗದ ವಿದ್ಯೆ

• ಸುಮಂಗಲಾ

'ಈ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡೋವ್ರು ಏನು ಕಲಿತಿರತಾರೆ?' ಬೆಕ್ಕಣ್ಣ ಘನಗಂಭೀರವಾಗಿ ಪ್ರಶ್ನಿಸಿತು.

'ಒನ್ ಸೈಜ್, ಫಿಟ್ಸ್ ಆಲ್ ಅಂತ ಇರಂಗಿಲ್ಲಲೇ. ಎಷ್ಟಕೊಂದು ಇಲಾಖೆಗಳು, ಎಷ್ಟೊಂದು ಬಗೆಯ ಹುದ್ದೆಗಳದಾವು... ಎಲ್ಲಾದಕ್ಕೆ ಬ್ಯಾರೆ ಬ್ಯಾರೆ ವಿದ್ಯಾರ್ಹತೆ ಬೇಕು' ಎಂದೆ.

'ಬರೇ ವಿದ್ಯಾರ್ಹತೆ ಸಾಲಂಗಿಲ್ಲ... ಛಲೋತ್ನಾಗಿ ರನ್ನಿಂಗ್ ರೇಸ್ ಪ್ರಾಕ್ಟೀಸ್ ಮಾಡಿರಬಕು!' ಎಂದ ಬೆಕ್ಕಣ್ಣ ಸುದ್ದಿ ತೋರಿಸಿತು.

'ನೋಡಿಲ್ಲಿ... ಮುಳಬಾಗಿಲಿನ ಕಂದಾಯ ಇಲಾಖೆ ಕಚೇರಿಗೆ ಲೋಕಾಯುಕ್ತ ಪೊಲೀಸರು ದಾಳಿ ಮಾಡತಿದ್ದಂಗೆ ಲಂಚ ತಗೋತಿದ್ದ ಒಬ್ಬಾಕಿ ಕಚೇರಿಯಿಂದ ಓಟ ಕಿತ್ತಳಂತೆ' ಎಂದು ವಿವರಿಸಿತು.

'ಆಕಿ ಮ್ಯಾರಥಾನ್ ಪ್ರಾಕ್ಟೀಸ್ ಮಾಡಿರಬಕು ಬಿಡು!' ಎಂದು ನಕ್ಕೆ. 'ಅದೇ ಮತ್ತೆ... ಲಂಚಾವತಾರದ ವಿವಿಧ ಪಟ್ಟುಗಳನ್ನು ಕಲಿತಿರಬಕು'.

'ಅಷ್ಟೇ ಮುಖ್ಯ ಅಂದ್ರ ಲಂಚದ ದುಡ್ಡನ್ನು ಎಲ್ಲೆಲ್ಲಿ ಹೆಂಗೆ ವಿನಿಯೋಗಿಸಬಹುದು... ಎಲ್ಲಿ ಹೊಲ, ತೋಟ ತಗೋಬೇಕು, ಎಲ್ಲೆಲ್ಲಿ ಮನಿ, ಸೈಟ್ ಬೇನಾಮಿ ಹೆಸರಿನಲ್ಲಿ ತಗೋಬಕು... ಇದಕ್ಕೆಲ್ಲ ಭಯಂಕರ ತೆಲಿ ಓಡಿಸಬೇಕಾಗತೈತಿ' ಎಂದೆ.

'ಇಷ್ಟೆಲ್ಲ ಆಸ್ತಿ ತಂಗಡ ಮ್ಯಾಲೂ ಲಕ್ಷಗಟ್ಟಲೆ ಕ್ಯಾಶ್ ಉಳಿದಿರತೈತಲ್ಲ... ಚಿನ್ನ, ಬೆಳ್ಳಿ ತಗಂಡು ಮನ್ಯಾಗೆ ಎಲ್ಲಿ ಬಚ್ಚಿಡಬಕು... ಇನ್ನೂ ಉಳಿದ ರೊಕ್ಕ ಎಲ್ಲಿ ಬಚ್ಚಿಡಬಕು... ಬಚ್ಚಲು, ಟಾಯ್ಲೆಟ್, ಸಿಂಕ್, ದೇವರ ಗೂಡಿನ ನೆಲದೊಳಗೆ, ಗ್ವಾಡಿ ಟೈಲ್ಸ್‌ವಳಗೆ ಹಿಂಗೆ ಅಗದಿ ಆಯಕಟ್ಟಿನ ಜಾಗಗಳನ್ನು ಹುಡುಕಿ ರೊಕ್ಕ ಬಚ್ಚಿಡೂ ಕಲೆಯನ್ನು ಅವರು ಸ್ವತಃ ಕಲೀತಾರ. ಈ ಸ್ವಕಲಿಕೆಯಲ್ಲಿ ಯಾರೂ ಅವರನ್ನು ಮೀರಿಸಲಾರರು' ಬೆಕ್ಕಣ್ಣ ಉದ್ಗರಿಸಿತು.

'ಲೋಕಾ ದಾಳಿಯಲ್ಲಿ ಸಿಕ್ಕುಬಿದ್ದ ಮ್ಯಾಗೆ ಯಾರನ್ನು ಹಿಡಿದು, ಹೆಂಗೆ ಬಚಾವಾಗಬಕು ಅನ್ನೂದನ್ನು ಸ್ವತಃ ಕಲಿತು, ಕರತಲಾಮಲಕ ಮಾಡಿಕೊಂಡಿರತಾರೆ! ಹಿಂಗಾಗಿ ಲೋಕಾ ದಾಳಿಯಲ್ಲಿ ಸಿಕ್ಕುಬಿದ್ದವರಿಗೆ ಆಮೇಲೆ ಏನು ಶಿಕ್ಷೆಯಾತು, ಆ ರೊಕ್ಕ, ಆಸ್ತಿಪಾಸ್ತಿ ಏನಾತು ಅಂತ ಶ್ರೀಸಾಮಾನ್ಯರಿಗೆ ತಿಳಿಯಂಗೇ ಇಲ್ಲ' ಎಂದೆ.

'ಆದ್ರೂ ಪಾಪ... ಇಷ್ಟೆಲ್ಲ ಅಕ್ರಮವಾಗಿ ಸಂಪಾದಿಸಿದ ಆಸ್ತಿ, ರೊಕ್ಕ, ಬಂಗಾರ ಎಲ್ಲಾನೂ ಸತ್ತ ಮ್ಯಾಗೆ ಇಲ್ಲೇ ಬಿಟ್ಟು ಹೋಗಬೇಕಾಗತದೆ. ತಮ್ಮ ಹೆಣದ ಜೊತಿಗೇ ಇವನ್ನೆಲ್ಲ ಹೆಂಗ ತಗಂಡು ಹೋಗದು ಅನ್ನೋ ವಿದ್ಯೆ ಮಾತ್ರ ಅವರು ಕಲಿಯಕ್ಕೇ ಆಗಂಗಿಲ್ಲ!' ಎಂದು ಬೆಕ್ಕಣ್ಣ ತತ್ವಜ್ಞಾನ ನುಡಿಯಿತು.

ಸಂಗತ

ಹೊಸ ಸಾಧ್ಯತೆಗಳ 'ಕ್ಷುದ್ರ ಗ್ರಹ ಗಣಿಗಾರಿಕೆ'

ಮನುಷ್ಯನ ಕಣ್ಣೀಗ ಕ್ಷುದ್ರ ಗ್ರಹಗಳ ಮೇಲೆ ಬಿದ್ದಿದೆ. ಅವುಗಳಲ್ಲಿ ಇರುವ ವಿರಳ ಲೋಹಗಳ ಅಪಾರ ನಿಕ್ಷೇಪವನ್ನು ಹೆಕ್ಕುವ ಪ್ರಯತ್ನಗಳು ಆರಂಭವಾಗಿವೆ

• ಗುರುರಾಜ್ ಎಸ್. ದಾವಣಗೆರೆ

ಲ್ಯಾಪ್‌ಟಾಪ್, ಮೊಬೈಲ್ ಮತ್ತು ಎಲೆಕ್ಟ್ರಿಕ್ ವಾಹನಗಳ ಲೀಥಿಯಂ ಅಯಾನ್ ಬ್ಯಾಟರಿಗೆ ಬೇಕಾದ ಕೊಬಾಲ್ಟ್ ಲೋಹದ ನಿಕ್ಷೇಪಗಳು ಕ್ಷುದ್ರ ಗ್ರಹಗಳಲ್ಲಿ ಹೇರಳವಾಗಿವೆ. ಹಾಗಾಗಿ, ಆಗೊಮ್ಮೆ ಈಗೊಮ್ಮೆ ಭೂಮಿಯ ವಾತಾವರಣಕ್ಕೆ ನುಗ್ಗಿ, ಅಪ್ಪಳಿಸಿ ಅಪಾಯ ತಂದೊಡ್ಡುವ ಕ್ಷುದ್ರ ಗ್ರಹಗಳನ್ನು ಇಲ್ಲಿಯವರೆಗೆ ವಿಲನ್‌ನಂತೆ ನೋಡುತ್ತಿದ್ದವರು ಈಗ ಅವುಗಳ ಕಡೆಗೆ ಪ್ರೀತಿ ತೋರಿಸುತ್ತಿದ್ದಾರೆ.

ಶಿಲೆ ಮತ್ತು ಲೋಹಗಳಿಂದ ಕೂಡಿರುವ ಕ್ಷುದ್ರ ಗ್ರಹಗಳು ಮಂಗಳ ಮತ್ತು ಗುರು ಗ್ರಹಗಳ ನಡುವಿನ ಕಕ್ಷೆಯಲ್ಲಿ ಸೂರ್ಯನ ಸುತ್ತ 20 ಕೋಟಿಯಿಂದ 80 ಕೋಟಿ ಕಿ.ಮೀ. ದೂರದಲ್ಲಿ ಸುತ್ತುತ್ತಿವೆ. ಒಂದು ಅಡಿಯಿಂದ ನೂರು ಕಿ.ಮೀ. ಗಟ್ಟಲೆ ವ್ಯಾಸ ಹೊಂದಿರುವ 20 ಲಕ್ಷ ಕ್ಷುದ್ರ ಗ್ರಹಗಳು ನಮ್ಮ ಸೌರಮಂಡಲದಲ್ಲಿ ಇರಬಹುದು ಎಂಬ ಲೆಕ್ಕಾಚಾರವಿದೆ. ಇವುಗಳ ಪೈಕಿ ಶೇ 8ರಷ್ಟು ಕ್ಷುದ್ರ ಗ್ರಹಗಳಲ್ಲಿ ಅಪರೂಪದ ಲೋಹಗಳಿವೆ. 30 ಮೀಟರ್ ಉದ್ದದ ಪ್ಲಾಟಿನಂಯುಕ್ತ ಕ್ಷುದ್ರ ಗ್ರಹದಲ್ಲಿ 70ರಿಂದ 100 ಶತಕೋಟಿ ಡಾಲರ್ ಮೌಲ್ಯದ ಪ್ಲಾಟಿನಂ ಇರುತ್ತದೆ ಎಂದು 'ಕೆಕ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸ್ಟಡೀಸ್' ವರದಿ ಮಾಡಿದೆ.

ಕ್ಷುದ್ರ ಗ್ರಹಗಳಲ್ಲಿ ಎಂ ಟೈಪ್ (ಮೆಟಾಲಿಕ್), ಸಿ ಟೈಪ್ (ಕಾರ್ಬನೇಶಿಯಸ್) ಮತ್ತು ಎಸ್ ಟೈಪ್ (ಕಲ್ಲಿನ) ಎಂಬ ಮೂರು ವಿಧಗಳಿವೆ. ಎಂ ಟೈಪ್ ಕ್ಷುದ್ರ ಗ್ರಹಗಳಲ್ಲಿ ವಿರಳಲೋಹಗಳಾದ ಪ್ಲಾಟಿನಂ, ಪಲೇಡಿಯಂ, ರೋಡಿಯಂ, ಬೆಳ್ಳಿ, ಬಂಗಾರ, ಕೊಬಾಲ್ಟ್, ನಿಕ್ಕಲ್ ಮತ್ತು ಕಬ್ಬಿಣದ ಅದಿರುಗಳ ಖಜಾನೆಯೇ ಇದೆ. ಭೂಮಿಯ ಆಳದ ಅದಿರಿನ ಗಣಿಗಾರಿಕೆಯಿಂದ ಬಹಳಷ್ಟು ಅಪಾಯಗಳಿವೆ. ಹಾಗಾಗಿ, ಆಕಾಶ ಕಾಯಗಳಲ್ಲಿ ಗಣಿಗಾರಿಕೆ ನಡೆಸಿದರೆ ಹೇಗೆ ಎಂಬ ಆಲೋಚನೆಯಲ್ಲಿ, ಪ್ರತಿಷ್ಠಿತ ದೇಶಗಳ ಕಾರ್ಪೊರೇಟ್ ಉದ್ಯಮಗಳು ಬಾಹ್ಯಾಕಾಶ ಗಣಿಗಾರಿಕೆಗೆ ಒಲವು ತೋರುತ್ತಿವೆ. ಆಸ್ಟ್ರೋ ಫೋರ್ಜ್, ಟ್ರಾನ್ಸ್ ಆಸ್ಟ್ರೋನಾಟಿಕ ಕಾರ್ಪೊರೇಷನ್ ಮತ್ತು ಕಾರ್ಮನ್ ಪ್ಲಸ್ ಕಂಪನಿಗಳು ತಮ್ಮ ಗಣಿ ತಂತ್ರಜ್ಞಾನವನ್ನು ಆಕಾಶಕಾಯಗಳ ಮೇಲೆ ಪ್ರಯೋಗಿಸುವ ತರಾತುರಿಯಲ್ಲಿವೆ.



2023ರ ಅಕ್ಟೋಬರ್‌ನಲ್ಲಿ ಬಾಹ್ಯಾಕಾಶದಲ್ಲಿ ನಡೆಸಬಹುದಾದ ಆರ್ಥಿಕ ಚಟುವಟಿಕೆಗಳ ಕುರಿತು ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಸರಣಿ ಲೇಖನಗಳು ಪ್ರಕಟಗೊಂಡವು. ಲೇಖನ ಬರೆದವರು ವಿಜ್ಞಾನಿಗಳಲ್ಲ, ಆರ್ಥಿಕ ತಜ್ಞರು! ಸೌರ ಫಲಕ, ಪವನ ವಿದ್ಯುತ್ ಉತ್ಪಾದನೆಯ ಟರ್ಬೈನ್ ಮತ್ತು ಎಲೆಕ್ಟ್ರಿಕ್ ವಾಹನಗಳಲ್ಲಿ ಬಳಸುವ ವಿರಳಲೋಹಗಳ ದೊಡ್ಡ ದಾಸ್ತಾನು ಕ್ಷುದ್ರ ಗ್ರಹಗಳಲ್ಲಿದೆ ಎಂದು ಕೋಲರಾಡೊ ಸ್ಕೂಲ್ ಆಫ್ ಮೈನ್ಸ್‌ನ ಪ್ರೊ. ಇಯಾನ್ ಲಾಂಗೆ ತಮ್ಮ ಸಂಶೋಧನಾ ಅಧ್ಯಯನದಲ್ಲಿ ತಿಳಿಸಿದ್ದರು.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ತಜ್ಞರೊಬ್ಬರ ಸಹಯೋಗದಲ್ಲಿ ಸಂಶೋಧನಾ ವರದಿ ತಯಾರಿಸಿರುವ ಲಾಂಗೆ, ಮುಂದಿನ 30–40 ವರ್ಷಗಳಲ್ಲಿ ಭೂ ಗಣಿಗಾರಿಕೆಗಿಂತ ಆಕಾಶಕಾಯಗಳ ಗಣಿಗಾರಿಕೆ ಹೆಚ್ಚಾಗಲಿದೆ ಹಾಗೂ ಕ್ಷುದ್ರ ಗ್ರಹ ಗಣಿಗಾರಿಕೆ ವೆಚ್ಚವು ಭೂ ಗಣಿಗಾರಿಕೆಯ ಖರ್ಚಿಗಿಂತ ಕಡಿಮೆ ಇರಲಿದೆ ಎಂದಿದ್ದಾರೆ.

ಸದ್ಯದ ಅಂದಾಜಿನ ಪ್ರಕಾರ ಉತ್ಪಾದನಾ ವಲಯಕ್ಕೆ ವಾರ್ಷಿಕ 10 ಲಕ್ಷ ಟನ್ ಕೊಬಾಲ್ಟ್ ಮತ್ತು ನಿಕ್ಕಲ್ ಲೋಹಗಳ ಅವಶ್ಯಕತೆ ಇದೆ. ಭೂಮಿಯ ಮೇಲೆ ಕೊಬಾಲ್ಟ್ ಗಣಿಗಳು ಕಾಂಗೊ ಗಣರಾಜ್ಯದಲ್ಲಿವೆ. ಜಗತ್ತಿನ ಶೇ 70ರಷ್ಟು ಕೊಬಾಲ್ಟ್ ಅಲ್ಲಿಂದಲೇ ದೊರಕುತ್ತಿದೆ. ಇಂಡೊನೇಷ್ಯಾ, ರಷ್ಯಾ, ಫಿಲಿಪ್ಪೀನ್ಸ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ನಿಕ್ಕಲ್ ನಿಕ್ಷೇಪಗಳು ಹೆಚ್ಚಾಗಿವೆ. ಭೂಮಿ ಮತ್ತು ಸಾಗರ ಗಣಿಗಾರಿಕೆಯಿಂದ ಜೀವರಾಶಿಗೆ ದೊಡ್ಡ ಅಪಾಯಗಳಿರುವಾಗ, ಭೂಮಿಯಿಂದ ದೂರವಿರುವ ಕ್ಷುದ್ರ ಗ್ರಹ ಗಣಿಗಾರಿಕೆ ಕ್ಷೇಮ ಎನ್ನುವ ಅಭಿಪ್ರಾಯ ಬಲವಾಗುತ್ತಿದೆ.

ಬಾಹ್ಯಾಕಾಶ ಕರಾರುಗಳ ಪ್ರಕಾರ ಭೂಮಿ ಮೇಲಿನ ಆಕಾಶದಲ್ಲಿ ಇಂತಿಷ್ಟು ಜಾಗ ನನ್ನದು ಎಂದು ಯಾರೂ ಅಧಿಕಾರ ಚಲಾಯಿಸುವಂತಿಲ್ಲ. ಆದರೆ, ತಾವು ನಡೆಸುವ ಪ್ರಯೋಗ ಮತ್ತು ಕೆಲಸಗಳಿಗಾಗಿ ಒಂದು ಕ್ಷೇಮಕರ ವಲಯವನ್ನು ರೂಪಿಸಿಕೊಳ್ಳಬಹುದು. ಸದ್ಯಕ್ಕೆ ಬಾಹ್ಯಾಕಾಶದಲ್ಲಿ ಯಾವುದೇ ಬಗೆಯ ಉತ್ಪನ್ನಗಳು ವಾಣಿಜ್ಯ ಪ್ರಮಾಣದಲ್ಲಿ ತಯಾರಾಗುತ್ತಿಲ್ಲ. ಪ್ರಯೋಗಕ್ಕಾಗಿ ತರಕಾರಿ ಬೆಳೆದಿದ್ದೇವೆ. 3ಡಿ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿ ಚಿಕ್ಕ ವಸ್ತುಗಳನ್ನು ಸೃಷ್ಟಿಸಿದ್ದೇವೆ. ಕ್ಷುದ್ರ ಗ್ರಹಗಳು ನಮಗೆ ಡಿಕ್ಕಿ ಹೊಡೆಯುವುದಿರಲಿ ನಾವೇ ಅವುಗಳಿಗೆ ನಮ್ಮ ಆಕಾಶನೌಕೆಯನ್ನು ಡಿಕ್ಕಿ ಹೊಡೆಸಿದರೆ ಏನಾಗುತ್ತದೆ ಎಂಬ ಪ್ರಯೋಗವನ್ನು ಮಾಡಿ ಹೊಸ ದಾಖಲೆ ಬರೆದಿದ್ದೇವೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಅವುಗಳ ಮೇಲೆ ನಾಜೂಕಾಗಿ ನೌಕೆಗಳನ್ನು ಇಳಿಸಿದ್ದೇವೆ ಹಾಗೂ ಅಲ್ಲಿನ ದೂಳು, ಮಣ್ಣು, ಬೆಣಚುಕಲ್ಲುಗಳನ್ನು ಭೂಮಿಗೆ ತಂದು ಕೂಲಂಕಷ ಅಧ್ಯಯನ ಮಾಡಿದ್ದೇವೆ. ಕೃತಕ ಉಪಗ್ರಹಗಳಿಂದ ಚಿತ್ರ ರವಾನೆ ಮತ್ತು ಜಿಪಿಎಸ್ ತಂತ್ರಜ್ಞಾನಗಳು ಬಾಹ್ಯಾಕಾಶ ಗಣಿಗಾರಿಕೆಗೂ ನೆರವು ನೀಡಲಿವೆ.

ವಿಶ್ವದ ಅನೇಕ ಕಂಪನಿಗಳು ಕ್ಷುದ್ರ ಗ್ರಹಗಳಲ್ಲಿ ಗಣಿಗಾರಿಕೆಗೆ ದೊಡ್ಡ ಬಂಡವಾಳ ಹೂಡಲು ಸಜ್ಜಾಗಿವೆ. ಅವರು ಮಾಡುವ ಗಣಿಗಾರಿಕೆಯಿಂದ ಭೂಮಿಯ ಆರೋಗ್ಯ ಕೆಡದಿದ್ದರೆ ಸಾಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉಸಿರು ಚೆಲ್ಲುತ್ತಲೇ ಇವೆ ವ್ಯಾಘ್ರಗಳು

58 ದೇಶದಲ್ಲಿರುವ ಹುಲಿ ಸಂರಕ್ಷಿತ ಪ್ರದೇಶಗಳು

5 ಕರ್ನಾಟಕದಲ್ಲಿರುವ ಹುಲಿ ಸಂರಕ್ಷಿತ ಪ್ರದೇಶಗಳು

1.38 ಲಕ್ಷ ಚದರ ಕಿ.ಮೀ ದೇಶದಲ್ಲಿರುವ ಹುಲಿ ಸಂರಕ್ಷಿತ ಪ್ರದೇಶಗಳ ಒಟ್ಟು ವಿಸ್ತೀರ್ಣ

ಪ್ರಜಾವಾಣಿ ವಾರ್ತೆ

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಧಾಮದಲ್ಲಿ ತಾಯಿ ಹುಲಿ ಮತ್ತು ನಾಲ್ಕು ಮರಿಗಳು ಸೇರಿದಂತೆ ಒಂದೇ ದಿನ ಐದು ಹುಲಿಗಳು ಮೃತಪಟ್ಟಿರುವುದು ಅರಣ್ಯ ಇಲಾಖೆ, ವನ್ಯಪ್ರಿಯರು ಬೆಚ್ಚಿಬೀಳುವಂತೆ ಮಾಡಿದೆ. ವಿಷಪ್ರಾಶನದಿಂದ ವ್ಯಾಘ್ರಗಳು ಸತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಆರೋಪಿಗಳ ಬಂಧನವೂ ಆಗಿದೆ. ಜಗತ್ತಿನಲ್ಲೇ ಅತಿ ಹೆಚ್ಚು (3,682) ಹುಲಿಗಳನ್ನು ಹೊಂದಿರುವ ರಾಷ್ಟ್ರ ಎಂಬ ಹೆಗ್ಗಳಿಕೆ ಹೊಂದಿರುವ ಭಾರತದಲ್ಲಿ ಅವುಗಳ ಸಾವಿನ ಪ್ರಮಾಣವೂ ಗಣನೀಯವಾಗಿದೆ. ದೇಶದಲ್ಲೇ ಹೆಚ್ಚು ವ್ಯಾಘ್ರಗಳಿರುವ ಎರಡನೇ ರಾಜ್ಯ ಎಂಬ ಕೀರ್ತಿಗೆ ಭಾಜನರಾಗಿರುವ ಕರ್ನಾಟಕದಲ್ಲಿ ಹುಲಿಗಳ ಸಾವಿನ ಸಂಖ್ಯೆಯೂ ಹೆಚ್ಚು. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಅಂಕಿ ಅಂಶಗಳ ಪ್ರಕಾರ, ರಾಜ್ಯ ಮೂರನೇ ಸ್ಥಾನದಲ್ಲಿದೆ. ನಾಗರಹೊಳೆಯು ದೇಶದ ಹುಲಿ ಸಂರಕ್ಷಿತ ಪ್ರದೇಶಗಳ ಪೈಕಿ ಹುಲಿ ಸಾವಿನ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ. ದೇಶದಲ್ಲಿಯೇ ಹೆಚ್ಚು ಹುಲಿಗಳನ್ನು ಹೊಂದಿರುವ ಮಧ್ಯಪ್ರದೇಶ, ವ್ಯಾಘ್ರಗಳ ಸಾವಿನಲ್ಲೂ ಮೊದಲನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ.

ಒಂದೂವರೆ ದಶಕದಲ್ಲಿ ದೇಶದಲ್ಲಿ ಹುಲಿಗಳ ಸಂಖ್ಯೆ ದುಪ್ಪಟ್ಟು ಆಗಿದೆ. ಸರ್ಕಾರದ ಪ್ರಕಾರ, ವಾರ್ಷಿಕವಾಗಿ ಹುಲಿಗಳ ಸಂಖ್ಯೆಯಲ್ಲಿ ಶೇ 6ರಷ್ಟು ಹೆಚ್ಚಳವಾಗುತ್ತಿದೆ. ರಾಷ್ಟ್ರೀಯ ಪ್ರಾಣಿಯಾಗಿರುವ ಹುಲಿಯ ಸಂರಕ್ಷಣೆಗೆ 'ಹುಲಿ ಯೋಜನೆ' ಇದ್ದಾಗ್ಯೂ, ಪ್ರತಿ ವರ್ಷ ಗಣನೀಯ ಪ್ರಮಾಣದಲ್ಲಿ ಹುಲಿಗಳು ಸಾಯುತ್ತಿವೆ. ರಾಜ್ಯಗಳು ಅಧಿಕೃತವಾಗಿ ವರದಿ ಮಾಡಿದ ಪ್ರಕರಣಗಳ ವಿವರಗಳು ಮಾತ್ರ ಎನ್‌ಟಿಸಿಎ ಬಳಿ ಇದ್ದು, ಬೆಳಕಿಗೆ ಬಾರದ ಪ್ರಕರಣಗಳು ಕೂಡ ಇರುವ ಸಾಧ್ಯತೆ ಇದೆ.

ದೇಶದಲ್ಲಿರುವ ಹುಲಿಗಳ ಸಂಖ್ಯೆ

ವರ್ಷ	ಕರ್ನಾಟಕದಲ್ಲಿ ವ್ಯಾಘ್ರಗಳು	ದೇಶದಲ್ಲಿ
2006	290	1,411
2010	300	1,706
2014	406	2,226
2018	524	2,967
2022	563	3,682

ಎಲ್ಲಿ, ಎಷ್ಟು ಹುಲಿಗಳು? (2022ರ ಅಂದಾಜು)



6. ಅಸ್ಸಾಂ	229
7. ಕೇರಳ	213
8. ಉತ್ತರ ಪ್ರದೇಶ	205
9. ಸುಂದರಬನ (ಪ.ಬಂಗಾಳ)	103
10. ರಾಜಸ್ಥಾನ	88
11. ಆಂಧ್ರ ಪ್ರದೇಶ	63
12. ಬಿಹಾರ	54
13. ತೆಲಂಗಾಣ	21
14. ಒಡಿಶಾ	20
15. ಛತ್ತೀಸಗಢ	17
16. ಅರುಣಾಚಲ ಪ್ರದೇಶ	9
17. ಜಾರ್ಖಂಡ್	1

ಆಧಾರ: ಎನ್‌ಟಿಸಿಎ, ಪಿಐಬಿ, ಸಂಸತ್ತಿನಲ್ಲಿ ಸಚಿವರ ಉತ್ತರಗಳು, ಬಿಬಿಸಿ

ಏಕೆ ಮುಖ್ಯ?

ಪರಿಸರ ವ್ಯವಸ್ಥೆಯನ್ನು ಕಾಪಾಡುವ ದಿಸೆಯಲ್ಲಿ ಹುಲಿಗಳ ಪಾತ್ರ ಬಹಳ ಮುಖ್ಯವಾದದ್ದು. ಹುಲಿ, ಕಾಡಿನ ಅತ್ಯಂತ ಪ್ರಮುಖ ಬೇಟೆಗಾರ ಪ್ರಾಣಿಯಾಗಿದ್ದು, ಆಹಾರ ಸರಪಳಿಯ ತುತ್ತ ತುದಿಯಲ್ಲಿದೆ. ಮಾಂಸಾಹಾರಿಯಾಗಿರುವ ಹುಲಿಯು ಕಾಡಿನ ಬಲಿಪ್ರಾಣಿಗಳನ್ನು ತಿಂದು ಪ್ರಕೃತಿಯ ಸಮತೋಲನ ಕಾಪಾಡುತ್ತದೆ. ಆಹಾರದ ಸರಪಳಿಯಲ್ಲಿ ಏರಿಳಿತ ಉಂಟಾದರೆ, ಅದು ಅಂತಿಮವಾಗಿ ಪರಿಸರ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ.

ಹುಲಿಗಳ ಸಾವು

* ಜೂನ್ 26, 2025ರ ವರೆಗೆ

ವರ್ಷ	2012	2013	2014	2015	2016	2017	2018	2019	2020	2021	2022	2023	2024	2025
ಸಾವು	88	68	78	82	121	117	101	96	106	129	122	182	126	103*

13 ವರ್ಷಗಳಲ್ಲಿ 1,519 ಹುಲಿಗಳ ಸಾವು

2012ರಿಂದ ಈ ವರ್ಷದ ಜೂನ್ 26ರವರೆಗೆ 1,519 ಹುಲಿಗಳು ದೇಶದಲ್ಲಿ ಅಸುನೀಗಿವೆ. ಈ ವರ್ಷ ಮೊದಲ ಆರೂವರೆ ತಿಂಗಳಲ್ಲೇ 103 ಹುಲಿಗಳು ಮೃತಪಟ್ಟಿವೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು 28 ಹುಲಿಗಳು ಅಸುನೀಗಿದರೆ, ಮಧ್ಯಪ್ರದೇಶದಲ್ಲಿ 26 ಸತ್ತಿವೆ. ಅಸ್ಸಾಂನಲ್ಲಿ 10 ಮತ್ತು ಕರ್ನಾಟಕದಲ್ಲಿ ಮಲೆಮಹದೇಶ್ವರ ವನ್ಯಧಾಮದಲ್ಲಿ ಮೃತಪಟ್ಟ ಐದು ಸೇರಿದಂತೆ ಎಂಟು ಹುಲಿಗಳು ಮೃತಪಟ್ಟಿವೆ.

ಕಾರಣಗಳು ಹಲವು

ಹುಲಿಗಳ ಸಾವಿನ ಅಂಕಿ ಅಂಶಗಳನ್ನು ಗಮನಿಸಿದರೆ, ಸಹಜ ಸಾವಿನ ಜೊತೆಗೆ, ಅಸಹಜ (ಸರಹದ್ದಿಗಾಗಿ ಕಾದಾಟ, ವಿಷಪ್ರಾಶನ, ವಿದ್ಯುತ್ ಸ್ಪರ್ಶ), ಬೇಟೆ, ಮೂರ್ಛೆ/ಪಾರ್ಶ್ವವಾಯು/ಹೃದಯಾಘಾತ ಮುಂತಾದ ಕಾರಣಗಳಿಂದ ಮೃತಪಟ್ಟಿವೆ. ಆದರೆ, ಹಲವು ಪ್ರಕರಣಗಳಲ್ಲಿ ಹುಲಿಗಳ ಸಾವಿಗೆ ನಿಖರ ಕಾರಣ ಏನು ಎನ್ನುವುದು ಇನ್ನೂ ಗೊತ್ತಾಗಿಲ್ಲ. 2012ರಿಂದ 2024ರ ಸೆಪ್ಟೆಂಬರ್‌ರವರೆಗೆ ವರದಿಯಾದ ಹುಲಿ ಸಾವಿನ ಪ್ರಕರಣಗಳಲ್ಲಿ ಶೇ 71ರಷ್ಟು ಪ್ರಕರಣಗಳನ್ನು ತನಿಖೆ ನಡೆಸಿ ವಿಲೇವಾರಿ ಮಾಡಲಾಗಿದೆ. ಶೇ 29ರಷ್ಟು ಪ್ರಕರಣಗಳು ಇನ್ನೂ ಪರಿಶೀಲನೆಯಲ್ಲಿವೆ. ದೇಶದಲ್ಲಿ ಬೇಟೆಯನ್ನು ನಿಷೇಧಿಸಲಾಗಿದ್ದರೂ ಬೇಟೆಗಾರರ ಗುಂಡಿಗೆ ಮೃತಪಟ್ಟ ಹುಲಿಗಳ ಸಂಖ್ಯೆ ಗಣನೀಯವಾಗಿದೆ. ಕರ್ನಾಟಕ ಸೇರಿದಂತೆ ದೇಶದಾದ್ಯಂತ ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಇದರಿಂದಾಗಿ ಇತರ ಪ್ರಾಣಿಗಳ ಜೊತೆಗೆ ಹುಲಿಗಳು ಕೂಡ ಬಲಿಯಾಗುತ್ತಿವೆ. ವಿಷಪ್ರಾಶನ, ವಿದ್ಯುತ್ ಸ್ಪರ್ಶ ಇನ್ನಿತರ ಪ್ರಕರಣಗಳು ಮಾನವ–ವನ್ಯಜೀವಿ ಸಂಘರ್ಷದ ಭಾಗ.

ಪ್ರಮುಖ ರಾಜ್ಯಗಳಲ್ಲಿ ಮೃತಪಟ್ಟ ವ್ಯಾಘ್ರಗಳು

(2012ರಿಂದ 2025ರ ಜೂನ್ 26ರವರೆಗೆ)

ರಾಜ್ಯ	ಸಂಖ್ಯೆ
ಮಧ್ಯಪ್ರದೇಶ	392
ಮಹಾರಾಷ್ಟ್ರ	321
ಕರ್ನಾಟಕ	189
ಉತ್ತರಾಖಂಡ	140
ತಮಿಳುನಾಡು	96
ಅಸ್ಸಾಂ	95
ಕೇರಳ	86
ಉತ್ತರ ಪ್ರದೇಶ	71
ರಾಜಸ್ಥಾನ	41
ಬಿಹಾರ	22

ಮುಂಚೂಣಿ ಸಿಬ್ಬಂದಿ ಕೊರತೆ

ಕರ್ನಾಟಕ ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ಅರಣ್ಯ ರಕ್ಷಣೆಯಲ್ಲಿ ತೊಡಗುವ ಮುಂಚೂಣಿ ಸಿಬ್ಬಂದಿ ಕೊರತೆ ಇದೆ. ಈ ಕಾರಣಕ್ಕೆ ಅರಣ್ಯ ಇಲಾಖೆಗೆ ಬೇಟೆಗಾರರು, ಮಾನವ ವನ್ಯಜೀವಿ ಸಂಘರ್ಷದ ಮೇಲೆ ನಿಗಾ ಇಡಲು ಸಾಧ್ಯವಾಗುತ್ತಿಲ್ಲ. ತಾತ್ಕಾಲಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಸಿಬ್ಬಂದಿಗೆ ಇಲಾಖೆ ನಿಯಮಿತವಾಗಿ ವೇತನವನ್ನೂ ನೀಡುವುದಿಲ್ಲ. ಈ ಕಾರಣಕ್ಕೆ ಕರ್ತವ್ಯ ನಿರ್ವಹಿಸುವಾಗ ಸಿಬ್ಬಂದಿ ಉದಾಸೀನ ಧೋರಣೆ ತಾಳುತ್ತಾರೆ. ವೇತನ ಸಿಗದಿರುವ ಕಾರಣದಿಂದ ತಟಸ್ಥರಾಗಿರುವುದರ ಜೊತೆಗೆ, ದುಷ್ಕೃತ್ಯಗಳಿಗೆ ಪ್ರೇರಣೆ ನೀಡುವ ಸಾಧ್ಯತೆಯೂ ಇರುತ್ತದೆ.

ವ್ಯಾಘ್ರಗಳ ಸಾವಿಗೆ ಕಾರಣಗಳು

(ಸತ್ತ ಹುಲಿಗಳ ಸಂಖ್ಯೆ)



ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಸಂವಿಧಾನ ಪ್ರಸ್ತಾವನೆ ಪರಿಷ್ಕರಣೆ ಎಐಎಂಪಿಎಲ್‌ಬಿ ವಿರೋಧ

ಜಲ್ನಾ (ಪಿಟಿಐ): ಸಂವಿಧಾನದ ಪ್ರಸ್ತಾವನೆಯಲ್ಲಿನ 'ಸಮಾಜವಾದ' ಮತ್ತು 'ಜಾತ್ಯತೀತ' ಪದಗಳನ್ನು ಕೈಬಿಡಬೇಕು ಎಂಬ ಆರ್‌ಎಸ್‌ಎಸ್‌ನ ಬೇಡಿಕೆಗೆ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ (ಎಐಎಂಪಿಎಲ್‌ಬಿ) ಅಧ್ಯಕ್ಷ ಮೌಲಾನಾ ಖಾಲಿದ್ ಸೈಫುಲ್ಲಾ ರಹಮಾನಿ ಭಾನುವಾರ ವಿರೋಧ ವ್ಯಕ್ತಪಡಿಸಿದರು.

ಇತ್ತೀಚೆಗೆ ಈ ಕುರಿತು ಹೇಳಿಕೆ ನೀಡಿದ್ದ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು 'ಈ ಪದಗಳು ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಭಾಗವಾಗಿರಲಿಲ್ಲ, ಬದಲಿಗೆ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಸೇರಿಸಲಾಗಿತ್ತು. ಹೀಗಾಗಿ ಅದನ್ನು ಪರಿಷ್ಕರಿಸಬೇಕಿದೆ' ಎಂದು ಆಗ್ರಹಿಸಿದ್ದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಖಾಲಿದ್ ಅವರು, 'ಈ ಎರಡು ಪದಗಳು ಸಂವಿಧಾನದ ಬಹುಮುಖ್ಯವಾದ ಸತ್ವವಾಗಿವೆ. ಅವು ದೇಶದ ನಾಗರಿಕರಿಗೆ ಜಾತಿ ಮತ್ತು ಧರ್ಮದ ಭೇದ ಮಾಡದೇ ಸಮಾನ ಹಕ್ಕುಗಳನ್ನು ಒದಗಿಸುತ್ತದೆ. ಇಂದಿರಾಗಾಂಧಿ ಪ್ರಧಾನಿ ಆಗಿದ್ದಾಗ ಇವನ್ನು ಸರ್ವಾನುಮತದಿಂದ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ' ಎಂದು ಅವರು ಹೇಳಿದರು.

'ಆರ್‌ಎಸ್‌ಎಸ್ ಒಪ್ಪಿಕೊಳ್ಳುತ್ತದೆಯೇ?'

ನವದೆಹಲಿ (ಪಿಟಿಐ): ಸಂವಿಧಾನದ ಪೀಠಿಕೆ ಕುರಿತಂತೆ ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ನೀಡಿದ ಹೇಳಿಕೆಯು ವಿವಾದಕ್ಕೀಡಾಗಿರುವ ನಡುವೆಯೇ, 'ಭಾರತದ ಸಂವಿಧಾನವನ್ನು ಆರ್‌ಎಸ್‌ಎಸ್ ನಿಜವಾಗಿಯೂ ಒಪ್ಪಿಕೊಳ್ಳುತ್ತದೆಯೇ' ಎಂದು ಸಿಪಿಐ ಭಾನುವಾರ ಪ್ರಶ್ನಿಸಿದೆ.

ಸಿಪಿಐ ಸಂಸದ ಸಂತೋಷ ಕುಮಾರ್ ಅವರು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಬರೆದ ಪತ್ರದಲ್ಲಿ ಈ ಪ್ರಶ್ನೆ ಕೇಳಿದ್ದಾರೆ.

'ಧ್ರುವೀಕರಣ ತಡೆಯುವುದಕ್ಕಾಗಿ ಇಂತಹ ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿ, ಚರ್ಚೆ ಹುಟ್ಟು ಹಾಕುವುದನ್ನು ಆರ್‌ಎಸ್‌ಎಸ್ ನಿಲ್ಲಿಸುವುದು ಇಂದಿನ ತುರ್ತು. ಸಂವಿಧಾನದಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳನ್ನು ಯಾವುದೇ ವಿವೇಚನೆ ಇಲ್ಲದೇ ಸೇರಿಸಲಾಗಿಲ್ಲ. ಅವು ಮೂಲಭೂತ ಆದರ್ಶಗಳೇ' ಆಗಿವೆ ಎಂದು ಅವರು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಇರಾನ್ ಮೇಲೆ ಅಮೆರಿಕ ವಾಯುದಾಳಿ ನಡೆಸಿದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಅದಕ್ಕೆ ಸಂಬಂಧಿಸಿದ ಕೆಲವು ಪೋಸ್ಟ್‌ಗಳು ಹರಿದಾಡುತ್ತಿವೆ. 'ಅಮೆರಿಕದ ವಾಯುಪಡೆಗಳು ಇರಾನ್ ಮೇಲೆ ದಾಳಿ ನಡೆಸಲು ಭಾರತದ ವಾಯುಪ್ರದೇಶವನ್ನು ಬಳಸಿಕೊಂಡಿದ್ದು, ಇರಾನ್ ಇದನ್ನು ಮರೆಯುವುದಿಲ್ಲ' ಎಂದು ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿರುವ ಪಾಕಿಸ್ತಾನದ ಸಾಮಾಜಿಕ ಬಳಕೆದಾರರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ಅಮೆರಿಕವು ಇರಾನ್ ಮೇಲೆ ವೈಮಾನಿಕ ದಾಳಿ ('ಮಿಡ್‌ನೈಟ್ ಹ್ಯಾಮರ್') ನಡೆಸಿದ ಬಗ್ಗೆ ಪೆಂಟಗನ್ ಅಧಿಕೃತ ಮಾಹಿತಿಯನ್ನು ಹಂಚಿಕೊಂಡಿದ್ದು, ವಿಮಾನಗಳ ಮಾರ್ಗವನ್ನೂ ಬಿಡುಗಡೆ ಮಾಡಿದೆ. ಅಮೆರಿಕದ ಗೋಪ್ಯ ದಾಳಿಕೋರರು ಲೆಬನಾನ್, ಸಿರಿಯಾ ಮತ್ತು ಇರಾಕ್ ವಾಯುಪ್ರದೇಶಗಳ ಮೂಲಕ ಇರಾನ್‌ಗೆ ಹಾರಿದ್ದರು, ಭಾರತದ ಮೂಲಕ ಅಲ್ಲ ಎಂದು ಅದು ಹೇಳಿದೆ. ಈ ಬಗ್ಗೆ ಭಾರತದ ಪ್ರೆಸ್ ಇನ್ಫರ್ಮೇಷನ್ ಬ್ಯೂರೊ ಕೂಡ ಪ್ರಕಟಣೆ ನೀಡಿದ್ದು, ಅಮೆರಿಕವು ಇರಾನ್ ಮೇಲಿನ ದಾಳಿಗೆ ಭಾರತದ ವಾಯುಪ್ರದೇಶ ಬಳಸಿಕೊಂಡಿದೆ ಎನ್ನುವುದನ್ನು ನಿರಾಕರಿಸಿದೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ವರದಿ ಮಾಡಿದೆ.

ಇರುವುದೆಲ್ಲ ತೊರೆಯುವುದೇ ಜೀವನವಲ್ಲ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ದೇವರು ಸ್ಫುರದ್ರೂಪಿ ತರುಣ-ತರುಣಿಯ ಜೋಡಿಯೊಂದನ್ನು ಸೃಷ್ಟಿಸಿ ಅವರ ಜೀವನಕ್ಕೆ ಅಗತ್ಯವಾದ ಎಲ್ಲವೂ ದೊರಕುವ ಒಂದು ಮನೋಹರ ನಡುಗಡ್ಡೆಯಲ್ಲಿ ಜೀವಿಸಲು ಬಿಡುತ್ತಾನೆ. ಆದರೆ, ಯಾವುದೇ ಸಂದರ್ಭದಲ್ಲೂ ಪಕ್ಕದ ನಡುಗಡ್ಡೆಗೆ ಹೋಗಬಾರದೆಂದು ನಿರ್ಬಂಧಿಸಿ ಹೋಗುತ್ತಾನೆ.

ಎಲ್ಲವೂ ಚೆನ್ನಾಗಿರುತ್ತದೆ. ಕೆಲವು ದಿನಗಳು ಕಳೆಯುತ್ತವೆ. ಒಂದು ದಿನ ಆ ತರುಣ ಪಕ್ಕದ ನಡುಗಡ್ಡೆ ನೋಡಲು ಹೋಗಿ ಅಲ್ಲಿನ ಅಪೂರ್ವ ಸೌಂದರ್ಯಕ್ಕೆ ಮರುಳಾಗುತ್ತಾನೆ. ತನ್ನ ಸಂಗಾತಿಗೆ ಇದನ್ನು ತೋರಿಸಬೇಕು, ಅವಳೊಂದಿಗೆ ನಲಿಯಬೇಕು ಎಂದು ಹಿಂತಿರುಗಿ ಬಂದು ಅವಳ ಕೈ ಹಿಡಿದು 'ಬಾ ಅಲ್ಲಿಗೆ ಹೋಗೋಣ' ಅಂತ ಕರೆಯುತ್ತಾನೆ. 'ದೇವರ ಆದೇಶವನ್ನು ಮೀರುವುದು ತಪ್ಪು, ಅಲ್ಲದೆ ನಮಗಿಲ್ಲಿ ಕಡಿಮೆಯಾಗಿರೋದಾದರೂ ಏನು?' ಎಂದು ಆಕೆ ಅವನೊಂದಿಗೆ ಹೋಗಲು ನಿರಾಕರಿಸುತ್ತಾಳೆ. 'ಏನೂ ಆಗುವುದಿಲ್ಲ, ನಾನಿದ್ದೇನೆ, ವಾಪಾಸು ಇಲ್ಲಿಗೇ ಬರೋಣ, ಬಾ' ಎಂದು ಭರವಸೆ ತುಂಬಿ ಒತ್ತಾಯದಿಂದ ಆಕೆಯನ್ನು ಕರೆದೊಯ್ಯುತ್ತಾನೆ.

ಇಬ್ಬರೂ ಪಕ್ಕದ ನಡುಗಡ್ಡೆಯಲ್ಲಿ ಕಾಲೂರುತ್ತಿದ್ದಂತೆಯೇ ಇಡೀ ನಡುಗಡ್ಡೆ ಕೆಳಕ್ಕೆ ಕುಸಿಯಲಾರಂಭಿಸುತ್ತದೆ. ಗಾಬರಿಗೊಂಡ ತರುಣ 'ಅವಳದೇನೂ ತಪ್ಪಿಲ್ಲ, ಇದಕ್ಕೆಲ್ಲಾ ನಾನು ಕಾರಣ, ನನ್ನ ಪ್ರಾಣ ಹೋಗಲಿ, ಅವಳನ್ನು ಬದುಕಿಸು' ಎಂದು ದೇವರಲ್ಲಿ ಮೊರೆಯಿಡುತ್ತಾನೆ. 'ನನ್ನ ಮೇಲಿನ ಪ್ರೀತಿಯಿಂದಲೇ ಅವನು ನನ್ನನ್ನು ಕರೆದ. ನನಗೆ ಅವನನ್ನು ಬಿಟ್ಟು ಬದುಕುವುದಕ್ಕೆ ಏನಿದೆ? ಉಳಿಸುವುದಾದರೆ ಇಬ್ಬರನ್ನೂ ಉಳಿಸು' ಎಂದು ಅವಳೂ ಬೇಡುತ್ತಾಳೆ.

ನಾವು ಮನುಷ್ಯರಾಗಿ ಬದುಕುವುದಕ್ಕೆ ಬೇಕಾಗಿರುವುದೇನು? ಗಾಳಿ- ಬೆಳಕು, ನೀರು-ನೆಲ ಹೀಗೆ ದೇವರು ಕೊಡುವುದನ್ನೆಲ್ಲಾ ಕೊಟ್ಟುಬಿಟ್ಟದ್ದಾನೆ. ಅವುಗಳ ಆಶ್ರಯದಲ್ಲಿ ದುಡಿದು ನಾಲ್ಕು ಜನ ಮೆಚ್ಚುವಂತೆ ಪ್ರೇಮದಿಂದ ಬದುಕುವುದು ನಮ್ಮೆಲ್ಲರ ಜವಾಬ್ದಾರಿ. ಕುಟುಂಬದ ನೆಲೆಯಿಂದ ಹಿಡಿದು ದೇಶದೇಶಾಂತರದವರೆಗೂ ಮನುಷ್ಯ ಮನುಷ್ಯರ ನಡುವೆ ಪ್ರತಿಷ್ಠೆ, ಭಯ, ಸಂಶಯಗಳಿವೆ. ಎಲ್ಲ ಇದ್ದೂ ಇನ್ನಷ್ಟು ಮತ್ತಷ್ಟು ಬೇಕು ಎನ್ನುವ ಅತಿಯಾದ ಆಸೆಯಿಂದಲೇ ಇವು ಹುಟ್ಟಿವೆ. ಇವುಗಳ ನಿವಾರಣೆಗೆ ಒಬ್ಬರಿಗೊಬ್ಬರು ಆಸರೆಯಾಗುವ ಪ್ರೀತಿ ವಿಶ್ವಾಸದ ಸೇತುವೆಗಳನ್ನು ಕಟ್ಟಬೇಕಾಗಿದೆ. ಪರಸ್ಪರ ಕೊಡು-ಕೊಳ್ಳುವ, ಒಟ್ಟಿಗೆ ಕುಳಿತು ಉಣ್ಣುವ ಸದಾಶಯವೇ ಜೀವನಕ್ರಮ ಆಗಬೇಕಾಗಿದೆ. ನಾವು ಆಡುವ ಮಾತುಗಳಲ್ಲಿ ಹೃದಯವೂ ನಡವಳಿಕೆಗಳಲ್ಲಿ ಪ್ರೇಮವೂ ಕಾಣುವಂತಿರಬೇಕು. ಇದರಿಂದ ಜೀವನದ ದುಃಖಭಾರದಲ್ಲಿ ನೊಂದವರಿಗೆ ಜಗತ್ತು ನಮ್ಮೊಂದಿಗಿದೆ ಎಂಬ ಭರವಸೆ ದೊರೆಯುತ್ತದೆ.

ಜೀವ ಜೀವಗಳು ನಿಷ್ಕಾರಣ ಪ್ರೇಮವನ್ನು ಅನುಭವಿಸಬೇಕೆಂದರೆ ದಾಂಪತ್ಯವಿರಲಿ, ನೆರೆಹೊರೆಯಿರಲಿ ಒಳ್ಳೆಯ ಕಾರಣಗಳಿಗಾಗಿ ಒಬ್ಬರನ್ನೊಬ್ಬರು ಬಿಟ್ಟು ಕೊಡಬಾರದು. ಅವರು ನಮ್ಮ ಹಾಗಿಲ್ಲ, ನಮ್ಮ ಹಾಗೆ ಆಲೋಚಿಸುವುದಿಲ್ಲ ಎನ್ನುವುದು ಅಸಹನೆಯ ಭಾಗ. ನಮ್ಮ ನಡುವಿನ ವ್ಯತ್ಯಾಸಗಳನ್ನು ಸಹಿಸಿಕೊಳ್ಳುವುದರಿಂದ ನಮ್ಮ ನೈತಿಕ ದೃಢತೆ ಹೆಚ್ಚುತ್ತದೆ. ಸಹಜೀವಿಗಳೊಂದಿಗೆ ಸಹನೆ, ಗೌರವದ ಬದುಕನ್ನು ಬಾಳಬೇಕು ಅನ್ನುವುದು ಎಷ್ಟು ಮುಖ್ಯವೋ ಇರುವುದರಲ್ಲಿ ಸಂತೃಪ್ತಿಯನ್ನು ಕಾಣುವುದೂ ಅಷ್ಟೇ ಮುಖ್ಯ. ನಂದನದ ತುಣುಕೊಂದು ಬಿದ್ದಂತಿರುವ ನಮ್ಮ ನಮ್ಮ ಮನೆ, ಸಂಸಾರ, ಊರು ಕೇರಿ, ನಾಡಿನಲ್ಲಿ ತೃಪ್ತಿಯನ್ನೂ ಆನಂದವನ್ನೂ ಸವಿಯಬೇಕು. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನವಾಗಬೇಕಿಲ್ಲ. ನಾವು ಇರುವ ಜಾಗದಲ್ಲಿಯೇ ನಾಕ ನಾಚುವಂತಹ ಆಹ್ಲಾದಕರವಾದ ಸಮಾನ ಅಭಿರುಚಿಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಾ ಮುಂದೆ ಸಾಗಬೇಕು. ❖

ಪದಬಂಧ 6089

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಈ ಪ್ರಕಾರವಾಗಿ ಕಟ್ಟಿರುವ ಗೋಡೆ (3)
3.ಕುದುರೆಯ ಮೇಲೆ ಕುಳಿತಿರುವವನು (4)
5.ಇದು ಹೊಸದು (3)
7.ಈ ವರ್ತಕ ಉತ್ತೇಜನ ಕೊಡುವವನು (4)
9.ಹಾರವಿರುವ ವ್ಯಾಪಾರ (4)
12.ಪದಾರ್ಥಗಳನ್ನು ಮಾರುವ ಸ್ಥಳ (3)
14.ಆಲದಲ್ಲೇ ಆಟದ ಬಯಲು! (4)
15.ಕಲೆಸಿದ ಗೋಧಿ ಹಿಟ್ಟು (3)

ಮೇಲಿಂದ ಕೆಳಕ್ಕೆ

1.ಹಿಂದಿನ ಕಾಲದ್ದು (3)
2.ದ್ರವ ಒಸರುವ ಜಿಹ್ವೆ (3)
3.ಭಗವಂತನ ಸಾಕ್ಷಾತ್ಕಾರ ಮಾಡುವುದು (4)
4.ಮುಸಲ್ಮಾನರ ಕಾಲಗಣನೆ (3)
6.ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
7.ಹರ ಕೊನೆಗಿದ್ದರೂ ಬಿದ್ದ ಹೊಡೆತ (3)
8.ವಾಡಿಕೆಯಂತೆ ಬಂದಿರುವ ಗೊಲ್ಲ (4)
10.ಅತಿ ಘೋರವಾದ ವಿಷ (4)
11.ಆಟದ ಸಾಮಾನು ಉಲ್ಟಾಪಲ್ಟಾ ಆಗಿದೆ (3)
12.ಬೆನ್ನು ಹತ್ತಿದರೆ ಬಿಡದವನು (3)
13.ದರ್ಪಣವು ಉಲ್ಟಾ ಆಗಿದೆ (2)

6088 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವಾಸ 3.ಪಾರ್ಥಿವ 6.ದಳ್ಳಾಳಿ 7.ಸಾಮಂತ 8.ಹಮ್ಮೀರ 10.ಮಾತು 11.ಮಸೂರ 12.ಪಾತಿ 14.ಸೆಳೆತ 16.ಸಾವಿರ 17.ಜಾಗರ 18.ಸಲಗ 19.ಗುದ್ದಲಿ

ಮೇಲಿಂದ ಕೆಳಕ್ಕೆ:
1.ವಿದೇಹ 2.ಸದರ 3.ಪಾಳಿ 4.ವಸಾಹತು 5.ಹಂತಕ 9.ಸಾಮತಿ 10.ಮಾರಕ 12.ಪಾದರಸ 13.ಕಸಾಯಿ 14.ಸೆರಗು 15.ತಕಲಿ 17.ಜಾಗ

ಸುಡೊಕು 6473

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

6472 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಜೂನ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪಂಚಮಿ ಗಂ. 9-24 **ನಕ್ಷತ್ರ:** ಮಘಾ ಗಂ. 7-21 **ಯೋಗ:** ಸಿದ್ಧಿ (ಆಸ್ರಿಕ್) ಗಂ.17-21 ಕರಣ: ಬಲವ ಗಂ. 9-24, ಮಿಥುನ ಮಾಸದ 16 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 – 09-00 **ಸೂರ್ಯೋದಯ:** 06-11 ಸೂರ್ಯಾಸ್ತ: 06-57. **ಮುಸ್ಲಿಂ ದಿನಾಂಕ:** 04 ಮೊಹರಮ್. **ದಿನ ವಿಶೇಷ:** ಕುಮಾರ ಷಷ್ಠಿ, ಅದೃಷ್ಟ ಸಂಖ್ಯೆ: 2, 7

ಮೇಷ: ಯಾವುದೇ ಉದ್ವೇಗಕ್ಕೆ ಒಳಗಾಗದೆ ಹೊಸ ಸ್ಫೂರ್ತಿಯಿಂದ ಕಾರ್ಯನಿರ್ವಹಿಸುವಿರಿ. ಗ್ರಂಥಪಾಲಕರ ಹುದ್ದೆಗೆ ಅಭ್ಯರ್ಥಿಯಾಗುವುದರಿಂದ ಶುಭವಾಗುವುದು. ಅಸಹಾಯಕ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ.

ವೃಷಭ: ಕಂಪನಿಯ ಹಣಕಾಸು ನಿರ್ವಹಣೆಯಲ್ಲಿ ಪಾತ್ರ ಪ್ರಮುಖವಾಗುವುದು. ಪ್ರಾಮಾಣಿಕತನದಿಂದಾಗಿ ಒಳ್ಳೆಯ ಸ್ಥಾನಮಾನ ಅಯಾಚಿತವಾಗಿ ಸಿಗಲಿದೆ. ನೂತನ ವಸ್ತ್ರ ಖರೀದಿಯ ಯೋಗವಿದೆ.

ಮಿಥುನ: ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಬರಲಿದೆ. ಸಮಸ್ಯೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸುವಿರಿ. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿಡಲು ಪ್ರಯತ್ನಿಸಿ. ಪಿತ್ತಾಧಿಕ್ಯ ಉಂಟಾಗುವುದು.

ಕರ್ಕಾಟಕ: ಇಂದಿನ ಮನಸ್ಥಿತಿ ಯಾರೊಂದಿಗೂ ಹೆಚ್ಚಾಗಿ ಬೆರೆಯದೆ ಕೆಲಸ ಕಾರ್ಯಗಳತ್ತಲೇ ಇರುವುದು. ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸಿ. ತಂದೆ ಮಾತನ್ನು ತಿರಸ್ಕರಿಸಬೇಡಿ.

ಸಿಂಹ: ಒಳಾಂಗಣ ವಿನ್ಯಾಸ ಕೋರ್ಸ್ ಕಲಿಯಲು ಇಚ್ಛಿಸುವವರಿಗೆ ಶುಭ ಕಾಲ. ಯೋಗಾಭ್ಯಾಸದಿಂದ ಮನಸ್ಸಿಗೆ ಹಿತ. ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಗೊಂದಲ ಬೇಡ.

ಕನ್ಯಾ: ಏಕಾಗ್ರತೆಗೆ ಭಂಗವಾಗುವ ಘಟನೆಗಳು ನಡೆಯಲಿವೆ. ತಾಯಿಯವರ ಆರೋಗ್ಯದಲ್ಲಿ ಗಮನ ಹರಿಸಿ. ಅದರಲ್ಲೂ ಹೊಟ್ಟೆಗೆ ಸಂಬಂಧಿಸಿದ ರೋಗ ಲಕ್ಷಣಗಳಿದ್ದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ.

ತುಲಾ: ಕೆಲವು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ. ಅನುಭವಸ್ಥರ ಮಾರ್ಗದರ್ಶನ ಬೇಕೆನಿಸಲಿದೆ.

ವೃಶ್ಚಿಕ: ಸಣ್ಣಪುಟ್ಟ ಅಡಚಣೆಗಳು ಕೆಲಸ ಕಾರ್ಯಗಳಿಗೆ ಅಡ್ಡಿಯಾಗಲಾರದು. ಕಾರ್ಮಿಕರ ಮೇಲಿನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದರಿಂದ ಪ್ರಯೋಜನ ಪಡೆಯಲಿದ್ದೀರಿ.

ಧನು: ಮಕ್ಕಳು ಮಾಡುವ ಸಣ್ಣ ಪುಟ್ಟ ತಪ್ಪುಗಳನ್ನು ಕ್ಷಮಿಸಿ ತಿಳಿಹೇಳಿ. ಯಾವುದೇ ಕಾರಣಗಳಿಗೂ ಮಕ್ಕಳನ್ನು ಶಿಕ್ಷಿಸಬೇಡಿ. ವ್ಯವಹಾರದ ಪಾಲುದಾರರು ಮಾತಿನಂತೆಯೇ ನಡೆಯುವರು.

ಮಕರ: ವಿಭಿನ್ನ ರೀತಿಯ ಮತ್ತು ಅತಿ ಕ್ಲಿಷ್ಟಕರವಾದ ಕೆಲಸವೊಂದನ್ನು ಸ್ನೇಹಿತರೊಬ್ಬರು ಒಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಸಾಕಷ್ಟು ಗೌರವವನ್ನು, ಹೆಸರನ್ನೂ ತರಲಿದೆ. ದಿನಸಿ ವರ್ತಕರಿಗೆ ನಷ್ಟವಾಗಲಿದೆ.

ಕುಂಭ: ಕಲಾವಿದರು ಅದರಲ್ಲೂ ಸಂಗೀತ ಕಲಾವಿದರಿಗೆ ಸಿಕ್ಕ ಅವಕಾಶ ತಿರಸ್ಕರಿಸಬೇಡಿ. ನೂತನ ಕೆಲಸಗಳಿಗೆ ವಿಘ್ನ ಕಾಡಲಿದೆ. ವಿವಾಹ ಅಪೇಕ್ಷಿಗಳಿಗೆ ಸಹೋದರನ ಮುಖಾಂತರವಾಗಿ ವೈವಾಹಿಕ ಸಂಬಂಧ ಕೂಡಿ ಬರಲಿದೆ.

ಮೀನ: ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗಾಗಿ ಜನರು ಕಾಯುವುದನ್ನು ನೋಡಿ ಬಹಳ ಹೆಮ್ಮೆಪಟ್ಟುಕೊಳ್ಳುವಿರಿ. ಮಾನಸಿಕ ಒತ್ತಡಗಳಿಂದ ಹೊರಬರಲು ಕುಲದೇವರ ದರ್ಶನ ಮಾಡಿ.

ಗುಂಡಣ್ಣ

ಹಸಿರು ಅಂಕಣದಲ್ಲಿ ವಿಂಬಲ್ಡನ್ ವೈಭವ

ಇಂದಿನಿಂದ ಟೂರ್ನಿ • 'ಹ್ಯಾಟ್ರಿಕ್' ಪ್ರಶಸ್ತಿ ಮೇಲೆ ಅಲ್ಕರಾಜ್ ಕಣ್ಣು • ಕೊಕೊ, ರಾಡುಕಾನು ಆಕರ್ಷಣೆ

ವಿಂಬಲ್ಡನ್ ಟೆನಿಸ್ ಟೂರ್ನಿ ಪೂರ್ವಾಭ್ಯಾಸದ ಸಂದರ್ಭದಲ್ಲಿ ಅಮೆರಿಕದ ಕೊಕೊ ಗಾಫ್ ಮತ್ತು ಬೆಲರೂಸ್‌ನ ಅರ್ಯೆನಾ ಸಬಲೆಂಕಾ ಅವರ ನೃತ್ಯದ ಝಲಕ್ –ಎಪಿ/ಪಿಟಿಐ ಚಿತ್ರ

ಲಂಡನ್ (ರಾಯಿಟರ್ಸ್): ಹಚ್ಚಹಸುರಿನಿಂದ ನಳನಳಿಸುತ್ತಿರುವ ಆಲ್ ಇಂಗ್ಲೆಂಡ್ ಕ್ಲಬ್ ಅಂಕಣಗಳು ವಿಂಬಲ್ಡನ್ ಟೆನಿಸ್ ಟೂರ್ನಿಯ ಆತಿಥ್ಯಕ್ಕೆ ಸಿದ್ಧವಾಗಿವೆ.

ಸೋಮವಾರದಿಂದ ಆರಂಭವಾಗಲಿರುವ ಪ್ರತಿಷ್ಠಿತ ಟೂರ್ನಿಯಲ್ಲಿ ಯುವ ಹಾಗೂ ಅನುಭವಿ ತಾರೆಗಳು ಪ್ರಶಸ್ತಿಗಾಗಿ ಸೆಣಸಲಿದ್ದಾರೆ. 1877ರಿಂದ ನಡೆಯುತ್ತಿರುವ ಈ ಐತಿಹಾಸಿಕ ಟೂರ್ನಿಯು ವಿಶ್ವದ ಟೆನಿಸ್‌ಪ್ರಿಯರನ್ನು ಸೆಳೆಯುತ್ತದೆ. ಪ್ರತಿ ವರ್ಷ ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್ ಟೂರ್ನಿಗಳ ನಂತರ ನಡೆಯುವ ಅತಿ ದೊಡ್ಡ ಗ್ರ್ಯಾನ್‌ಸ್ಲಾಮ್ ಇದಾಗಿದೆ.

ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಕಣಕ್ಕಿಳಿಯಲಿದ್ದಾರೆ. ಸ್ಪೇನ್ ಆಟಗಾರ ಅಲ್ಕರಾಜ್ ಅವರು 'ಹ್ಯಾಟ್ರಿಕ್' ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ಈ ಪಂದ್ಯದಲ್ಲಿ ಅವರು ಇಟಲಿಯ ಫ್ಯಾಬಿಯೊ ಫಾಗ್ನಿನಿ ಅವರನ್ನು ಎದುರಿಸುವರು.

ಮುಖ್ಯಾಂಶಗಳು

- ಪ್ರಶಸ್ತಿ ಗೆಲುವಿನ ಛಲದಲ್ಲಿ ಅರ್ಯೆನಾ ಸಬಲೆಂಕಾ
- ಜುಲೈ 13ರವರೆಗೆ ನಡೆಯಲಿರುವ ಟೂರ್ನಿ
- ಸತತ ಎರಡು ಬಾರಿ ಪ್ರಶಸ್ತಿ ಗೆದ್ದಿರುವ ಅಲ್ಕರಾಜ್

ಮಹಿಳೆಯರ ಸಿಂಗಲ್ಸ್‌ನಲ್ಲಿ ಈ ವರ್ಷ ಎರಡು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ರನ್ನರ್ ಅಪ್ ಆಗಿದ್ದ ಬೆಲರೂಸ್‌ನ ಅರ್ಯೆನಾ ಸಬಲೆಂಕಾ ಅವರು ಇಲ್ಲಿ ತಮ್ಮ ಅಭಿಯಾನವನ್ನು ಕೆನಡಾದ ಕಾರ್ಸನ್ ಬ್ರ್ಯಾನಸ್ಟೈನ್ ವಿರುದ್ಧ ಆರಂಭಿಸುವರು.

ಈಚೆಗಷ್ಟೇ ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡ ಅಮೆರಿಕದ ಕೊಕೊ ಗಾಫ್ ಅವರು ಮಂಗಳವಾರ ಉಕ್ರೇನ್ ದೇಶದ ಡಯಾನಾ ಎಸ್ಟ್ರೆಮಸ್ಕಾ ವಿರುದ್ಧ ಕಣಕ್ಕಿಳಿಯುವರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 2ನೇ ಸ್ಥಾನದಲ್ಲಿರುವ ಕೊಕೊ ಅವರು ಗ್ರಾಸ್‌ಕೋರ್ಟ್‌ನಲ್ಲಿ ಚೊಚ್ಚಲ ಪ್ರಶಸ್ತಿ ಜಯದ ಛಲದಲ್ಲಿದ್ದಾರೆ.

ಸ್ಪೇನ್ ದೇಶದ ಕಾರ್ಲೋಸ್ ಅಲ್ಕರಾಜ್ ಭಾನುವಾರ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಬ್ರಿಟಿಷ್ ಜೋಡಿಯ ಮುಖಾಮುಖಿ: ಸೋಮವಾರ ಮಹಿಳೆಯರ ಸಿಂಗಲ್ಸ್‌ನಲ್ಲಿ ಆತಿಥೇಯ ಇಂಗ್ಲೆಂಡ್‌ನ ಅಗ್ರ ಶ್ರೇಯಾಂಕದ ಆಟಗಾರ್ತಿ ಎಮಾ ರಾಡುಕಾನು ಮತ್ತು ಮಿಂಗೇ ಶು ಅವರು ಮುಖಾಮುಖಿಯಾಗುವರು. 22 ವರ್ಷದ ಎಮಾ ಅವರು ಮಹಿಳೆಯರ ವಿಭಾಗದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿದ್ದರು. ಇದೀಗ ತವರಿನಲ್ಲಿ ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸುವತ್ತ ಚಿತ್ತ ನೆಟ್ಟಿದ್ದಾರೆ. ಅವರು 17 ವರ್ಷದ ಮಿಂಗೆ ಶು ಅವರನ್ನು ಎದುರಿಸುವರು. ಶು ಅವರು ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಅವರಿಗ ಇದು ಚೊಚ್ಚಲ ಗ್ರ್ಯಾನ್‌ಸ್ಲಾಮ್.

'ಕಳೆದ ನಾಲ್ಕು ವರ್ಷಗಳಲ್ಲಿ ಬಹಳಷ್ಟು ಘಟನೆಗಳು ಅಗಿ ಹೋಗಿವೆ. ದೀರ್ಘ ಕಾಲ ಸರಿದುಹೋಗಿದೆ. ಹೊಸ ಪೀಳಿಗೆಯ ಆಟಗಾರ್ತಿಯರೊಂದಿಗೆ ಸ್ಪರ್ಧಿಸುವುದು ಒಳ್ಳೆಯ ಸಂಗತಿ. ಅದರಿಂದ ಹೆಚ್ಚು ಸ್ಪರ್ಧೆಗೆ ತಕ್ಕನಾಗಿ ಸಿದ್ಧಗೊಳ್ಳಲು ನಾವು ಕೂಡ ತುದಿಗಾಲಿನಲ್ಲಿ ಪ್ರಯತ್ನಿಸುತ್ತೇವೆ. ಇದೊಂದು ಆರೋಗ್ಯಕರ ಸ್ಪರ್ಧೆಯಾಗಿದೆ'' ಎಂದು ಎಮಾ ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

ಗಾಯದ ಸಮಸ್ಯೆ ಮತ್ತು ಪದೇ ಪದೇ ತರಬೇತುದಾರರನ್ನು ಬದಲಾವಣೆ ಮಾಡಿದ್ದರಿಂದಾಗಿ ಎಮಾ ಅವರು ದೀರ್ಘ ಅವಧಿಯಿಂದ ಪ್ರಶಸ್ತಿ ಜಯಿಸಲು ಸಾಧ್ಯವಾಗಲಿಲ್ಲ. ಈ ಟೂರ್ನಿಯಲ್ಲಿಯೂ ಅವರು ಶೇ 100ರಷ್ಟು ಫಿಟ್ ಆಗಿಲ್ಲ ಎಂದೇ ಹೇಳಲಾಗುತ್ತಿದೆ.

ಮಹಿಳೆಯರ ವಿಭಾಗದ ಸಿಂಗಲ್ಸ್‌ನಲ್ಲಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರೂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. 24 ವರ್ಷದ ಅವರು ಒಟ್ಟು ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದಾರೆ. ಆದರೆ ವಿಂಬಲ್ಡನ್ ಇದುವರೆಗೂ ಅವರಿಗೆ ಒಲಿದಿಲ್ಲ.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

25ನೇ ಕಿರೀಟದತ್ತ ಜೊಕೊವಿಚ್ ಚಿತ್ತ

ಜೊಕೊವಿಚ್

ವಿಶ್ವ ರ್‍ಯಾಂಕಿಂಗ್‌ನಲ್ಲಿ 5ನೇ ಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್ 25ನೇ ಗ್ರ್ಯಾನ್‌ಸ್ಲಾಮ್ ಜಯದ ಕನಸಿನೊಂದಿಗೆ ಕಣಕ್ಕಿಳಿಯಲಿದ್ದಾರೆ. ಅವರು ತಮ್ಮ ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಅಲೆಕ್ಸಾಂಡರ್ ಮ್ಯೂಲರ್ ಅವರನ್ನು ಎದುರಿಸಲಿದ್ದಾರೆ.

ಸರ್ಬಿಯಾದ ದಿಗ್ಗಜ ಆಟಗಾರ ಈ ಹಿಂದೆ ಏಳು ಬಾರಿ ವಿಂಬಲ್ಡನ್ ಕಿರೀಟ ಧರಿಸಿದ್ದಾರೆ. ಆದರೆ ಕಳೆದ ಎರಡು ವರ್ಷಗಳಿಂದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಬರ ಎದುರಿಸುತ್ತಿದ್ದಾರೆ.

ಟೂರ್ನಿಯ ಅಗ್ರ ಶ್ರೇಯಾಂಕದ ಆಟಗಾರರು

ಪುರುಷರು	ಮಹಿಳೆಯರು
1. ಯಾನಿಕ್ ಸಿನ್ನರ್	ಅರ್ಯೆನಾ ಸಬಲೆಂಕಾ
2. ಕಾರ್ಲೋಸ್ ಅಲ್ಕರಾಜ್	ಕೊಕೊ ಗಾಫ್
3. ಅಲೆಕ್ಸಾಂಡರ್ ಜ್ವೆರೇವ್	ಜೆಸಿಕಾ ಪೆಗುಲಾ
4. ಜ್ಯಾಕ್ ಡ್ರೇಪರ್	ಜಾಸ್ಮಿನ್ ಪಾವೊಲಿನಿ
5. ಟೇಲರ್ ಫ್ರಿಟ್ಝ್	ಝೆಂಗ್ ಕ್ವಿನ್‌ವೆನ್
6. ನೊವಾಕ್ ಜೊಕೊವಿಚ್	ಮ್ಯಾಡಿಸನ್ ಕೀಸ್
7. ಲೊರೆಂಝೊ ಮುಸೆಟ್ಟಿ	ಮಿರಾ ಆ್ಯಂಡ್ರೀವಾ
8. ಹೊಲ್ಗರ್ ರುನೆ	ಇಗಾ ಶ್ವಾಂಟೆಕ್
9. ಡೇನಿಯಲ್ ಮೆಡ್ವೆಡೆವ್	ಪೌಲಾ ಬಡೋಸಾ
10. ಬೆನ್ ಶೆಲ್ಟನ್	ಎಮಾ ನವೆರೊ

ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್

ಫೈನಲ್‌ಗೆ ಆಯುಷ್, ತನ್ವಿ

ಅಯೋವಾ, ಅಮೆರಿಕ (ಪಿಟಿಐ): ಗೆಲುವಿನ ಓಟ ಮುಂದುವರಿಸಿರುವ ಭಾರತದ ಭರವಸೆಯ ಆಟಗಾರರಾದ ಆಯುಷ್ ಶೆಟ್ಟಿ ಮತ್ತು ತನ್ವಿ ಶರ್ಮಾ ಅವರು ಭಾನುವಾರ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ನಾಲ್ಕನೇ ಶ್ರೇಯಾಂಕದ ಆಯುಷ್ ರೋಚಕ ಸೆಮಿಫೈನಲ್‌ನ ಹಣಾಹಣಿಯಲ್ಲಿ 21-23, 21-15, 21-14ರಿಂದ ಅಗ್ರ ಶ್ರೇಯಾಂಕದ ಚೌ ಟಿಯೆನ್ ಚೆನ್ (ಚೀನಾ ತೈಪೆ) ವಿರುದ್ಧದ ಸವಾಲನ್ನು ಗೆದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 32ನೇ ಸ್ಥಾನದಲ್ಲಿರುವ ಆಯುಷ್, ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಹೋರಾಟದಲ್ಲಿ ವಿಶ್ವದ ಆರನೇ ರ್‍ಯಾಂಕ್‌ನ ಆಟಗಾರನನ್ನು ಹಿಮ್ಮೆಟ್ಟಿಸಿದರು.

ಕರ್ನಾಟಕದ 20 ವರ್ಷ ವಯಸ್ಸಿನ ಆಯುಷ್ ಸೋಮವಾರ ನಡೆಯುವ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಬ್ರಯಾನ್ ಯಾಂಗ್ ಅವರನ್ನು ಎದುರಿಸಲಿದ್ದಾರೆ. ಕೆನಡಾದ ಬ್ರಯಾನ್ ಸೆಮಿಫೈನಲ್‌ನಲ್ಲಿ 21-10, 21-12ರಿಂದ ಚೀನಾ ತೈಪೆಯ ಲಿಯಾವೊ ಜುವೊ-ಫು ವಿರುದ್ಧ ಜಯಿಸಿದರು.

16 ವರ್ಷ ವಯಸ್ಸಿನ ಶ್ರೇಯಾಂಕರಹಿತ ಆಟಗಾರ್ತಿ ತನ್ವಿ ಮಹಿಳೆಯರ ಸಿಂಗಲ್ಸ್‌ನ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 21-14, 21-16ರಿಂದ ಏಳನೇ ಶ್ರೇಯಾಂಕದ ಪೊಲಿನಾ ಬುಹ್ರೋವಾ ಅವರಿಗೆ ಆಘಾತ ನೀಡಿದರು. ಭಾರತದ ಹದಿಹರೆಯದ ಆಟಗಾರ್ತಿಗೆ ವೃತ್ತಿಜೀವನದಲ್ಲಿ ಉಕ್ರೇನ್‌ನ ಬುಹ್ರೋವಾ ವಿರುದ್ಧ ಗಳಿಸಿದ ಎರಡನೇ ಗೆಲುವು ಇದಾಗಿದೆ. ಸೋಮವಾರ ನಡೆಯುವ ಪ್ರಶಸ್ತಿ ಸುತ್ತಿನಲ್ಲಿ ತನ್ವಿ, ಅಗ್ರ ಶ್ರೇಯಾಂಕದ ಬೀವೆನ್ ಜಾಂಗ್ (ಅಮೆರಿಕ) ವಿರುದ್ಧ ಪೈಪೋಟಿ ನಡೆಸುವರು.

ಗೆಲುವಿನ ಸಂಭ್ರಮದಲ್ಲಿ ತನ್ವಿ ಶರ್ಮಾ ಎಪಿ/ಪಿಟಿಐ ಚಿತ್ರ

ಮೈಸೂರು ತಂಡಕ್ಕೆ ಗೆಲುವು

ಬೆಂಗಳೂರು: ಶಕ್ತಿ (33) ಮತ್ತು ಕ್ಷಿತಿಜ್ (16) ಅವರ ಆಟದ ನೆರವಿನಿಂದ ಮೈಸೂರು ಜಿಲ್ಲಾ ಬಿ ತಂಡವು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸಿ ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 76–62ರಿಂದ ಕೈಗಾ ಬಿ.ಸಿ ಕಾರವಾರ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಲೀಗ್ ಹಂತದ ಪಂದ್ಯದಲ್ಲಿ ವಿರಾಮದ ವೇಳೆ ಆರು ಅಂಕಗಳ (36–30) ಮುನ್ನಡೆ ಪಡೆದಿದ್ದ ಮೈಸೂರು ತಂಡವು ಉತ್ತರಾರ್ಧದಲ್ಲೂ ಮೇಲುಗೈ ಸಾಧಿಸಿತು.

ಫಲಿತಾಂಶ: ಮೈಸೂರು ಜಿಲ್ಲೆ ಎ (ಚಂದನ್ 22, ಸಾಹಿಲ್ ಆಳ್ವ 17) 75–25 ಶಿವಮೊಗ್ಗ ಜಿಲ್ಲೆ (ಪ್ರಮೋದ್ 18) ವಿರುದ್ಧ; ಮೈಸೂರು ಜಿಲ್ಲೆ ಬಿ (ಶಕ್ತಿ 33, ಕ್ಷಿತಿಜ್ 16) 76–62ರಿಂದ ಕೈಗಾ ಬಿ.ಸಿ ಕಾರವಾರ (ಅರ್ಪಿತ್ 24, ರವಿರಾಜ್ 10) ವಿರುದ್ಧ; ಕೋಲಾರ ಜಿಲ್ಲೆ (ಭರತ್ 16) 47–21 ರಾಮನಗರ ಜಿಲ್ಲೆ (ಸೂರ್ಯ 16) ವಿರುದ್ಧ; ಧಾರವಾಡ ಜಿಲ್ಲೆ ಬಿ (ಅಭಿಷೇಕ್ 25, ರಮೇಶ್ 15) 63–59 ಚಿಕ್ಕಬಳ್ಳಾಪುರ ಜಿಲ್ಲೆ (ವೇಣು 17, ಪವನ್ 11) ವಿರುದ್ಧ; ಚಿಕ್ಕಮಗಳೂರು ಜಿಲ್ಲೆ (ರೆಹಾನ್ ಖಾನ್ 19) 65–55 ಹಾಸನ ಜಿಲ್ಲೆ (ಆದರ್ಶ್ 17) ವಿರುದ್ಧ; ಕೋಲಾರ ಜಿಲ್ಲೆ (ಭರತ್ 19, ಹೇಮಂತ್ 14) 71–44 ಚಾಮರಾಜನಗರ ಜಿಲ್ಲೆ (ಅಭಿಷೇಕ್ 20, ಯಶವಂತ್ 11) ವಿರುದ್ಧ ಗೆಲುವು.

ಪ್ರಶಸ್ತಿಯೊಂದಿಗೆ (ಎಡದಿಂದ) ಸಾತ್ವಿಕ್ ಎಂ, ಸಾಕ್ಷ್ಯಾ ಸಂತೋಷ್, ಅರ್ಣವ್ ಮಿಥುನ್ ಮತ್ತು ಯುಕ್ತಾ ಹರ್ಷಾ

ಯುಕ್ತಾ, ಸಾತ್ವಿಕ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಕ್ತಾ ಹರ್ಷ ಮತ್ತು ಸಾತ್ವಿಕ್ ಎಂ. ಅವರು ಕೆಜಿಎಸ್ ಕ್ಲಬ್ ಆಶ್ರಯದಲ್ಲಿ ಭಾನುವಾರ ನಡೆದ ಎರಡನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನವರ ಬಾಲಕಿಯರ ಮತ್ತು ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಬಾಲಕಿಯರ ಸಿಂಗಲ್ಸ್ ಫೈನಲ್ ನಲ್ಲಿ ಯುಕ್ತಾ 13-11, 11-5, 11-5ರಿಂದ ಕ್ರಿಶ್ ಪಿ. ಕರ್ಕೇರ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಕ್ರಿಶ್ 11-6, 11-6, 11-6ರಿಂದ ಮಹಿಕಾ ಆರ್. ಉಡುಪ ವಿರುದ್ಧ; ಯುಕ್ತಾ 11-9, 5-11, 11-4, 9-11, 11-7ರಿಂದ ಸಾಕ್ಷ್ಯಾ ಸಂತೋಷ್ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಸಾತ್ವಿಕ್ 11-3, 13-11, 11-4ರಿಂದ ಅರ್ಣವ್ ಮಿಥುನ್ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದಲ್ಲಿ ಸಾತ್ವಿಕ್ 9-11, 11-5, 11-2, 11-8ರಿಂದ ಸುಚೇತ್ ಸಿ. ಧರೆನ್ನವರ ಎದುರು; ಅರ್ಣವ್ 11-6, 6- 11, 11-9, 12-10ರಿಂದ ಅಂಕುಶ್ ಬಾಳಿಗಾ ಎದುರು ಜಯ ಸಾಧಿಸಿದ್ದರು.

ಹೋಪ್ಸ್ ಬಾಲಕರ ಫೈನಲ್‌ನಲ್ಲಿ ಅರ್ಣವ್ 13-15, 15-13, 11-5, 11-9ರಿಂದ ಶರ್ವಿಲ್ ಕರಂಬೇಲ್ಕರ ವಿರುದ್ಧ ಗೆದ್ದರು. ಸೆಮಿಫೈನಲ್ ನಲ್ಲಿ ಅರ್ಣವ್ 11-6, 11-5, 11-9ರಿಂದ ಧ್ರುವ್ ಮುಂಜಿ ವಿರುದ್ಧ; ಶರ್ವಿಲ್ 13-11, 11-8, 11-6ರಿಂದ ರೋಹನ್ ಅರ್ಜುನ್ ವಿರುದ್ಧ ಜಯಿಸಿದ್ದರು.

ಹೋಪ್ಸ್ ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯಾ ಸಂತೋಷ್ 11-5, 6-11, 11-4, 11-7ರಿಂದ ತಮನ್ನಾ ನೇರ್ಲಾಜೆ ಅವರನ್ನು ಮಣಿಸಿದರು. ನಾಲ್ಕರ ಘಟ್ಟದಲ್ಲಿ ಸಾಕ್ಷ್ಯಾ 11-1, 11-7, 11-4ರಿಂದ ತನ್ವಿ ಸಿಂಹ ವಿರುದ್ಧ; ತಮನ್ನಾ 11-5, 11-4, 7-11, 12-10ರಿಂದ ನಂದನಾ ಬಂಡಿ ವಿರುದ್ಧ ಜಯ ಗಳಿಸಿದ್ದರು.

ಚುಟುಕು ಸುದ್ದಿ

ಸಮರ್ಥ್ ರಾವ್‌ಗೆ ಬೆಳ್ಳಿ ಪದಕ



ಬೆಂಗಳೂರು: ಕರ್ನಾಟಕದ ಕ್ಯಾಂಡಿಡೇಟ್ ಮಾಸ್ಟರ್ ಸಮರ್ಥ್ ಜಗದೀಶ್ ರಾವ್ ಅವರು ಆಂಧ್ರ ಪ್ರದೇಶದ ವಿಝಿಯನಗರಂನಲ್ಲಿ ಶನಿವಾರ ಮುಕ್ತಾಯಗೊಂಡ 5ನೇ ರಾಷ್ಟ್ರೀಯ ವಿಶೇಷಚೇತನರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದುಕೊಂಡಿದ್ದಾರೆ.

ಹೊನ್ನಾವರ ಅಂಚೆ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮರ್ಥ್, ಇದೇ 25 ರಿಂದ 28ರವರೆಗೆ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ 9 ಸುತ್ತುಗಳಿಂದ 7 ಅಂಕ (5 ಗೆಲುವು, 4 ಡ್ರಾ) ಗಳಿಸಿ ಅಜೇಯರಾಗುಳಿದರು. 13 ರಾಜ್ಯಗಳ 101 ವಿಶೇಷಚೇತನ ಆಟಗಾರರು ಟೂರ್ನಿಯಲ್ಲಿ ಭಾಗವಹಿಸಿದ್ದರು.

ಈ ಹಿಂದೆ 2022 ಹಾಗೂ 2024 ರಲ್ಲಿ ಅವರು ಇದೇ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು.

ಅಂಜನಾಗೆ 3 ಪದಕ

ಬೆಂಗಳೂರು: ಕರ್ನಾಟಕದ ಅಂಜನಾ ಅವರು ಕೋಲ್ಕತ್ತದಲ್ಲಿ ಈಚೆಗೆ ಆಯೋಜಿಸಿದ್ದ ಒಂಬತ್ತನೇ ಓಪನ್ ರಾಷ್ಟ್ರೀಯ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಎರಡು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದಿದ್ದಾರೆ.

ರೋಲರ್ ಸ್ಕೇಟರ್ಸ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ಕೂಟದಲ್ಲಿ 12ರಿಂದ 15 ವರ್ಷದವರೆಗಿನ ವಯಸ್ಸಿನ ಬಾಲಕಿಯರ ವಿಭಾಗದಲ್ಲಿ 30ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

ಪರ್ಲಿನ್ ಸಾರಥ್ಯ

ಬೆಂಗಳೂರು: ಪರ್ಲಿನ್ ಪೊನ್ನಮ್ಮ ಎ.ಜಿ. ಅವರು ಜುಲೈ 3ರಿಂದ 14ರವರೆಗೆ ನಡೆಯಲಿರುವ 15ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಜಾರ್ಖಂಡ್‌ನ ರಾಂಚಿಯಲ್ಲಿ ನಡೆಯುವ ಟೂರ್ನಿಗೆ 17 ಆಟಗಾರ್ತಿಯರನ್ನು ಒಳಗೊಂಡ ಕರ್ನಾಟಕ ತಂಡವನ್ನು ಹಾಕಿ ಕರ್ನಾಟಕ ಭಾನುವಾರ ಪ್ರಕಟಿಸಿದೆ.

ತಂಡ ಹೀಗಿದೆ: ಪರ್ಲಿನ್ ಪೊನ್ನಮ್ಮ ಎ.ಜಿ. (ನಾಯಕಿ), ನಿಶಾ ಸಿ.ಜಿ., ತ್ರಿಶಾ ದೇಚಮ್ಮ, ಶೈಲು ಪ್ರಸಾದ್ ಎಂ., ನೀಲಮ್ಮ ಎನ್.ಆರ್., ಶಿಲ್ಪಾ ಮಡಿವಾಳಪ್ಪ ಕಣಜನವರ, ಬಸಮ್ಮ ಶಿವಪ್ಪ ಹುಗ್ಗೆನ್ನವರ, ಶ್ರುತಿ ಶ್ರೀಶೈಲ್ ಪೂಜಾರಿ, ಗ್ರೀಷ್ಮಾ ಪೊನ್ನಪ್ಪ ಪಿ., ಸಂಜನಾ ಶೇಷಪ್ಪ ಹುಗ್ಗೆನ್ನವರ, ಪೂರ್ವಿ ಪೂವಮ್ಮ ಕೆ.ಎ., ಅಂಕಿತಾ, ಕೃತಿಕಾ ಎಂ.ಎಲ್., ಜೀವಿತಾ ಎಚ್.ಎನ್., ಧನ್ಯಾ ಕಾವೇರಮ್ಮ ಸಿ.ಯು., ಪ್ರಿನ್ಸಿಯಾ ಆಗ್ನೇಶ್ ಎಸ್., ವಿದ್ಯಾ ಪೂವಮ್ಮ ಎಂ.ಯು. ನಾಗಲಿಂಗಸ್ವಾಮಿ ಬಿ. (ಕೋಚ್), ರಾಖಿ ಪೂವಣ್ಣ (ಮ್ಯಾನೇಜರ್).

ಕ್ರಿಕೆಟ್: ಜಿಂಬಾಬ್ವೆ ಎದುರು ದಕ್ಷಿಣ ಆಫ್ರಿಕಾ ತಂಡಕ್ಕೆ ಭಾರಿ ಮುನ್ನಡೆ

ಕೇಶವ್ ಮಹಾರಾಜ್ ವಿಕೆಟ್ ದ್ವಿಶತಕ

ಬುಲವಾಯೊ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ಹಂಗಾಮಿ ನಾಯಕ ಕೇಶವ್ ಮಹಾರಾಜ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 200 ವಿಕೆಟ್ ಗಳಿಸಿದರು. ಈ ಸಾಧನೆ ಮಾಡಿದ ದಕ್ಷಿಣ ಆಫ್ರಿಕಾ ತಂಡದ ಮೊದಲ ಸ್ಪಿನ್ನರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಜಿಂಬಾಬ್ವೆ ಎದುರು ಇಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನಲ್ಲಿ ಅವರು ಮೂರು ವಿಕೆಟ್ ಪಡೆದರು. ಅವರ ಮತ್ತು ವಿಯಾನ್ ಮಲ್ದರ್ (50ಕ್ಕೆ4) ಅಮೋಘ ಬೌಲಿಂಗ್ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 167 ರನ್‌ಗಳ ಮುನ್ನಡೆ ಸಾಧಿಸಿತು.

ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 418 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಜಿಂಬಾಬ್ವೆ 67.4 ಓವರ್‌ಗಳಲ್ಲಿ 251 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆತಿಥೇಯ ತಂಡದ ಸೀನ್ ವಿಲಿಯಮ್ಸ್ (137; 164ಎ, 4X16) ಶತಕ ಹೊಡೆದರು. ಅವರ ಏಕಾಂಗಿ ಹೋರಾಟಕ್ಕೆ ಇನಿಂಗ್ಸ್ ಮುನ್ನಡೆಯ ಫಲ ದೊರೆಯಲಿಲ್ಲ.

ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡವು ಎರಡನೇ ದಿನದಾಟದ ಮುಕ್ತಾಯಕ್ಕೆ 13 ಓವರ್‌ಗಳಲ್ಲಿ 1 ವಿಕೆಟ್‌ಗೆ 49 ರನ್ ಗಳಿಸಿತು. ಇದರೊಂದಿಗೆ ಒಟ್ಟು 216 ರನ್ ಮುನ್ನಡೆ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 90 ಓವರ್‌ಗಳಲ್ಲಿ 9ಕ್ಕೆ418. ಜಿಂಬಾಬ್ವೆ: 67.4 ಓವರ್‌ಗಳಲ್ಲಿ 251 (ಸೀನ್ ವಿಲಿಯಮ್ಸ್ 137, ಕ್ರೇಗ್ ಇರ್ವಿನ್ 36, ಕೊಡಿ ಯೂಸುಫ್ 42ಕ್ಕೆ3, ವಿಯಾನ್ ಮಲ್ದರ್ 50ಕ್ಕೆ4, ಕೇಶವ್ ಮಹಾರಾಜ್ 70ಕ್ಕೆ3) ಎರಡನೇ ಇನಿಂಗ್ಸ್: 13 ಓವರ್‌ಗಳಲ್ಲಿ 1 ವಿಕೆಟ್‌ಗೆ 49 (ಟೋನಿ ಡಿ ಝೂರ್ಜಿ ಬ್ಯಾಟಿಂಗ್ 22, ವಿಯಾನ್ ಮಲ್ದರ್ ಬ್ಯಾಟಿಂಗ್ 25)

ಕೇಶವ್ ಮಹಾರಾಜ್ ಸಂಭ್ರಮ ಎಎಫ್‌ಪಿ ಚಿತ್ರ

ಟೆಟೆ ಬಳಗಕ್ಕೆ ಸತತ ಎಂಟನೇ ಸೋಲು

ಬರ್ಲಿನ್ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್‌ನಿಂದ ಈಗಾಗಲೇ ಹಿಂಬಡ್ತಿ ಪಡೆದಿರುವ ಭಾರತ ಮಹಿಳಾ ಹಾಕಿ ತಂಡವು ಭಾನುವಾರ ನಡೆದ ತನ್ನ ಕೊನೆಯ ಪಂದ್ಯದಲ್ಲಿ ಚೀನಾ ವಿರುದ್ಧ 2-3 ಗೋಲುಗಳಿಂದ ಪರಾಭವಗೊಂಡಿತು. ಇದು ಭಾರತ ತಂಡಕ್ಕೆ ಯುರೋಪಿಯನ್ ಲೆಗ್‌ನಲ್ಲಿ ಸತತ ಎಂಟನೇ ಸೋಲು.

ಸಲೀಮಾ ಟೆಟೆ ಬಳಗವು 16 ಪಂದ್ಯಗಳಿಂದ 10 ಅಂಕಗಳೊಂದಿಗೆ ಒಂಬತ್ತು ತಂಡಗಳ ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿದೆ. ಹೀಗಾಗಿ, ಮುಂದಿನ ವರ್ಷ ಎಫ್‌ಐಎಚ್‌ನ ಎರಡನೇ ಸ್ತರವಾದ ಎಫ್‌ಐಎಚ್ ನೇಷನ್ಸ್ ಕಪ್‌ನಲ್ಲಿ ಆಡಬೇಕಾಗಿದೆ.

ಭಾರತದ ಪರ ಸುನೆಲಿಟಾ ಟೊಪ್ಪಾ (9ನೇ ನಿಮಿಷ) ಮತ್ತು ರುತುಜಾ ದಾದಾಸೊ ಪಿಸಾಲ್ (38ನೇ ನಿಮಿಷ) ಗೋಲು ಗಳಿಸಿದರು. ಎದುರಾಳಿ ತಂಡದ ಪರ ಜಾಂಗ್ ಯಿಂಗ್ (19ನೇ ಮತ್ತು 39ನೇ ನಿಮಿಷ) ಎರಡು ಪೆನಾಲ್ಟಿ ಕಾರ್ನರ್ ಗಳನ್ನು ಗೋಲಾಗಿ ಪರಿವರ್ತಿಸಿದರು. ಕ್ಸು ವೆನ್ಯು (53ನೇ) ನಿರ್ಣಾಯಕ ಗೋಲು ದಾಖಲಿಸಿದರು.

ಭಾರತದ ನಾಯಕಿ ಸಲೀಮಾ ಟೆಟೆ

'ಬೂಮ್ರಾ ಮೇಲೆ ಅತಿ ಅವಲಂಬನೆ'

ಅಜರುದ್ದೀನ್

ಹೈದರಾಬಾದ್ (ಪಿಟಿಐ): ಭಾರತ ಕ್ರಿಕೆಟ್ ತಂಡವು ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಮೇಲೆ ವಿಪರೀತ ಅವಲಂಬಿತವಾಗಿದೆ. ಮುಂಬರುವ ಎಜ್‌ಬಾಸ್ಟನ್ ಟೆಸ್ಟ್‌ನಲ್ಲಿ ತಂಡವು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನು ಕಣಕ್ಕಿಳಿಸಬೇಕು ಎಂದು ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಅಭಿಪ್ರಾಯಪಟ್ಟಿದ್ದಾರೆ.

ಲೀಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಭಾರತ 5 ವಿಕೆಟ್‌ಗಳಿಂದ ಸೋತಿತ್ತು. ಆ ಪಂದ್ಯದಲ್ಲಿ ಭಾರತ ವಿಕೆಟ್ ಗಳಿಕೆ ಮತ್ತು ರನ್ ನಿಯಂತ್ರಣಕ್ಕೆ ಬೂಮ್ರಾ ಅವರ ಮೇಲೆ ಅವಲಂಬಿತವಾಗಿದ್ದು ಎದ್ದು ಕಂಡಿತ್ತು. ಈ ಕುರಿತು ಪಿಟಿಐ ವಿಡಿಯೊಸ್ ನಲ್ಲಿ ಮಾತನಾಡಿರುವ ಅವರು, 'ಬೂಮ್ರಾ ಅವರ ಮೇಲೆ ಅತಿಯಾದ ಅವಲಂಬನೆ ಸಲ್ಲದು. ಅನುಭವಿ ಬೌಲರ್‌ಗಳ ಅಗತ್ಯ ತಂಡಕ್ಕಿದೆ. ಆದ್ದರಿಂದ ಕುಲದೀಪ್ ಯಾದವ್ ಅವರನ್ನು ಆಡಿಸುವುದು ಸೂಕ್ತ. ಅದರಿಂದ ತಂಡದಲ್ಲಿ ಸಮತೋಲನ ಕಾಪಾಡಿಕೊಳ್ಳಬಹುದು' ಎಂದರು.

'ಬ್ಯಾಟರ್‌ಗಳ ಕುಸಿತವೂ ಮೊದಲ ಪಂದ್ಯದ ಸೋಲಿಗೆ ಒಂದು ಕಾರಣ. ಆದ್ದರಿಂದ ಸೂಕ್ತ ಆಟಗಾರರನ್ನು ಆಯ್ಕೆ ಮಾಡುವುದು ಮುಖ್ಯ. ಬೌಲಿಂಗ್ ವಿಭಾಗವು ಕರಾರುವಾಕ್ ಆಗಿರಬೇಕು' ಎಂದು 62 ವರ್ಷದ ಅಜರುದ್ದೀನ್ ಹೇಳಿದರು.

'ಶುಭಮನ್ ಗಿಲ್ ಅವರು ನಾಯಕರಾಗಿ ಆಡಿದ ಮೊದಲ ಪಂದ್ಯ ಇದು. ಅವರ ನಾಯಕತ್ವದ ಕುರಿತು ಈಗಲೇ ಮಾತನಾಡುವುದು ಸಲ್ಲದು. ಅವರಿಗೆ ಇನ್ನೂ ಅವಕಾಶಗಳನ್ನು ನೀಡಬೇಕು. ಬಹಳಷ್ಟು ಸಮಯ ಮತ್ತು ಬೆಂಬಲ ಕೊಡಬೇಕು. ಸುಮ್ಮನೇ ದೂರುವುದು ಅಥವಾ ಟೀಕಿಸುವುದನ್ನು ಮಾಡಬಾರದು' ಎಂದರು.

ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ತುಷಾರ್, ಶೈನಾಗೆ ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಷಾರ್ ಸುವೀರ್ ಮತ್ತು ಶೈನಾ ಮಣಿಮುತ್ತು ಅವರು ಭಾನುವಾರ ಇಲ್ಲಿ ನಡೆದ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳ ಪ್ರಶಸ್ತಿ ಜಯಿಸಿದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ)ಯಲ್ಲಿ ನಡೆದ ಟೂರ್ನಿಯಲ್ಲಿ ತುಷಾರ್ ಅವರು ಪುರುಷರ ಫೈನಲ್‌ನಲ್ಲಿ 22–20, 21–19ರಿಂದ ಐದನೇ ಶ್ರೇಯಾಂಕದ ನಿಕೋಲಸ್ ರಾಜ್ ವಿರುದ್ಧ ಗೆದ್ದರು. ಮೊದಲ ಗೇಮ್‌ನಲ್ಲಿ ಉಭಯ ಆಟಗಾರರು ಭಾರಿ ಪೈಪೋಟಿ ನಡೆಸಿದರು. ಅದರಿಂದಾಗಿ ಗೇಮ್ ಫಲಿತಾಂಶವು ಟೈಬ್ರೇಕರ್‌ನಲ್ಲಿ ಹೊರಹೊಮ್ಮಿತು.

ಬೆಂಗಳೂರು ಗ್ರಾಮಾಂತರ ವಿಭಾಗದ ಆಟಗಾರ ತುಷಾರ್ ಎರಡನೇ ಗೇಮ್‌ನಲ್ಲಿ ಚುರುಕಾಗಿ ಆಡಿದರು. 21–19ರಿಂದ ನಿಕೋಲಸ್ ಪೈಪೋಟಿಯನ್ನು ಮೀರಿ ನಿಂತರು.

ಮಹಿಳೆಯರ ವಿಭಾಗದ ಫೈನಲ್ ರೋಚಕವಾಗಿತ್ತು. ಶೈನಾ ಮಣಿಮುತ್ತು 15-21, 27-25, 21-15 ರಿಂದ ಅಶ್ವತಿ ವರ್ಗೀಸ್ ವಿರುದ್ಧ ಗೆದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಭಟ್–ಶಿಖಾ ಗೌತಮ್ 21–10, 21–8ರಿಂದ ಗ್ಲೋರಿಯಾ ಅಠಾವಳೆ ಮತ್ತು ಪ್ರೇರಣಾ ಎನ್‌ಎಸ್ ಜೋಡಿಯನ್ನು ಸೋಲಿಸಿದರು.

ಬೆಂಗಳೂರಿನ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಲ್ಲಿ ಭಾನುವಾರ ಮುಕ್ತಾಯವಾದ ರಾಜ್ಯ ಸೀನಿಯರ್ ಮತ್ತು ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವರು

ಮಿಶ್ರ ಡಬಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಪ್ರಕಾಶ್ ರಾಜ್ ಎಸ್ ಮತ್ತು ಕರ್ಣಿಕಾ ಶ್ರೀ ಜೋಡಿಯು 18-21, 21-11, 21-16 ರಿಂದ ಕಿಶಾಲ್ ಗಣಪತಿ ಮತ್ತು ರಶ್ಮಿ ಗಣೇಶ್ ವಿರುದ್ಧ ಗೆದ್ದರು.

ಪುರುಷರ ಡಬಲ್ಸ್‌ನಲ್ಲಿ ಎಸ್. ಪವನ್–ಎಸ್ ಪುನೀತ್ 17-21, 22-20, 21-14ರಿಂದ ಅಮಿತ್ ರಾಜ್ ನಟರಾಜ್–ಹಾರ್ದಿಕ್ ದಿವ್ಯಾಂಶ್ ಜೋಡಿಯ ವಿರುದ್ಧ ಮೇಲುಗೈ ಸಾಧಿಸಿದರು.

ಜೂನಿಯರ್ ಬಾಲಕಿಯರ ಸಿಂಗಲ್ಸ್‌ನಲ್ಲಿ ಶೈನಾ ಮಣಿಮುತ್ತು 21-10, 21-15 ರಿಂದ ಹಿತೈಶ್ರೀ ಎಲ್ ರಾಜಯ್ಯ ವಿರುದ್ಧ ಗೆದ್ದರು. ಡಬಲ್ಸ್‌ನಲ್ಲಿ ಅಶ್ವತಿ ವರ್ಗೀಸ್–ಲಕ್ಷ್ಯ ರಾಜೇಶ್ 21–17, 21–8ರಿಂದ ಇಶಿಕಾ ಬರುವಾ ಕಶ್ಯಪ್–ತನಿಕಾ ಮೋಹನ್ ವಿರುದ್ಧ ಗೆದ್ದರು.

ಮಿಶ್ರ ಡಬಲ್ಸ್‌ನಲ್ಲಿ ಎಸ್. ನಿಶ್ಚಲ್–ಸುಹೈನಾ ರಾಯ್ 15-21, 21-18, 21-12 ರಿಂದ ಕ್ರಿಸ್ ಬ್ಯಾಪ್ಟಿಸ್ಟ್ ಮತ್ತು ಎ.ಎಸ್. ಮೌನಿತಾ ವಿರುದ್ಧ ಜಯಿಸಿದರು.

ಚೆನ್ನೈ ಬುಲ್ಸ್ ಚಾಂಪಿಯನ್

ಎಎಫ್‌ಪಿ ಚಿತ್ರ

ಚೆನ್ನೈ ಬುಲ್ಸ್ ತಂಡವು ಭಾರತದ ಚೊಚ್ಚಲ ರಗ್ಬಿ ಪ್ರೀಮಿಯರ್ ಲೀಗ್ (ಆರ್‌ಪಿಎಲ್) ಪ್ರಶಸ್ತಿಯನ್ನು ಗೆದ್ದುಕೊಂಡಿತು. ಮುಂಬೈನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಚೆನ್ನೈ ತಂಡವು 41–0 ಅಂತರದಿಂದ ಡೆಲ್ಲಿ ರೆಡ್ಸ್ ತಂಡವನ್ನು ಮಣಿಸಿತು. ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಿದ್ದವು

ಜುಲೈ 8ರೊಳಗೆ ವ್ಯಾಪಾರ ಒಪ್ಪಂದ ಸಾಧ್ಯತೆ ಕಡಿಮೆ

ಒಂದನೇ ಪುಟದಿಂದ...

ಕೃಷಿ ಕ್ಷೇತ್ರವು ರಾಜಕೀಯವಾಗಿ ಮತ್ತು ಆರ್ಥಿಕವಾಗಿಯೂ ಭಾರತದಲ್ಲಿ ಬಹಳ ಸೂಕ್ಷ್ಮ ವಿಚಾರ. ಗ್ರಾಮೀಣ ಆರ್ಥಿಕತೆಯ ಮುಖ್ಯ ಭಾಗವೂ ಆಗಿರುವ ಕೃಷಿ ಕ್ಷೇತ್ರದ ವಿಚಾರವಾಗಿ ರಾಜಿ ಮಾಡಿಕೊಂಡಲ್ಲಿ, ಅದು ಗ್ರಾಮೀಣ ಭಾಗದ ಶೇ 70ರಷ್ಟು ಜನರ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿ ಅಮೆರಿಕದ ಒತ್ತಡಕ್ಕೆ ಭಾರತ ಮಣಿಯುವ ಸಾಧ್ಯತೆಗಳು ಕಡಿಮೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಇನ್ನೊಂದೆಡೆ, 'ಭಾರತ ಮತ್ತು ಅಮೆರಿಕ ದೊಡ್ಡ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಮಧ್ಯೆ, ವಾಣಿಜ್ಯ ಇಲಾಖೆ ವಿಶೇಷ ಕಾರ್ಯದರ್ಶಿ ಹಾಗೂ ಮುಖ್ಯ ಸಂಧಾನಕಾರರಾದ ರಾಜೇಶ್ ಅಗರವಾಲ್ ನೇತೃತ್ವದ ನಿಯೋಗವು ಅಮೆರಿಕದಲ್ಲಿದ್ದು, ವ್ಯಾಪಾರ ಒಪ್ಪಂದ ಕುರಿತಂತೆ ಮಾತುಕತೆ ನಡೆಸುತ್ತಿರುವುದು ಗಮನಾರ್ಹ.

ಜುಲೈ ಕೊನೆಗೆ ಜಾತಿ ಸಮೀಕ್ಷೆ ವರದಿ

ಒಂದನೇ ಪುಟದಿಂದ...

ಈ ಜಾತಿಯವರು ತಮ್ಮ ಉಪ ಜಾತಿಯ ಹೆಸರಿನಲ್ಲಿಯೇ ಜಾತಿ ಪ್ರಮಾಣಪತ್ರ ಪಡೆದಿರುವುದು ಸಮೀಕ್ಷೆಯ ವೇಳೆ ಗಮನಕ್ಕೆ ಬಂದಿದೆ. ಇನ್ನೂ ಕೆಲವರಿಗೆ ತಮ್ಮ ಮೂಲ ಜಾತಿ ಗೊತ್ತಿದ್ದರೂ ಉಪ ಜಾತಿಯ ಹೆಸರು ಸಾಮಾಜಿಕವಾಗಿ ಅವಮಾನ ಹುಟ್ಟಿಸುವ ಪದಗಳು ಎನ್ನುವುದೂ ಸೇರಿದಂತೆ ನಾನಾ ಕಾರಣಗಳಿಗೆ ಹೇಳಿಕೊಳ್ಳಲು ನಿರಾಕರಿಸಿದ್ದಾರೆ. ಅಂಥವರು ಎಕೆ, ಎಡಿ, ಎಎ ಎಂದೇ ಸಮೀಕ್ಷಾ ವರದಿಯಲ್ಲಿ ಮುಂದುವರಿಯುವ ಸಾಧ್ಯತೆ ಇದೆ' ಎಂದೂ ಮೂಲಗಳು ತಿಳಿಸಿವೆ.

ಜುಲೈ 4ರಂದು 'ನಾಡ ಉಳಿಸಿ ಸಮಾವೇಶ'

ಒಂದನೇ ಪುಟದಿಂದ...

ದೇವನಹಳ್ಳಿಯ ಭೂ ಸ್ವಾಧೀನ ವಿರುದ್ಧದ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲ ವ್ಯಕ್ತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಹೋರಾಟಗಾರರೊಂದಿಗೆ ಸಭೆ ನಡೆಸುವ ಆಶ್ವಾಸನೆ ನೀಡಿದ್ದಾರೆ. ಈ ನಡುವೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಪತ್ರಿಕೆಯಲ್ಲಿ ಲೇಖನ ಬರೆದು ತಮ್ಮ ನಿಲುವು ಸಮರ್ಥಿಸಿಕೊಂಡಿದ್ದಾರೆ. ಇದನ್ನು ಗಮನಿಸಿದರೆ, ಜುಲೈ 4ರ ಸಭೆ ಮತ್ತೊಂದು ಮರೀಚಿಕೆಯಾಗುವ ಸಾಧ್ಯತೆ ಇದೆ' ಎಂದು ಸಂಯುಕ್ತ ಹೋರಾಟ ಕರ್ನಾಟಕದ ಮುಖಂಡರು ಶಂಕೆ ವ್ಯಕ್ತಪಡಿಸಿದರು.

'ಜುಲೈ 4ರಂದು ರೈತ ಮುಖಂಡರೊಂದಿಗೆ ನಡೆಯುವ ಸಭೆಯಲ್ಲಿ ಭೂ ಸ್ವಾಧೀನ ಕೈಬಿಡುವಂತಹ ಸಕಾರಾತ್ಮಕ ತೀರ್ಮಾನವನ್ನು ಮುಖ್ಯಮಂತ್ರಿ ತೆಗೆದುಕೊಂಡರೆ, ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿ ಇಲ್ಲಿಂದ ಹೊರಡುತ್ತೇವೆ. ಒಂದು ವೇಳೆ ಮತ್ತೊಮ್ಮೆ ನ್ಯಾಯ ನಿರಾಕರಣೆಯಾದರೆ ಅದೇ ದಿನ ಇನ್ನಷ್ಟು ಕಠಿಣ ಹೋರಾಟದ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದು ಎಚ್ಚರಿಸಿದರು.

ಹೋರಾಟ ಸಮಿತಿಯ ಪರವಾಗಿ ಕರ್ನಾಟಕ ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ, ಕರ್ನಾಟಕ ಜನಶಕ್ತಿ ಸಂಘಟನೆಯ ನೂರ್ ಶ್ರೀಧರ್, ಸಿಐಟಿಯುನ ಎಸ್. ವರಲಕ್ಷ್ಮಿ, ದಲಿತ ಸಂಘರ್ಷ ಸಮನ್ವಯ ಸಮಿತಿಯ ವಿ.ನಾಗರಾಜು, ಕೆಪಿಆರ್‌ಎಸ್‌ನ ಯು.ಬಸವರಾಜು ಮತ್ತು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಕಾರಳ್ಳಿ ಶ್ರೀನಿವಾಸ್ ಸುದ್ದಿಗೋಷ್ಠಿಯಲ್ಲಿ ಇದ್ದರು.

'ವಿಶೇಷ ಕಾರ್ಯಸೂಚಿ ಆಗಬೇಕು'

'ಜುಲೈ 2ರಂದು ನಂದಿ ಬೆಟ್ಟದಲ್ಲಿ ನಡೆಯುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ದೇವನಹಳ್ಳಿ ಭೂ ಸಮಸ್ಯೆ ವಿಶೇಷ ಕಾರ್ಯಸೂಚಿ ಆಗಬೇಕು. ದೇವನಹಳ್ಳಿಯ ಮೂಲಕವೇ ನಂದಿಬೆಟ್ಟಕ್ಕೆ ಹೋಗುವ ಸಚಿವರು ಬರಿಗೈಯಲ್ಲಿ ಬಾರದಿರಲಿ' ಎಂದು ಮುಖಂಡರು ಮನವಿ ಮಾಡಿದರು.

'ದೇವನಹಳ್ಳಿ ವಿವಾದದ ನಿಜವಾದ ಚಿತ್ರಣ ಬಹುತೇಕ ಸಚಿವರು ಮತ್ತು ಶಾಸಕರಿಗೆ ಸ್ಪಷ್ಟವಾಗಿಲ್ಲ. ಹಾಗಾಗಿ, ಹೋರಾಟಗಾರರು ಆಯಾ ಜಿಲ್ಲೆಗಳ ಸಚಿವರು ಮತ್ತು ಶಾಸಕರನ್ನು ಭೇಟಿಯಾಗಿ ಮಾಹಿತಿ ನೀಡಿ, ರೈತಪರ ನಿಲುವು ತೆಗೆದುಕೊಳ್ಳುವಂತೆ ಮನವೊಲಿಸಲು ಕೋರಿದರು.